ಶ್ರೀ ಕೋಣಂದೂರು ಲಿಂಗಪ್ಪ.—ಮತ್ತೊಂದು ವಿಷಯ. ನಮ್ಮಲ್ಲಿ ಮಳೆ ಬಾರದೆ ರೈತರಿಗೆ ತೊಂದರೆಯಾಗಿರುವ ಬಗ್ಗೆ ಮತ್ತೊಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು.—ಮೊದಲು ಮಾನ್ಯ ಸದಸ್ಯರ ನೋಟೀಸ್ ಬರಲಿ, ಅನಂತರ ಪರಿಶೀಲನೆ ಮಾಡೋಣ.

Revised Budget Estimates for 1972-73

General Discussion

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಇಂದು ಸಭೆಯ ಮುಂದೆ ಇರತಕ್ಕ ಸಮಗ್ರ ಆಯವ್ಯಯ ಪತ್ರದ ಬಗ್ಗೆ ಮಾತನಾಡುವುದಕ್ಕೆ ಮುಂಚೆ ನನಗೆ ಕೆಲವು ವಿವರಣೆಗಳು ಬೇಕಾಗಿವೆ. ಆದರೆ ಮಾನ್ಯ ಹಣಕಾಸಿನ ಮಂತ್ರಿಗಳು ಇಲ್ಲಿ ಇಲ್ಲ. ಆ ಇಲಾಖೆಗೆ ಸಂಬಂಧಪಟ್ಟ ರಾಜ್ಯ ಸಚಿವರಾದರೂ ನಾನು ಕೇಳುವ ವಿಷಯಗಳಿಗೆ ವಿವರಗಳನ್ನು ಕೊಟ್ಟರೂ ಸಾಕು.

ಕಳೆದ ಮಾರ್ಚಿ ತಿಂಗಳಿನಲ್ಲಿ ವೋಟ್ ಆನ್ ಅಕೌಂಟನ್ನು ಸಭೆಯ ಮುಂದೆ ಮಂಡಿಸಿದರು. ಈ ದಿವಸ ಸಮಗ್ರ ಆಯವ್ಯಯ ಪತ್ರವನ್ನು ಮಂಡಿಸಿದ್ದಾರೆ. ಈ ಸಂದರ್ಭದಲ್ಲಿ ನಾನು ಕೆಲವು ವಿವರಣೆ ಕೇಳಬೇಕಾಗಿದೆ. ಅಂದು ನಮ್ಮ ರಾಜ್ಯ ಸುಮಾರು 71 ಕೋಟಿ ರೂಪಾಯಿಗಳ ಓವರ್ ಡ್ರಾಫ್ಟನ್ನು ಹೊಂದಿತ್ತು ಎನ್ನುವುದನ್ನು ಉಲ್ಲೇಖ ಮಾಡಿದ್ದಾರೆ. ಈ ಹೊತ್ತು ಅದನ್ನೆಲ್ಲ ತೀರಿಸಿದ್ದೇವೆಂದೂ, ಇನ್ನೂ ಸ್ವಲ್ಪ ಸರ್‌ಪ್ಲಸ್ ಇಟ್ಟಿದ್ದೇವೆಂದೂ ಕೂಡ ಹೇಳಿದ್ದಾರೆ. 71 ಕೋಟಿ ರೂಪಾಯಿಗಳ ಓವರ್ ಡ್ರಾಫ್ಟನ್ನು ತೀರಿಸಿದ ಬಗೆ ಹೇಗೆ? ಇದನ್ನು ತೀರಿಸತಕ್ಕ ಕಾಲದಲ್ಲಿ ಏನಾದರೂ ಮೆಸ್ಮೆರಿಸಂ ಆಗಿದ್ದರೆ ಸಂತೋಷ. ಎರಡು ತಿಂಗಳಲ್ಲಿ ಓವರ್‌ಡ್ರಾಫ್ಟ್ ಕ್ಲಿಯರ್ ಮಾಡಿ, ಸ್ವಲ್ಪ ಸರ್‌ಪ್ಲಸ್ ಹಣವನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಕೇಂದ್ರ ಸರ್ಕಾರದಿಂದ ತರತಕ್ಕ ಕಾಲದಲ್ಲಿ ಅವರು ಅದನ್ನು ಗ್ರಾಂಟ್ ರೂಪದಲ್ಲಿ ಕೊಟ್ಟಿದ್ದಾರೆಯೇ, ಸಾಲವಾಗಿ ಕೊಟ್ಟಿದ್ದಾರೆಯೇ? 71 ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ತೀರಿಸಬೇಕಾದ ಸಂಕಟದಲ್ಲಿದ್ದೀರಿ, ನಮ್ಮ ಪಕ್ಷವೇ ಅಧಿಕಾರಕ್ಕೆ ಬಂದಿರುವುದರಿಂದ ಹಿಂದಿನವರು ಮಾಡಿದ ಹೊರೆಯನ್ನು ತೀರಿಸಿಕೊಳ್ಳಿ ಎಂದು ಪುಕ್ಕಟೆಯಾಗಿ ಕೊಟ್ಟಿದ್ದಾರೆಯೇ ಅಥವಾ ಹೇಗೆ ಕೊಟ್ಟಿದ್ದಾರೆ ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಕೊಡತಕ್ಕ ಕಾಲದಲ್ಲಿ ನಮ್ಮ ರಾಜ್ಯಕ್ಕೆ ಬರತಕ್ಕ ಅಭಿವೃದ್ಧಿ ಕಾರ್ಯಗಳಿಗೆ ಹಣ ಖೋತಾ ಆಗುವುದಾದರೆ, ಅದಕ್ಕೆ ನೀವು ಒಪ್ಪಿಗೆಯನ್ನು ಕೊಟ್ಟಿರುವುದಾದರೆ ನಾವು ಅದಕ್ಕೆ ಪ್ರತಿಭಟನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ವಿವರಣೆ ಕೊಡಬೇಕೆಂದು ಕೇಳುತ್ತಿದ್ದೇನೆ. 71 ಕೋಟಿ ರೂಪಾಯಿಗಳ ಓವರ್‌ಡ್ರಾಫ್ಟನ್ನು ತೀರಿಸುವುದಕ್ಕೆ ಕೇಂದ್ರ ಸರ್ಕಾರ ಕೊಟ್ಟಿರತಕ್ಕ ನೆರವು ಯಾವ ರೂಪದಲ್ಲಿ ಬಂದಿದೆನ್ನುವುದನ್ನು ದಯಮಾಡಿ ವಿಶದೀಕರಿಸಿದರೆ ಒಳ್ಳೆಯದು ಎನ್ನುವ ದೃಷ್ಟಿಯಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ನನಗೆ ಗೊತ್ತಿರುವ ಪ್ರಕಾರ ಕೇಂದ್ರ ಸರ್ಕಾರದವರು ಸಾಲವಾಗಿ ಕೊಟ್ಟಿದ್ದಾರೆಂದು ಕೇಳಿದ್ದೇನೆ, ತಾತ್ಕಾಲಿಕವಾದ ಸಾಲ, ಟೆಂಪೊರರಿ ಅಡ್ಜಸ್ಟ್‌ಮೆಂಟ್ಸ್ ಎಂದು ಕೇಳಿದ್ದೇನೆ. ನಮ್ಮ ಮುಖ್ಯ ಮಂತ್ರಿಗಳು ಮತ್ತು ಅರ್ಥ ಸಚಿವರು ಈ ಹಣವನ್ನು ಪಡೆಯುವಾಗ ರಾಜ್ಯಕ್ಕೆ ಬೇಕಾದ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಕಡಮೆ ಮಾಡುವುದಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆಂದು ನನಗೆ ಬಂದಿರುವ ವರದಿಯಿಂದ ಗೊತ್ತಾಗಿದೆ. ಮಾನ್ಯ ಮಂತ್ರಿಗಳು ನನಗೆ ಬಂದಿರುವ ವರದಿ ಸರಿಯಿಲ್ಲವೆಂದರೆ ಅದರ ಬಗ್ಗೆ ನಾನು ವಾದಮಾಡುವುದಕ್ಕೆ ಹೋಗುವುದಿಲ್ಲ. ಸ್ಪಷ್ಟೀಕರಣ ಬೇಕು ಎಂದು ಮಾತ್ರ ಕೇಳುತ್ತಿದ್ದೇನೆ. ಒಂದು ವೇಳೆ ಒಪ್ಪಿಕೊಂಡರೆ, ಅದರಿಂದ ರಾಜ್ಯದಲ್ಲಿನ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುವುದಕ್ಕೆ ಈ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಬಹುಶಃ ಮೈಸೂರು ರಾಜ್ಯದಲ್ಲಿದ್ದ ಸಿಂಡಿಕೇಟ್ ಸರ್ಕಾರ 71 ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ಮಾಡಿತ್ತು, ಹಿಂದಿನವರು ಪಾಪ ಮಾಡಿದ್ದಾರೆ, ಅದನ್ನು ತೀರಿಸುವುದಕ್ಕೆ ಕೊಟ್ಟಿದ್ದಾರೆಂದರೆ ಅವರ ಪಕ್ಕದಲ್ಲಿರುವ ಆಂಧ್ರ ಸರ್ಕಾರದ ಓವರ್‌ಡ್ರಾಫ್ಟ್ ಎಷ್ಟು, ಮಹಾರಾಷ್ಟ್ರ ಸರ್ಕಾರ ಮಾಡಿರುವ ಓವರ್‌ಡ್ರಾಫ್ಟ್ ಎಷ್ಟು? ಹಣಕಾಸಿನ ಮಂತ್ರಿಗಳು ಅಂಕಿ

(ಶ್ರೀ ಎಚ್. ಡಿ. ದೇವೇಗೌಡ)

ಅಂಶಗಳನ್ನು ಕೊಡುವುದರಲ್ಲಿ ಸರಿಯಾಗಿ ಕೊಡುತ್ತಾರೆ, ಅವರು, ಸತ್ಯವಂತರಾಗಿ ಕೊಡುತ್ತಾರೆಂದು ತಿಳಿದಿದ್ದೆ. ನಾನು ಅವರ ಜೊತೆ ಕಳೆದ 10 ವರ್ಷಗಳು ಕೆಲಸ ಮಾಡಿದ ಕಾಲದಲ್ಲಿ, ಹಲವಾರು ಕಮಿಟಿಗಳಲ್ಲಿ ಕೆಲಸ ಮಾಡಿದ ಕಾಲದಲ್ಲ ಅವರಲ್ಲಿ ಸ್ವಲ್ಪ ಪ್ರಾಮಾಣಿಕತೆ ಇದೆ ಎನ್ನುವುದು ನನ್ನ ಭಾವನೆಯಾಗಿತ್ತು. ಆದರೆ ಈಗ ಅಂಕಿ ಅಂಶಗಳನ್ನು ಕೊಡುವುದರಲ್ಲಿ ಮರೆಮಾಚತಕ್ಕ ಮಟ್ಟಕ್ಕೆ ಇಳಿದಿರುವುದನ್ನು ನೋಡಿದರೆ, ಮಂತ್ರಿಗಳಾದಮೇಲೆ ಈ ಹವ್ಯಾಸಕ್ಕೆ ಕೈಹಾಕಿದ್ದಾರೆನ್ನುವ ಭಾವನೆ ಬರುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಮರೆಮಾಚಿದ್ದಾರೆನ್ನುವುದನ್ನು ಸ್ಪಷ್ಟಪಡಿಸಿದರೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—71 ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ಯಾವ ರೀತಿ ತೀರಿಸಿದ್ದೀರಿ, ವೇಸ್ ಅಂಡ್ ಮೀನ್ಸ್ ಅಡ್ವಾನ್ಸಸ್ ತಂದಿರುವುದು ಹೇಗೆ ಎನ್ನುವುದರ ಬಗ್ಗೆ ವಿವರಣೆ ಕೊಟ್ಟಿದ್ದರೆ ಸಾಕಾಗಿತ್ತು. ಈ ಬಗ್ಗೆ ವಿವರಗಳನ್ನು ಕೊಡಬೇಕೆಂದು ನಾನು ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಪತ್ರ ಬರೆದಿದ್ದೆ. ಅದಕ್ಕೆ ಆ ವಿವರಗಳೆನ್ನೆಲ್ಲ ಬಜೆಟ್ ಭಾಷಣದಲ್ಲಿ ವಿಶದೀಕರಿಸುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಆದರೆ ಬಜೆಟ್ ಭಾಷಣದಲ್ಲಿ ಏನೂ ಇಲ್ಲ. ಅವರು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ತಿಳಿದುಕೊಳ್ಳುವುದಕ್ಕೆ ನನಗೆ ಸಾಧ್ಯವಾಗಿಲ್ಲವೋ ಏನೊ. ನಮ್ಮ ಸಂಶಯ ನಿವಾರಣೆ ಮಾಡಿಲ್ಲ. ಅದರ ಬಗ್ಗೆ ವಿಶದೀಕರಿಸಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಈ ಹೊತ್ತು ನಮ್ಮ ರಾಜ್ಯಕ್ಕೆ ಇಟ್ಟಿರತಕ್ಕ ಸಮಗ್ರ ಆಯವ್ಯಯ ಪತ್ರದಲ್ಲಿ 3.5 ಕೋಟಿ ರೂಪಾಯಿ ಉಳಿತಾಯದ ಬಜೆಟ್ ಎಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರೆ ಬಹುಶಃ ಇದು ಉಳಿತಾಯದ ಬಜೆಟ್ ಆಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅವರೇ ಕೊಟ್ಟಿರತಕ್ಕ ಅಂಕಿ ಅಂಶಗಳಲ್ಲಿ ಅನ್ಯುಯಲ್ ಪ್ಲಾನ್‌ಗೆ 72.3 ಕೋಟಿ ರೂಪಾಯಿ ಒದಗಿಸಲಾಗಿದೆ ಎಂದು ಇಂಟೆರಿಂ ಬಜೆಟ್‌ನಲ್ಲಿ ಹೇಳಿದ್ದಾರೆ, ಈ ಹೊತ್ತು ಅದಕ್ಕೆ 76.2 ಕೋಟಿ ರೂಪಾಯಿ ಆಗುತ್ತದೆ ಎಂದು ಹೇಳಿದ್ದಾರೆ. ಇದಕ್ಕೆ ಅವರು ವಿವರಣೆ ಕೊಟ್ಟಿದ್ದರೆ ಚೆನ್ನಾಗಿತ್ತು. ಹೀಗೆ ಹೇಳತಕ್ಕ ಕಾಲದಲ್ಲಿ ಈ ವರ್ಷ ನಮ್ಮ ರಾಜ್ಯದ ಉತ್ಪನ್ನ 11.5 ಕೋಟಿ ರೂಪಾಯಿನಷ್ಟು ಈಗಿರತಕ್ಕ ಸಂಪನ್ಮೂಲಗಳಿಂದಲೇ ಹೆಚ್ಚಾಗುತ್ತದೆ ಎಂದು ತಿಳಿಸಿದ್ದಾರೆ. ಎಕ್ಸ್‌ಸೈಜ್ ಬಾಬಿನಲ್ಲಿ ಸ್ವಲ್ಪ ಜಾಸ್ತಿ ಬಂದಿದೆ, ಲ್ಯಾಂಡ್ ರೆವಿನ್ಯೂ ಒಂದು ಕೋಟಿ ರೂಪಾಯಿ ಹೆಚ್ಚು ಬರುತ್ತದೆ, ಹೀಗೆ ಕೆಲವು ವಿವರಗಳನ್ನು ಕೊಟ್ಟಿದ್ದಾರೆ. ಅವರು ಸಮಗ್ರ ಬಜೆಟ್‌ನ್ನು ಮಂಡಿಸುವಾಗ 11.5 ಕೋಟಿ ರೂಪಾಯಿ ಹೆಚ್ಚು ಉತ್ಪನ್ನ ಬರುತ್ತದೆ ಎಂದು ಹೇಳುವ ಕಾಲದಲ್ಲಿ, ನಮ್ಮ ಅನ್ಯುಯಲ್ ಪ್ಲಾನ್ 76.28 ಕೋಟಿ ರೂಪಾಯಿಗಳಿಗೆ ಏನು ಸೀಮಿತವಾಗಿದೆ ಅದನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಿದ್ದಿಲ್ಲವೇ ? ನಮ್ಮ ಹತ್ತಿರ ಹಣವಿದ್ದರೆ, ಹಣದ ಪರಿಸ್ಥಿತಿ ಉತ್ತಮಗೊಂಡಿದ್ದರೆ, ಏಕೆ ಹೆಚ್ಚು ಮಾಡಬಾರದಾಗಿತ್ತು ? ಮಾನ್ಯ ಚನ್ನಬಸಪ್ಪನವರು ಮಂತ್ರಿಮಂಡಲದಲ್ಲಿದ್ದಾರೆ. ಅವರು ಇಂಥದಕ್ಕೆ ಅವಕಾಶ ಕೊಟ್ಟಿದ್ದಾರಲ್ಲ ಎಂದು ಸಂಕಟವಾಗುತ್ತದೆ. ಇಂಟೆರಿಂ ಬಜೆಟ್ಟಿನಲ್ಲಿ ಪವರ್ ಅಂಡ್ ಇರಿಗೇಷನ್ನಿಗೆ 29.16 ಕೋಟಿ ರೂಪಾಯಿ ಎಂದು ತೋರಿಸಿದ್ದನ್ನು ಈಗ ನಮ್ಮ ಮುಂದೆ ಇಟ್ಟಿರುವ ಬಜೆಟ್ಟಿನಲ್ಲಿ 28.96 ಕೋಟಿ ಎಂದು ತೋರಿಸಿದ್ದಾರೆ.

10-00 A.M.

ನಿಮ್ಮ ಹತ್ತಿರ ಇದಕ್ಕೆ ಕಾಸಿದೆಯೇ ? ಇಂತಹ ಪರಿಸ್ಥಿತಿಗೆ ಇಳಿಯಲು ಏಕೆ ಹೋದಿರಿ ಎಂದು ನಾನು ಇಲ್ಲಿ ಕೇಳುತ್ತೇನೆ. ಇರಿಗೇಷನ್ ಮತ್ತು ಪವರ್ ಇದರ ಬಗ್ಗೆ ನೀವು ಹೆಚ್ಚು ಲಕ್ಷ್ಯಕೊಟ್ಟು ಅದರಿಂದ ಹೆಚ್ಚು ಉತ್ಪನ್ನವನ್ನು ಪಡೆಯಬೇಕು ಮತ್ತು ಅದರಿಂದ ನಮ್ಮ ಸಂಪನ್ಮೂಲಗಳು ಹೆಚ್ಚಾಗುತ್ತವೆ ಎನ್ನುವುದನ್ನು ಸಮರ್ಥನೆ ಮಾಡುವಾಗ ನಿಮ್ಮ ಅನ್ಯುಯಲ್ ಪ್ಲಾನ್‌ನನ್ನು ಏಕೆ ಹೆಚ್ಚು ಮಾಡುವುದಕ್ಕೆ ಆಗಲಿಲ್ಲ. ಹೋದ ಸಾರಿ ಮಾರ್ಚಿತಿಂಗಳಿನಲ್ಲಿ ಮಾಡಿದ ಬಡ್ಜೆಟ್ ಭಾಷಣದಲ್ಲಿ ಪ್ಲಾನ್ ಔಟ್‌ಲೇ 1971-72 ರಲ್ಲಿ 77.74 ಕೋಟಿ ರೂಪಾಯಿಗಳು ಎಂದು ಹೇಳಿದ್ದರು. ಆದರೆ ಇಂದಿನ ಹೊಸ ಬಡ್ಜೆಟ್ ಭಾಷಣದಲ್ಲಿ ಹಣಕಾಸಿನ ಸಚಿವರು 1971-72ಕ್ಕೆ 74 ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ. ಹೀಗೆ ಅಂಕಿ ಅಂಶಗಳನ್ನು ಕೊಟ್ಟಿರುವುದನ್ನು ನೋಡಿದರೆ ಇದು ಸತ್ಯಕ್ಕೆ ದೂರವಾದ ಅಂಕಿ ಅಂಶಗಳು ಎಂದು ಹೇಳಬೇಕಾಗುತ್ತದೆ. ಮಾನ್ಯ ಹಣಕಾಸಿನ ಸಚಿವರು ಸ್ವಲ್ಪ ಅಸತ್ಯವಾದ ಅಂಕಿ ಅಂಶಗಳನ್ನು ಕೊಟ್ಟು ಅದು ಸತ್ಯವಾದ ಅಂಕಿ ಅಂಶಗಳು ಎಂದು ಇಲ್ಲಿ

ಹೇಳಲು ಪ್ರಯತ್ನ ಪಟ್ಟಿದ್ದಾರೆ. ಯಾವ ಕಾರಣದಿಂದ ಹೀಗೆ ಹೇಳುತ್ತಾರೆ ಎಂಬುದನ್ನು ಇದರ ಬಗ್ಗೆ ಅವರು ಸ್ವಲ್ಪ ವಿಶದೀಕರಿಸಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಹಿಂದೆ ಇದ್ದ ಸಿಂಡಿಕೇಟು ಸರಕಾರ ಏನು ಮಾಡಿದೆ ಎನ್ನುವುದನ್ನು ನಾನು ಓದಿ ನೋಡಿದ್ದೇನೆ. ಆಗ ಇದ್ದ ಸರಕಾರ ಮಾಡಿರತಕ್ಕದ್ದು ಆನ್ಯುಯಲ್ ಪ್ಲಾನಿಗಾಗಿ 1971–72ಕ್ಕೆ 79.67 ಕೋಟಿ ರೂಪಾಯಿ ಗಳನ್ನು ಒದಗಿಸಿದ್ದೇವೆ ಎಂದು ಆಗಿನ ಹಣಕಾಸು ಮಂತ್ರಿಗಳಾಗಿದ್ದ ಶ್ರೀ ರಾಮಕೃಷ್ಣ ಹೆಗಡೆ ಯವರು ಹೇಳಿದ್ದಾರೆ. ಆದರೆ ನಮ್ಮ ಈಗಿನ ಹಣಕಾಸಿನ ಮಂತ್ರಿಗಳಾದ ಶ್ರೀಮಾನ್ ಘೋರ್ಪಡೆ ಯವರು 1971-72ರ ಆನ್ಯುಯಲ್ ಪ್ಲಾನ್‌ಗಾಗಿ 74 ಕೋಟಿ ರೂಪಾಯಿ ಇತ್ತು ಎಂದು ಇಲ್ಲಿ ಕೊಟ್ಟಿದ್ದಾರೆ. ಇದರಿಂದಾಗಿ ನನಗೆ ಈ ಅಂಕಿ ಅಂಶಗಳ ಬಗ್ಗೆ ಸಂಶಯ ಬಂದಿದೆ. ಶ್ರೀಮಾನ್ ಘೋರ್ಪಡೆಯವರು ಎಕನಾಮಿಕ್ಸ್ ಸ್ಟೂಡೆಂಟು ಆಗಿದ್ದವರು ಎಲ್ಲವನ್ನೂ ಶ್ರಮಪಟ್ಟು ತಿಳಿದು ಕೊಂಡು ಮಾತನಾಡುವವರು ಎಂದು ನಾನು ತಿಳಿದುಕೊಂಡಿದ್ದೇನೆ. ಇಂತಹವರು ಇಲ್ಲಿ ಸತ್ಯಕ್ಕೆ ದೂರವಾದ ಅಂಶಗಳನ್ನು ತಂದು ಸತ್ಯವಾಗಿದೆ ಎಂದು ಹೇಳುವುದು ಸಾಧುವಾದುದಲ್ಲ. ನನಗೆ ಇದರಲ್ಲಿ ಸಂದೇಹವುಂಟಾಗಿದೆ ಎನ್ನುವ ದೃಷ್ಟಿಯಿಂದ ನಾನು ಇಲ್ಲಿ ಹೇಳುತ್ತಿದ್ದೇನೆ.

ನಾನು ಮೊದಲೇ ತಿಳಿಸಿದ ಹಾಗೆ ನಮ್ಮ ಬಜೆಟ್ಟಿನ ಒಂದು ಸಮಗ್ರವಾದ ಆಯವ್ಯಯ ಪಟ್ಟಿಯನ್ನು ಈ ಸಭೆಯ ಮುಂದೆ ಮಂಡಿಸುವಾಗ ಅದು ತಮ್ಮ ಪಕ್ಷದ ಧೋರಣೆಗೆ ಅನುಗುಣ ವಾಗಿರಬೇಕು. ಆ ಧೋರಣೆಗೆ ಅನುಸಾರವಾಗಿ ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತರುವುದಕ್ಕೆ ಎಲ್ಲ ರೀತಿಯ ಮುಂಜಾಗರೂಕತೆಯ ಕ್ರಮವಹಿಸುತ್ತೇವೆಂದು ಇಲ್ಲಿ ಹೇಳಿದರು. ನಾನು ಅವರನ್ನು ಇಲ್ಲಿಂದ ಕೇಳುತ್ತೇನೆ, ಇದರಿಂದ ನಮ್ಮ ರಾಜ್ಯದ ಪ್ರಗತಿ ಸಾಧನೆಯಾಗುತ್ತದೆಯೇ ? ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆ ಒಂದು ಪ್ರಶ್ನೆಗೆ ಉತ್ತರ ಕೊಡುವ ಸಂದರ್ಭದಲ್ಲಿ ಹೇಮಾವತಿ ಹಾಗೂ ಹಾರಂಗಿ ಯೋಜನೆಗಳ ಬಗ್ಗೆ ಇನ್ನೆರಡು ವರ್ಷಗಳಲ್ಲಿ ಮುಗಿಸಬೇಕೆಂದು ಪ್ರಯತ್ನ ಮಾಡುತ್ತೇವೆಂದು ಹೇಳಿದರು. ಇದಕ್ಕಾಗಿ ನಾನು ತಮಗೆ ಇಲ್ಲಿ ಹೇಳುವುದು ನಿಮ್ಮ ಆನ್ಯುಯಲ್ ಬಜೆಟ್ಟಿನಲ್ಲಿ ಈ ಯೋಜನೆಗಳಿಗಾಗಿ 28.96 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಇದರ ಬಗ್ಗೆ ಹಿಂದಿನ ವರ್ಷ ಎಷ್ಟು ಒದಗಿಸಿದ್ದರು ಎನ್ನುವುದನ್ನು ನೋಡಿದರೆ, ಮೇಜರ್ ಇರಿಗೇಷನ್ ಗಾಗಿ 20 ಕೋಟಿ ರೂಪಾಯಿಗಳು ಪವರಿಗಾಗಿ 17 ಕೋಟಿ ರೂಪಾಯಿಗಳು, ಹೀಗೆ ಒಟ್ಟು ಇರಿಗೇಷನ್ ಬಾಬಿಗೆ 37 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಹೀಗಿದ್ದರೂ ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಹೇಗೆ ಒಪ್ಪಿಗೆ ಕೊಟ್ಟರು ? ಅವರಿಗೂ ಕಾತುರತೆ ಇದೆ ಎನ್ನುವುದು ನನಗೆ ಗೊತ್ತಿದೆ. ಹಣವನ್ನು ಎಲ್ಲಿಂದ ತರುತ್ತೀರಿ ಎಂದು ಕೇಳಿದಾಗ ಇದಕ್ಕೆ ಬೇರೆ ದಾರಿಗಳಿವೆ ಎಂದು ಹೇಳುತ್ತಾ ಓವರು ಡ್ರಾಫ್ಟನ್ನು ತೀರಿಸುತ್ತೇವೆ ಕೇಂದ್ರದವರು ಸಹಾಯ ಮಾಡುತ್ತಾರೆ ಎಂದು ಮೂಗಿಗೆ ತುಪ್ಪ ಬಳಿಯುವ ಹಾಗೆ ಯಾವ ಯಾವುದೋ ಸರ್‌ಕ್ಯುಟಸ್ ದಾರಿಯಲ್ಲಿ ಹೋಗಿ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸುತ್ತೇವೆ, ನೀವೇನೂ ಭಯಪಡಬೇಡಿ ಎಂದು ಇಲ್ಲಿ ಹೇಳುತ್ತಿದ್ದಾರೆ. ರಾಜ್ಯದ ಅಭಿವೃದ್ಧಿ ಕಾರ್ಯಗಳನ್ನು ಮಾಡುವಾಗ ಎಲ್ಲ ಪವರು ಯೋಜನೆ ಗಳನ್ನೂ ಕೇಂದ್ರದವರಿಗೆ ವಹಿಸಿಕೊಡಬೇಕು ಎಂದು ಅವರಿಂದ ಸಹಾಯ ಪಡೆದು ನಮ್ಮ ರಾಜ್ಯದ ಹಿತಕ್ಕೆ ಧಕ್ಕೆ ತರುವಂತಹ ಪ್ರಯತ್ನ ಮಾಡಬೇಡಿ ಎಂದು ನಾನು ಇಲ್ಲಿ ಹೇಳುತ್ತಿದ್ದೇನೆ. ಈ ದೃಷ್ಟಿಯಿಂದ ನಮ್ಮ ನೀರಾವರಿ ಯೋಜನೆಗಳು ಖಂಡಿತವಾಗಿ ಮಾಡಲು ಸಾಧ್ಯವಿಲ್ಲ ಎಂದು ದುಃಖದಿಂದ ಹೇಳಬೇಕಾಗಿದೆ. ನಮ್ಮ ಅರ್ಥ ಮಂತ್ರಿಗಳು ಕಾಳೀ ಯೋಜನೆ ಬಗ್ಗೆ ಒಂದು ಮಾತು ಹೇಳಿದರು. ಮತ್ತು ಈ ಕಾಳೀ ಯೋಜನೆಗೆ ಕೇಂದ್ರ ಸರಕಾರದವರು ಅಂಗೀಕಾರ ಕೊಟ್ಟರು ಎಂದು ಹೇಳುವಾಗ ಕೇಂದ್ರದ ಮಂತ್ರಿಗಳನ್ನು ಅಭಿನಂದನೆ ಮಾಡಿದರು. ಅವರನ್ನು ಅಭಿನಂದನೆ ಮಾಡು ವುದು ಬೇಡ ಎಂದು ಹೇಳುತ್ತಿಲ್ಲ. ಆದರೆ ನಾನು ಕೇಳುವುದು ಮಾನ್ಯ ಅರ್ಥಮಂತ್ರಿಗಳು ಈ ಕಾಳೀ ನದೀ ಯೋಜನೆಯನ್ನು ಮಾಡುವುದಕ್ಕೆ ಕೇಂದ್ರ ಸರಕಾರದಿಂದ ಯಾವ ಷರತ್ತಿನ ಮೇಲೆ ಹಣ ಒದಗಿಸುತ್ತಾರೆ ಎನ್ನುವುದನ್ನು ಇಲ್ಲಿ ತಿಳಿಸಬೇಕೆಂದು ಕೇಳುತ್ತೇನೆ. ದೊಡ್ಡ ದೊಡ್ಡ ಪವರ್ ಪ್ರಾಜೆಕ್ಟ್‌ಗಳನ್ನು ದೇಶದಲ್ಲಿ ಮಾಡಿದರೆ ನಮ್ಮ ರಾಜ್ಯಕ್ಕೆ ಹೆಚ್ಚು ಉತ್ಪನ್ನ ಬರುತ್ತದೆ. ಇದಕ್ಕಾಗಿ ನಾವು ಶರಾವತಿ ಯೋಜನೆಯನ್ನು ಮಾಡಿದ್ದೇವೆ ಮತ್ತು ಇದಕ್ಕಾಗಿ ಸುಮಾರು 120 ಕೋಟಿ ಯವರೆಗೆ ಖರ್ಚು ಮಾಡಿದ್ದೇವೆ ಮತ್ತು ಇದರಿಂದ ಸುಮಾರು ವರ್ಷಕ್ಕೆ ಹತ್ತರಿಂದ ಹನ್ನೆರಡು ಕೋಟಿ ಯಷ್ಟು ಉತ್ಪನ್ನ ಬರುತ್ತದೆ. ಬಹುಶಃ ನಾನು ಕೊಡುವ ಅಂಕಿ ಅಂಶಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇರಬಹುದು. ಅಂತೂ ಪವರು ಯೋಜನೆಗಳಿಂದ ಹೆಚ್ಚು ಉತ್ಪತ್ತಿ ಬರುತ್ತಿದೆ ಮತ್ತು ನಮ್ಮ ಶರಾವತಿಯಂತಹ ಉಪಯುಕ್ತವಾದ ಯೋಜನೆಯಿಂದ ಹೆಚ್ಚು ಉತ್ಪತ್ತಿ ಬರುತ್ತದೆ. ಈಗ ಕಾಳೀ ನದೀ ಯೋಜನೆಯನ್ನು ಪೂರ್ಣ ಮಾಡುವುದಕ್ಕೆ ಕೇಂದ್ರ ಸರಕಾರ ಹಣ ಒದಗಿಸುತ್ತಾರೆ ಎಂದು ಹೇಳುವಾಗ, ಇದನ್ನು ಯಾವ ಷರತ್ತುಗಳ ಮೇಲೆ ಕೇಂದ್ರದವರು ಕೊಡುತ್ತಾರೆ ಎನ್ನುವುದನ್ನು

(ಶ್ರೀ ಹೆಚ್. ಡಿ. ದೇವೇಗೌಡ)

ಹೇ ಳಿವಾಗ ಇದನ್ನು ಕೇಂದ್ರಕ್ಕೆ ವಹಿಸಿ ಇದರಿಂದ ಬರುವ ಉತ್ಪನ್ನಗಳೆಲ್ಲವನ್ನೂ ಆ ಸರಕಾರವೇ ಪಡೆಯಬೇಕೆಂದು ಮಾಡಿದರೆ ಇದರಿಂದ ರಾಜ್ಯಕ್ಕೆ ಬರುವ ಆದಾಯ ಹೋಗುವುದಿಲ್ಲವೇ ? ನಮ್ಮ ಸರಕಾರ ಇಂತಹ ಉತ್ಪನ್ನಗಳು ಬರುವ ಯೋಜನೆಗಳನ್ನು ಪೂರ್ಣವಾಗಿ ಕೇಂದ್ರದವರಿಗೇ ವಹಿಸಿ ಕೊಡುವುದಾದರೆ ಬಹುಶಃ ಇದು ಮುಂದಿನ ಪೀಳಿಗೆಯವರಿಗೆ ಧಕ್ಕೆ ತಂದಂತಾಗುತ್ತದೆ, ನಮ್ಮ ರಾಜ್ಯದ ಉತ್ಪನ್ನ ನಮ್ಮ ರಾಜ್ಯಕ್ಕೆ ಬರುವಂತೆ ಪ್ರಯತ್ನಗಳನ್ನು ಮಾಡುವಾಗ ನಮ್ಮ ಸರಕಾರವೇ ಸಾಕಷ್ಟು ಹಣವನ್ನು ಇಂತಹ ಯೋಜನೆಗೆ ಒದಗಿಸಿ ಅನುಕೂಲಮಾಡಬೇಕು ಎನ್ನುವ ದೃಷ್ಟಿಯಿಂದ ಇಲ್ಲಿ ಹೇಳುತ್ತಿದ್ದೇನೆ. ನಮ್ಮ ದೇಶಕ್ಕೆ ಹೆಚ್ಚು ಆದಾಯ ಬರುವ ಯಾವ ಯೋಜನೆಗಳನ್ನು ಕೇಂದ್ರಕ್ಕೆ ವಹಿಸಬಾರದು. ಕಾಳೀ ನದಿ ಯೋಜನೆಗಾಗಿ ಹಾಗೂ ಅಂತಹ ಇನ್ನಿತರ ಯೋಜನೆಗಳಿಗೆ ಎಲ್ಲಿಂದ ಹಣ ತರುತ್ತಾರೆ ಎನ್ನುವುದನ್ನು ಇಲ್ಲಿ ಹೇಳಲಿಲ್ಲ, ಇದರ ಕಾರ್ಯವ್ಯಾಪ್ತಿಯನ್ನೆಲ್ಲಾ ಕೇಂದ್ರಕ್ಕೆ ವಹಿಸುತ್ತಾರೆಯೇ ಇಲ್ಲವೇ ರಾಜ್ಯವೇ ನಡೆಸಿಕೊಂಡು ಬರುತ್ತಾರೆಯೇ ಎನ್ನುವುದು ಗೊತ್ತಾಗಲಿಲ್ಲ. ಕೇಂದ್ರದ ವ್ಯಾಪ್ತಿಗೆ ಇದನ್ನು ಒಳಪಡಿಸಿ ರಾಜ್ಯದ ಬೊಕ್ಕಸಕ್ಕೆ ಹಾನಿ ಮಾಡುವುದಾದರೆ ಇದರಿಂದ ರಾಜ್ಯಕ್ಕೆ ಅನುಕೂಲವಾಗುವುದಿಲ್ಲ. ಇದಕ್ಕಾಗಿ ರಾಜ್ಯ ಸರಕಾರ ಸ್ವಲ್ಪ ಹೆಚ್ಚು ವಿಚಕ್ಷಣೆಯಾದ ನಿಲುವನ್ನು ತಾಳಬೇಕು ಎನ್ನುವ ಮಾತನ್ನು ನಾನು ಇಲ್ಲಿ ಹೇಳುತ್ತೇನೆ.

ಮಾನ್ಯ ಆರ್ಥಿಕ ಮಂತ್ರಿಗಳು ಈಗ ಸಭೆಯಲ್ಲಿ ಇಲ್ಲ. ಅವರು ತಮ್ಮ ಭಾಷಣದಲ್ಲಿ ಬಹಳ ಗೊಂದಲದ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಈ ಬಗ್ಗೆ ನಾನು ಅಷ್ಟೊಂದು ಪರಿಣತನಲ್ಲ; ಮತ್ತು ಅವರು ಉಪಯೋಗಿಸಿರುವ ಕೆಲವು ಕನ್ನಡ ಪದಗಳು ಕೂಡ ಅರ್ಥವಾಗದ ರೀತಿಯಲ್ಲಿವೆ. ಗ್ರಾಮ ಜೀವನ-ನಗರ ಜೀವನಗಳ ಬಗ್ಗೆ ಪ್ರಸ್ತಾಪ ಮಾಡುತ್ತಾ, ಹಳ್ಳಿಯ ಜನತೆ ಪಟ್ಟಣದ ಜನತೆಯ ಜೊತೆಯಲ್ಲಿಯೇ ಮುಂದುವರಿಯಬೇಕು ಎಂದು ಹೇಳಿ ಆ ಬಗ್ಗೆ ಗ್ರಾಮನಗರೀಕರಣವಾಗಬೇಕೆಂದು ಹೇಳಿದ್ದಾರೆ. ಒಳ್ಳೆಯ ಕನ್ನಡ ಪದವನ್ನು ಅವರು ಇಲ್ಲಿ ಉಪಯೋಗಿಸಿದ್ದಾರೆ. ಈ ಪದವನ್ನು ಎಲ್ಲಿ ಹುಡುಕಿದರೋ ನನಗೆ ಗೊತ್ತಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಅದಕ್ಕೆ ಅರ್ಥ ಮಾಡ್ರನೈಜ್ ಎಂದು.

ಶ್ರೀ ಎಚ್.ಡಿ. ದೇವೇಗೌಡ. ಗೃಹನಿರ್ಮಾಣದ ಬಗ್ಗೆ ಪ್ರಸ್ತಾಪ ಮಾಡುತ್ತಾ ಬೆಂಗಳೂರಿನಲ್ಲಿ ಎಚ್. ಎ. ಎಲ್. ಮತ್ತು ಸಾರಕ್ಕಿ ಲೇಔಟ್‌ಗಳಲ್ಲಿ 10 ಕೋಟಿ ರೂಪಾಯಿ ವೆಚ್ಚದಿಂದ ಸುಮಾರು 3,000 ಮನೆಗಳನ್ನು ಕಟ್ಟಿಸಲಾಗುವುದು ಎಂದು ಹೇಳಿದ್ದಾರೆ. ಇದು ನಮ್ಮ ರಾಜ್ಯದಲ್ಲಿ ಶೇಕಡ 80 ರಷ್ಟು ಜನ ಹಳ್ಳಿಗಳಲ್ಲಿ ವಾಸಮಾಡುತ್ತಿದ್ದಾರೆ. ಹಳ್ಳಿಯ ಜನರು ಹಳ್ಳಿಗಳಲ್ಲಿ ಮನೆ ಕಟ್ಟಿಸಬೇಕಾದರೆ ಮತ್ತು ಅದಕ್ಕೆ ಸಾಲ ಪಡೆಯಬೇಕಾದರೆ ಎಷ್ಟು ಕಷ್ಟವಿದೆ ಎಂಬುದನ್ನು ಸರ್ಕಾರದವರು ಅರಿತುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆತಾನೆ ಚುನಾವಣಾ ಸಮಯದಲ್ಲಿ ಅನೇಕ ಹಳ್ಳಿಗಳಲ್ಲಿ ಪ್ರವಾಸಮಾಡಿ ಸುಮಾರು 1,900 ಅರ್ಜಿಗಳನ್ನು ಪಡೆದುಕೊಂಡು ಮತ್ತು ಅಲ್ಲಿಯ ಜನರ ಕಷ್ಟಗಳನ್ನು ಅರಿತುಕೊಂಡು ಬಂದಿದ್ದಾರೆ. ಬರುವ ಆಗಸ್ಟ್ 15 ರೊಳಗೆ ಮನೆ ಇಲ್ಲದವರಿಗೆ ಮನೆ ಕಟ್ಟಿಸಿಕೊಳ್ಳಲು ಸೈಟ್‌ಗಳನ್ನು ಹಂಚುವ ಬಗ್ಗೆ ಒಬ್ಬೊಬ್ಬರು ಮಂತ್ರಿಗಳು ಒಂದೊಂದು ರೀತಿಯ ಸ್ಟೇಟ್‌ಮೆಂಟ್ ಕೊಡುತ್ತಿದ್ದಾರೆ. ಮುಖ್ಯಮಂತ್ರಿಗಳು ಮಂತ್ರಿಗಳನ್ನು ಯಾವ ರೀತಿ ಹಿಡಿತದಲ್ಲಿ ಇಟ್ಟುಕೊಳ್ಳಬೇಕು ಎಂಬ ಬಗ್ಗೆ ನಾನು ಜನರಲ್ ಅಡ್ಮಿನಿಸ್ಟ್ರೇಷನ್ ಡಿಮ್ಯಾಂಡ್ ಚರ್ಚೆಗೆ ಬಂದ ಸಮಯದಲ್ಲಿ ಹೇಳುತ್ತೇನೆ. ಮುಖ್ಯವಾಗಿ "ಗ್ರಾಮನಗರೀಕರಣ" ಎಂದರೆ ಎಲ್ಲ ಗ್ರಾಮಗಳಲ್ಲಿಯೂ ಏನೇನು ಬರುತ್ತವೆ ಎಂಬುದನ್ನು ಮಾನ್ಯ ಆರ್ಥಿಕ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕು. ಸಿನಿಮಾ ಟಾಕೀಸುಗಳು, ಹೋಟೇಲ್‌ಗಳು ಮುಂತಾದವುಗಳು ಏನಾದರೂ ಗ್ರಾಮಗಳಿಗೆ ಬರುತ್ತವೆಯೇ ಎಂಬುದನ್ನು ತಿಳಿಸಬೇಕು.

ಇನ್ನು ರಾಜ್ಯಸರ್ಕಾರದ ನೌಕರರಿಗೆ ತುಟ್ಟಿಭತ್ಯ ಕೊಡುವ ವಿಷಯವನ್ನು ಮಾನ್ಯ ಆರ್ಥಿಕ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಭಾರತದಲ್ಲಿ ಸುಮಾರು 22 ಕೋಟಿ ಜನತೆಗೆ ತಿಂಗಳಿಗೆ ಕೇವಲ 40 ರೂಪಾಯಿಗಳ ವರಮಾನಕ್ಕೂ ಗತಿ ಇಲ್ಲ ಎಂಬುದಾಗಿ ಶ್ರೀಮಾನ್ ಘೋರ್ಪಡೆಯವರೇ ಒಂದು ಕಡೆ ಹೇಳಿಕೆ ಕೊಟ್ಟಿದ್ದಾರೆ. ರಾಜ್ಯಸರ್ಕಾರದ ನೌಕರರಿಗೆ 7 ರಿಂದ 8 ರೂಪಾಯಿವರೆಗೆ ತುಟ್ಟಿಭತ್ಯವನ್ನು ಮತ್ತು ಪೆನ್‌ಷನ್‌ದಾರರಿಗೆ 5 ರೂಪಾಯಿವರೆಗೆ ತುಟ್ಟಿಭತ್ಯವನ್ನು ಹೆಚ್ಚಿಸಲು ಉದ್ದೇಶಿಸಿರುವುದಾಗಿ ಮಾನ್ಯ ಆರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ತಿಳಿಸುತ್ತಾ, ರಾಜ್ಯ ಸರ್ಕಾರದ ನೌಕರರಿಗೆ ಕೇಂದ್ರ ಸರ್ಕಾರದ ನೌಕರರಿಗೆ ಕೊಡುತ್ತಿರುವ ತುಟ್ಟಿಭತ್ಯವನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಇದೇ ಮಂತ್ರಿಗಳು ಹಿಂದೆ ಇದೇ ಸಭೆಯಲ್ಲಿ ಕೊನೆಯಪಕ್ಷ ತುಟ್ಟಿಭತ್ಯವಾದರೂ ಕೂಡ ಕೇಂದ್ರಸರ್ಕಾರದ ನೌಕರರಿಗೆ ಕೊಡುವಷ್ಟು ರಾಜ್ಯಸರ್ಕಾರದ ನೌಕರ

ರಿಗೂ ಕೊಡಬೇಕೆಂದು ಹೇಳಿದ್ದು ನನಗೆ ಜ್ಞಾಪಕವಿದೆ. ಆದಕಾರಣ ನನ್ನ ಅಭಿಪ್ರಾಯದಲ್ಲಿ ಕೇಂದ್ರ ಸರ್ಕಾರದ ನೌಕರರಿಗೆ ಕೊಡುತ್ತಿರುವ ಮೂಲ ವೇತನವನ್ನು ರಾಜ್ಯಸರ್ಕಾರದ ನೌಕರರಿಗೆ ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಕೂಡ ತುಟ್ಟಿಭತ್ಯವನ್ನಾದರೂ ಸಹ ಅವರಿಗೆ ಕೊಡುವಷ್ಟೇ ಇವರಿಗೂ ಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ ಪೋಸ್ಟ್ ಆಫೀಸ್‌ನಲ್ಲಿ ಕೆಲಸ ಮಾಡುವ ನೌಕರನಿಗೆ ಒಂದು ರೀತಿಯ ಬೆಲೆ, ರಾಜ್ಯಸರ್ಕಾರದ ನೌಕರನಿಗೆ ಒಂದು ರೀತಿಯ ಬೆಲೆ ಮಾರ್ಕೆಟ್‌ನಲ್ಲಿ ಇರುವುದಿಲ್ಲ. ಎಲ್ಲರಿಗೂ ಒಂದೇ ರೀತಿಯ ಬೆಲೆ ಇರುವುದರಿಂದ ತುಟ್ಟಿಭತ್ಯವನ್ನಾದರೂ ಕೂಡ ಕೇಂದ್ರ ಸರ್ಕಾರದಷ್ಟೇ ಕೊಡಬೇಕೆಂದು ಹೇಳುತ್ತೇನೆ. ರಾಜ್ಯದ ಆರ್ಥಿಕಪರಿಸ್ಥಿತಿ ಕಷ್ಟವಿದೆ ಎಂಬುದನ್ನು ನಾನು ಒಪ್ಪುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ನಿಮಗೆ ಪೂರ್ತಿ ವಿಷಯ ಗೊತ್ತಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಎಚ್. ಡಿ. ದೇವೇಗೌಡ.—ನಾನೇನು ಸರ್ವಜ್ಞನಲ್ಲ. ಎಲ್ಲವೂ ಗೊತ್ತಿದ್ದರೆ ನಾನು ಇಲ್ಲಿ ಕುಳಿತುಕೊಳ್ಳದೆ ಆಕಡೆಯೇ ಕುಳಿತುಕೊಳ್ಳುತ್ತಿದ್ದೆ.

ಶ್ರೀ ಡಿ. ದೇವರಾಜ ಅರಸ್.—ತಾವು ಹೇಳುವ ಪ್ರಕಾರ ತುಟ್ಟಿಭತ್ಯವನ್ನು ಜಾಸ್ತಿ ಮಾಡುವುದಕ್ಕೆ ನಮಗೂ ಆಸೆ ಇದೆ. ಆದರೆ ನಾವು ಹಣಕಾಸಿನ ಪರಿಸ್ಥಿತಿಯನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಹಣಕಾಸಿನ ಪರಿಸ್ಥಿತಿ ಈಗ ಚೆನ್ನಾಗಿದೆ ಎಂದು ಹೇಳಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಹಿಂದಿನ ಸರ್ಕಾರದವರು ಸರ್ಕಾರೀ ನೌಕರರ ಸಂಬಳವನ್ನು ಜಾಸ್ತಿ ಮಾಡಿದಾಗ ಅದನ್ನು ಫೈನಾನ್ಸ್ ಕಮೀಷನ್ ಅವರು ಗಣನೆಗೇ ತೆಗೆದುಕೊಳ್ಳಲಿಲ್ಲ. ಆದಕಾರಣ ಇದನ್ನೆಲ್ಲಾ ನಾವು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಕೇಂದ್ರ ಸರ್ಕಾರದವರು ಸ್ಪೆಷಲ್ ಅಸಿಸ್ಟೆನ್ಸ್ ಕೊಡುತ್ತೇವೆಂದು ಹೇಳಿರುವುದರಿಂದ ಕೇಂದ್ರ ಸರ್ಕಾರದ ತುಟ್ಟಿಭತ್ಯವನ್ನೇ ರಾಜ್ಯ ಸರ್ಕಾರದ ನೌಕರರಿಗೂ ಕೊಡುವುದಕ್ಕೂ ಸರ್ಕಾರದವರು ಪ್ರಯತ್ನ ಮಾಡಬೇಕು. ಅದೇ ರೀತಿಯಲ್ಲಿ ಕೇಂದ್ರ ಸರ್ಕಾರದವರು ತಮ್ಮ ನೌಕರರ ಸಂಬಳವನ್ನು ಹೆಚ್ಚಿಸುವ ಕಾಲದಲ್ಲಿ ರಾಜ್ಯ ಸರ್ಕಾರದ ಜೊತೆಯಲ್ಲಿ ಚರ್ಚೆ ಮಾಡಿದರೆ ಈ ಗೊಂದಲದ ಪರಿಸ್ಥಿತಿಯೇ ಬರುವುದಿಲ್ಲ. ಒಂದು ಪಕ್ಷ ಅವರು ಚರ್ಚೆ ಮಾಡಲು ಒಪ್ಪದಿದ್ದರೆ ಅದರ ಒಂದು ಹೊರೆಯನ್ನು ಕೇಂದ್ರದವರೇ ಹೊರಬೇಕೆಂದು ರಾಜ್ಯಸರ್ಕಾರದವರು ಸ್ಪಷ್ಟವಾಗಿ ಹೇಳಬಹುದು. ಕಳೆದ 25 ವರ್ಷಗಳಿಂದಲೂ ಇದೇ ರೀತಿ ನಡೆದುಕೊಂಡು ಬರುತ್ತಿದೆ.

ಶ್ರೀ ಡಿ. ದೇವರಾಜ ಅರಸ್.—ಎನ್. ಡಿ. ಸಿ. ಮೀಟಿಂಗ್‌ನಲ್ಲಿ ಸಹ ಕೇಂದ್ರ ಸರ್ಕಾರದವರು ತನ್ನ ನೌಕರರ ಸಂಬಳವನ್ನು ಜಾಸ್ತಿ ಮಾಡುವಾಗ ರಾಜ್ಯ ಸರ್ಕಾರಗಳ ನೌಕರರ ಸಂಬಳವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕೆಂದು ಮತ್ತು ರಾಜ್ಯ ಸರ್ಕಾರಕ್ಕೆ ಇದರಿಂದ ಆಗತಕ್ಕ ನಷ್ಟವನ್ನು ಕಟ್ಟಿಕೊಡಬೇಕೆಂದು ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು ಒತ್ತಾಯ ಮಾಡಿದ್ದಾರೆ ಮತ್ತು ನಾವು ಸಹ ಒತ್ತಾಯ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಒಂದು ತಾರತಮ್ಯ ಇರುವುದು ಸರಿಯಾದುದು ಅಲ್ಲ. ಇದರ ಬಗ್ಗೆ ಒಂದು ರಾಷ್ಟ್ರೀಯ ಧೋರಣೆಯನ್ನು ನಿರೂಪಣೆ ಮಾಡುವುದು ಸೂಕ್ತ ಎಂದು ಹೇಳುತ್ತೇನೆ. ಇಲ್ಲದಿದ್ದರೆ ನೌಕರವರ್ಗದವರಲ್ಲಿ ಒಂದು ರೀತಿಯ ಅತೃಪ್ತಿ ಉಂಟಾಗುತ್ತದೆ. ಇದಕ್ಕೆ ಅವಕಾಶ ಮಾಡಿಕೊಡುವುದು ಸರಿಯಲ್ಲವೆಂದು ಹೇಳುತ್ತೇನೆ.

ಮಾನ್ಯ ಆರ್ಥಿಕ ಮಂತ್ರಿಯವರು ತಮ್ಮ ಆಯವ್ಯಯ ಪಟ್ಟಿಯಲ್ಲಿ ಭೂಸುಧಾರಣೆ ಬಗ್ಗೆ ಹಣವನ್ನು ಒದಗಿಸಿದಂತೆ ಕಾಣಲಿಲ್ಲ. ಇದೇ ಅಧಿವೇಶನದಲ್ಲಿಯೇ ಭೂಸುಧಾರಣೆಯ ಬಗ್ಗೆ ಒಂದು ಸಮಗ್ರವಾದ ಮಸೂದೆಯನ್ನು ತರುತ್ತೇವೆಂದು ಸರ್ಕಾರದವರು ಈಗಾಗಲೇ ಹೇಳಿದ್ದಾರೆ. ಆದರೆ ಇದಕ್ಕೆ ಹಣವನ್ನು ಎಲ್ಲಿಂದ ಒದಗಿಸುತ್ತೀರಾ ಎಂಬುದನ್ನು ಕೇಳುತ್ತೇನೆ. ಈಗಿನ ಬಡ್ಜೆಟ್ ಖೋತಾ ಬಡ್ಜೆಟ್ಟೋ ಅಥವಾ ಸರ್‌ಪ್ಲಸ್ ಬಡ್ಜೆಟ್ಟೋ ಎಂಬುದನ್ನು ಮುಂದೆ ನೋಡೋಣ.

ನಿರುದ್ಯೋಗದ ಸಮಸ್ಯೆಯ ಬಗ್ಗೆ ಹೇಳುವುದಾದರೆ ಈ ಸರ್ಕಾರ ವಿದ್ಯಾವಂತ ನಿರುದ್ಯೋಗಿಗಳೆಲ್ಲರಿಗೂ ಕೆಲಸಗಳನ್ನು ಕೊಡುತ್ತೇವೆ ಎಂದು ನಾವು ಎಲ್ಲೂ ಹೇಳಿಲ್ಲ ಎಂದು ನಿಮ್ಮ ಮಂತ್ರಿಗಳೇ ವಿಧಾನಸಭೆಯಲ್ಲಿ ಹೇಳಿದ್ದಾರೆ. ಚುನಾವಣೆಯಲ್ಲಿ ನಾವು ನಿರುದ್ಯೋಗವನ್ನು ನಿವಾರಣೆ ಮಾಡುತ್ತೇವೆ ಎಂದು ಜನತೆಗೆ ಕೊಟ್ಟಂತಹ ಆಶ್ವಾಸನೆ ನಿಮಗೆ ಮರೆತು ಹೋಯಿತೇ ? ನೀವು ಅಧಿಕಾರಕ್ಕೆ ಬಂದು 90 ದಿವಸಗಳು ಮಾತ್ರ ಆಗಿದೆ. ಇಷ್ಟು ಬೇಗ ನೀವು ಜನತೆಗೆ ಕೊಟ್ಟಂತಹ ಆಶ್ವಾಸನೆ

(ಶ್ರೀ ಹೆಚ್. ಡಿ. ದೇವೇಗೌಡ)

ಹೇಗೆ ಮರೆತು ಹೋಯಿತು ? ಇವೊತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕವರಲ್ಲಿ ಎಸ್. ಎಸ್. ಎಲ್. ಸಿ. ಪಾಸಾಗಿರತಕ್ಕವರು ಎಲ್ಲರೂ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸಿದ್ದಾರೆ. ಆದ್ದರಿಂದ ಅವರೆಲ್ಲರಿಗೂ ಕೆಲಸವನ್ನು ಕೊಡತಕ್ಕದ್ದು ನಿಮ್ಮ ಕರ್ತವ್ಯ. ನೀವು ಕೊಟ್ಟಿರತಕ್ಕಂಥಾ ವಾಗ್ದಾನ ಏನಿದೆ ಅದನ್ನು ಈಡೇರಿಸುವುದಕ್ಕಾಗಿ ನೀವು ಎಷ್ಟರಮಟ್ಟಿಗೆ ಪ್ರಾಮಾಣಿಕವಾಗಿ ಪ್ರಯತ್ನವನ್ನು ನಡೆಸಿದ್ದೀರಿ ಎನ್ನತಕ್ಕಂಥಾದ್ದನ್ನು ನಾವು ಈ ಸಂದರ್ಭದಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಮಾನ್ಯ ಅರ್ಥ ಸಚಿವರು ತಮ್ಮ ಭಾಷಣದಲ್ಲಿ ಪ್ಯಾರಾ 19 ರಲ್ಲಿ ರಾಜ್ಯದಲ್ಲಿ ಈ ವರ್ಷ ಒಂದು ವಿಶೇಷ ಉದ್ಯೋಗ ಕಾರ್ಯಕ್ರಮಕ್ಕಾಗಿ ಭಾರತ ಸರ್ಕಾರದವರು 1.43 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಈ ಕಾರ್ಯಕ್ರಮದ ಮೇರೆಗೆ ರಾಜ್ಯಸರ್ಕಾರ ದವರು ಸಿದ್ಧಪಡಿಸಿದ ವ್ಯವಸ್ಥೆಯಿಂದ 1,700 ಮಂದಿ ಸುಶಿಕ್ಷಿತ ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯಲಿದೆ, ಇವರಲ್ಲಿ ತಾಂತ್ರಿಕ ಹಾಗೂ ಇತರ ಪದವೀಧರರು ಸೇರುತ್ತಾರೆ. ಅಲ್ಲದೆ ಬೇರೆ, 1,800 ಮಂದಿ ನಿರುದ್ಯೋಗಿಗಳಿಗೆ ಕುಶಲವೃತ್ತಿಗಳಲ್ಲಿ ತರಬೇತಿ ನೀಡಲಾಗುವುದು. ಇಷ್ಟೇ ಅಲ್ಲದೆ, ಈ ಕಾರ್ಯಕ್ರಮವು ಈ ವರ್ಷ 11 ಲಕ್ಷ ಶ್ರಮ ದಿನಗಳಷ್ಟು ಉದ್ಯೋಗಾವಕಾಶವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಒದಗಿಸುವುದು ಎಂದು ಹೇಳಿದ್ದಾರೆ. ಇದು ಎಷ್ಟು ಅಪ್ಯಾಯಮಾನವಾಗಿದೆ ಎಂಬುದನ್ನು ಎಲ್ಲರೂ ನೋಡಬೇಕು. ಒಂದು ಕಡೆ 1,700 ಮಂದಿ ಸುಶಿಕ್ಷಿತ ನಿರುದ್ಯೋಗಿಗಳಿಗೆ ಕೆಲಸ ಸಿಕ್ಕುತ್ತದೆ ಎಂದು ಹೇಳಿ ಅದರ ಕೆಳಗಡೆ ಈ ವರ್ಷ 11 ಲಕ್ಷ ಶ್ರಮದಿನಗಳಷ್ಟು ಉದ್ಯೋಗಾವಕಾಶವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಒದಗಿಸುವುದು ಎಂದು ಹೇಳಿದ್ದಾರೆ. ಇದು 11 ಲಕ್ಷ ಜನಗಳೋ ಅಥವಾ ದಿನಗಳೋ ಎಂಬುದು ನನಗೆ ಗೊತ್ತಾಗುವುದಿಲ್ಲ. ಈಗಾಗಲೇ ಗ್ರಾಮಾಂತರ ಪ್ರದೇಶದಿಂದ ನೂರಾರು ಜನಗಳು ಕೆಲಸಕ್ಕೆ ಅರ್ಜಿಯನ್ನು ಹಿಡಿದುಕೊಂಡು ಬಂದಿದ್ದಾರೆ. ನೀವು ಒಂದು ಮಾತು ಸರ್ಕಾರದವರಿಗೆ ಹೇಳಿದರೆ ನಮಗೆ ಕೆಲಸ ಸಿಕ್ಕುತ್ತದೆ ಎಂದು ಹೇಳುತ್ತಿದ್ದಾರೆ. ಸರ್ಕಾರದವರು ಇಷ್ಟೊಂದು ನಯವಂಚನೆಯ ಕೆಲಸ ಮಾಡುವುದು ಬೇಡ. ರಾಷ್ಟ್ರಾಧ್ಯಕ್ಷರು ಒಂದು ಕಡೆ ಹೇಳಿದ್ದಾರೆ ಲಕ್ಷಾಂತರ ಜನಗಳಿಗೆ ಉದ್ಯೋಗವನ್ನು ಒದಗಿಸಲಾಗುತ್ತದೆ ಎಂದು. ಹೀಗೆ ನಿಮ್ಮ ಪಕ್ಷದವರು ಒಂದೊಂದುಕಡೆ ಒಂದೊಂದು ಮಾತನ್ನು ಹೇಳಿದ್ದಾರೆ. ಆ ರೀತಿ ಹೇಳಿ ಜನತೆಯ ಮನಸ್ಸನ್ನು ಸೆಳೆದು ಅವರಿಗೆ ವಂಚನೆ ಮಾಡಿದ್ದಾರೆ. ನೀವು ಜನತೆಗೆ ಕೊಟ್ಟಂಥಾ ವಾಗ್ದಾನವನ್ನು ಪೂರೈಸುವುದಕ್ಕೆ ಎಷ್ಟರಮಟ್ಟಿನ ಗಮನವನ್ನು ಕೊಟ್ಟಿದ್ದೀರಿ ಎಂದು ನಾನು ಕೇಳಬೇಕಾಗುತ್ತದೆ. 1,700 ಜನಗಳಿಗೆ ಕೆಲಸವನ್ನು ಒದಗಿಸುತ್ತೇವೆ ಎಂದು ಜನಪದ ಪತ್ರಿಕೆಯಲ್ಲಿ ಪಬ್ಲಿಷ್ ಮಾಡಿಸಿದ್ದೀರಿ, ಅದರಲ್ಲಿ ಮಂತ್ರಿಗಳ ಫೋಟೋಗಳೂ ಕೂಡ ಬಂದಿದೆ. ರಾಷ್ಟ್ರದಲ್ಲಿ 450 ಕೋಟಿ ರೂಪಾಯಿಗಳಿಗೂ ಮೀರಿದ ವೆಚ್ಚದಲ್ಲಿ ಒಂದು ಯೋಜನೆಯನ್ನು ಹಾಕಿಕೊಂಡು ಅದನ್ನು ಕಾರ್ಯಗತ ಮಾಡುತ್ತೇವೆ ನಿರುದ್ಯೋಗವನ್ನು ನಿವಾರಣೆ ಮಾಡುತ್ತೇವೆ ಎಂದು ಹೇಳಿದಂತಹ ಮಾತು ಇವೊತ್ತು 1,700 ಜನಗಳಿಗೆ ಕೆಲಸವನ್ನು ಕೊಡತಕ್ಕಂಥಾ ಪರಿಸ್ಥಿತಿಗೆ ಇಳಿದಿದೆ. ಇರತಕ್ಕಂಥಾ ಸತ್ಯಾಂಶವನ್ನು ಹೇಳಿ ವಿದ್ಯಾವಂತರಿಗೆ ಕೆಲಸವನ್ನು ಕೊಡುವುದಕ್ಕೆ ಆಗುವುದಿಲ್ಲ ಅದಕ್ಕೆ ಬದಲಾಗಿ ಅವರಿಗೆ ಅವರು ತಮ್ಮ ಸ್ವಂತ ಕಾಲಿನ ಮೇಲೆ ನಿಲ್ಲುವಂತಹ ಬೇರೆ ಬೇರೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡುತ್ತೇವೆ ಎಂದು ಹೇಳಿ. ಸುಮ್ಮನೆ ತಮ್ಮ ಭಾಷಣದಲ್ಲಿ ಬೆಳಗಿನಿಂದ ಸಂಜೆಯವರೆಗೆ ನಾವು ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆ ಎಂದು ಎಕ್ಸ್‌ಪ್ರೆಸ್ ಬಿಟ್ಟಿದ್ದೀರಿ. ಈಗಾಗಲೇ ನೀವು ಜನತೆಯ ಮನಸ್ಸನ್ನು ಸೆಳೆದು ವಂಚನೆ ಮಾಡಿದ್ದೀರಿ. ಇನ್ನು ಜನತೆಯ ಮನಸ್ಸನ್ನು ಕೆರಳಿಸುವುದಕ್ಕೆ ಹೋಗಬೇಡಿ. ಏತಕ್ಕೆಂದರೆ ಅದನ್ನು ಸರಿಮಾಡುವುದಕ್ಕಾಗುವುದಿಲ್ಲ. ಅದು ಎಲ್ಲರನ್ನೂ ಆಹುತಿ ತೆಗೆದುಕೊಳ್ಳುತ್ತದೆ. ಈಗ 1,700 ಜನಗಳಿಗೆ ಕೆಲಸವನ್ನು ಕೊಡುತ್ತೇವೆ, ನಾವು ಹಿಂದೆ ಹೇಳಿದ್ದು ತಪ್ಪಾಯಿತು ಎಂದು ಹೇಳಿದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ. ತಮಗೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ ಈಗಾಗಲೇ ನಮ್ಮ ರಾಜ್ಯದಲ್ಲಿ 15 ಸಾವಿರ ಡಿಪ್ಲೊಮಾ ಹೋಲ್ಡರುಗಳಿದ್ದಾರೆ ಎಂದು ಹೇಳಿದ್ದಾರೆ. ಸರ್ಕಾರದವರು ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ಟೆಕ್ನಿಕಲ್ ಮತ್ತು ನಾನ್ ಟೆಕ್ನಿಕಲ್ ನಿರುದ್ಯೋಗಿಗಳು ಒಟ್ಟು ನಮ್ಮ ರಾಜ್ಯದಲ್ಲಿ 3 ಲಕ್ಷ ಜನರಿದ್ದಾರೆ ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ಸಮಸ್ಯೆ ಎಷ್ಟು ಕ್ಲಿಷ್ಟಕರವಾಗಿದೆ ಎಂಬುದು ಗೊತ್ತಾಗುತ್ತದೆ. ಈ ನಿರುದ್ಯೋಗಸಮಸ್ಯೆಯ ಬಗ್ಗೆ ಉದಾಸೀನ ಮಾಡದೆ ಇದನ್ನು ಬಗೆಹರಿಸುವ ಕಡೆ ಸರ್ಕಾರದವರು ತಮ್ಮ ಗಮನವನ್ನು ಹರಿಸಬೇಕು ಎಂದು ನಾನು ಹೇಳುತ್ತೇನೆ.

ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ ಈ ಬಾಬಿಗೆ ಸರ್ಕಾರದವರು ಈ ವರ್ಷ 55 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇವೊತ್ತು ನಮ್ಮ ರಾಜ್ಯದಲ್ಲಿ ಒಟ್ಟು 220 ಜೂನಿಯರ್

ಕಾಲೇಜುಗಳನ್ನು ಮಾಡಿದ್ದಾರೆ. ಆದ್ದರಿಂದ ಈ ಬಾಬಿಗೆ 60 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬೇಕಾಗುತ್ತದೆ. ಇವೊತ್ತು ನಾವು ರೆವೆನ್ಯೂ ಬಾಬಿನಲ್ಲಿ ಸರ್‌ಪ್ಲಸ್ ಬಡ್ಜೆಟ್ಟನ್ನು ಇಟ್ಟಿದ್ದೇವೆ, ರಾಜ್ಯದ ಆರ್ಥಿಕ ಹತೋಟಿಯನ್ನು ನಾವು ಇಟ್ಟುಕೊಂಡಿದ್ದೇವೆ. ಅದು ಲಂಗುಲಗಾಮು ಇಲ್ಲದಂತೆ ಮುಂದುವರಿದುಕೊಂಡು ಹೋಗಲು ನಾವು ಬಿಡುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಇದು ಅಂತಿಮಘಟ್ಟಕ್ಕೆ ಬರುವ ವೇಳೆಗೆ ಒಟ್ಟು 40 ಕೋಟಿ ರೂಪಾಯಿ ಡಿಫಿಸಿಟ್ ಆಗುತ್ತದೆ ಎಂದು ನಾನು ಹೇಳುತ್ತೇನೆ. ಇವೊತ್ತು ನೀವು ತಂದಿರತಕ್ಕ ಬಡ್ಜೆಟ್ಟು ಸಮತೋಲನದ ಬಡ್ಜೆಟ್ಟು, ಮಿತವಾದ ವೆಚ್ಚದಿಂದ ಕೂಡಿದತಕ್ಕ ಬಡ್ಜೆಟ್ಟು ಎಂದು ಹೇಳತಕ್ಕದ್ದರಲ್ಲಿ ಸತ್ಯಾಂಶ ಇಲ್ಲ. ಭೂಸುಧಾರಣೆಗೆ ಹಣವನ್ನು ಒದಗಿಸಿಲ್ಲ. ವಿದ್ಯಾಭ್ಯಾಸದ ಇಲಾಖೆಗೆ ಸುಮಾರು 5 ಕೋಟಿ ಕಡಿಮೆ ಇಟ್ಟಿದ್ದೀರಿ. ಇರಿಗೇಷನ್ ಪ್ರಾಜೆಕ್ಟಿಗೆ 10 ಕೋಟಿ ಕಮ್ಮಿ ಇಟ್ಟಿದ್ದೀರಿ. ಹೀಗಿರುವಾಗ 3.5 ಕೋಟಿ ರೆವಿನ್ಯೂ ಸರ್‌ಪ್ಲಸ್ ಬಡ್ಜೆಟ್ ಎಂದು ಹೇಳಿದ್ದೀರಿ. ಇದು ಸರಿಯಾಗಿಲ್ಲ. ಇದು ಸರ್‌ಪ್ಲಸ್ ಬಡ್ಜೆಟ್ ಆಗುವುದಿಲ್ಲ. ಇದು ಕನಿಷ್ಠ 40 ಕೋಟಿ ರೂಪಾಯಿಗಳ ಡಿಫಿಸಿಟ್ ಆಗುತ್ತದೆ. ಅದರ ಜೊತೆಗೆ ಇವೊತ್ತಿನ ದಿವಸ ಟ್ಯಾಕ್ಸಸ್ ಬಗ್ಗೆ ಹೇಳುವುದಾದರೆ ತಮ್ಮ ಬಜೆಟ್ ಭಾಷಣದ 26ನೇ ಪ್ಯಾರಾದಲ್ಲಿ ಅಂಕಿ ಅಂಶಗಳನ್ನು ಕೊಟ್ಟು ಹೇಳಿದ್ದೀರಿ. ಅಲ್ಲಿ ಕೋ-ಆಪರೇಟಿವ್ ಸಂಸ್ಥೆಗಳಿಗೆ 42 ಕೋಟಿ ರೂಪಾಯಿ ತೋರಿಸಿದ್ದೀರಿ. ಹಿಂದೆ ಅದು 45 ಕೋಟಿ ರೂಪಾಯಿ ಇತ್ತು; ಅದನ್ನು 42 ಕೋಟಿ ರೂಪಾಯಿಗೆ ಇಳಿಸಿದ್ದೀರಿ.

10-30 A.M.

ಇನ್ನು ಲ್ಯಾಂಡ್ ರೆವೆನ್ಯೂ ಮತ್ತು ನೀರಿನ ತೆರಿಗೆ ಬಗ್ಗೆ ಭೂತಲಿಂಗಂ ಕಮಿಟಿ ಹೇಳಿದರು ಎಂದು ಭಾಷಣದಲ್ಲಿ ನಮೂದಿಸಿದ್ದಾರೆ. ಇವತ್ತು ನಿಮಗೆ ಯಾವುದು ಅನುಕೂಲ ಕರವಾಗಿದೆ ಅದನ್ನು ನಿಮ್ಮದು ಎಂದು ಹೇಳುತ್ತಿದ್ದೀರಿ, ಮತ್ತು ಯಾವುದು ಅನಾನುಕೂಲಕರವಾಗಿದೆ ಅದನ್ನು ನಮಗೆ ಬಿಟ್ಟುಬಿಡುತ್ತೀರಿ.

[MR. CHAIRMAN (SRI SHARANAPPA) in the Chair]

Sri C. M. ARUMUGAM.—Mr. Chairman, I have to make a submission which I hope, you will consider. You know elections to the Legislative Council are going on and the Members of the Assembly will have to cast their votes. I feel morally that we will have to discharge our duty as members of the Assembly by participating in the debate. Since elections are going on, we cannot cast votes sitting in the Assembly. We cannot discharge both the responsibilities simultaneously. May I, therefore, suggest that there could be a break of one hour so that we can go out and cast our vote.

ಚೇರ್‌ಮನ್‌ರವರು.—ಮಾನ್ಯ ಸದಸ್ಯರು ಒಬ್ಬೊಬ್ಬರಾಗಿ ಹೋಗಿ ಓಟ್ ಹಾಕಿ ಬರಬಹುದು. ಎಲ್ಲರೂ ಒಂದೇ ಸಾರಿ ಹೋಗಿ ಓಟ್ ಹಾಕಬೇಕಾಗಿಲ್ಲ.

Sri D. DEVARAJ URS.—The hon. Member is not new to this House; he has been here previously too. Every time there is election to the Council, this House is not adjourned. This is the practice from the beginning.

Sri C. M. ARUMUGAM.—If a member goes to cast his vote, you will be depriving him of doing his duty in the Assembly.

Sri D. DEVARAJ URS.—Let us continue the practice in vogue so far.

Sri C. M. ARUMUGAM.—Let us create new precedents.

ಚೇರ್‌ಮನ್‌ರವರು.—ಹಿಂದೆ ಯಾವತ್ತೂ ಆ ರೀತಿಯ ಸಂಪ್ರದಾಯವನ್ನು ಮಾಡಿಲ್ಲ. ಆದ್ದರಿಂದ ಹೊಸದಾಗಿ ಸಂಪ್ರದಾಯವನ್ನು ಮಾಡುವುದು ಸೂಕ್ತವಲ್ಲ.

ಶ್ರೀ ಎಚ್. ಡಿ. ದೇವೇಗೌಡ.— ಈ ಲ್ಯಾಂಡ್ ರೆವೆನ್ಯೂ ಬಗ್ಗೆ ಗುಜರಾಥ್ ಸರ್ಕಾರದವರು ಇವೊತ್ತಿನ ದಿವಸ 6 ಎಕರೆಗಿಂತ ಕಮ್ಮಿ ಇರತಕ್ಕ ಹಿಡುವಳಿಯಮೇಲೆ ಕಂದಾಯ ವಜಾ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಅಲ್ಲಿಯೂ ನಿಮ್ಮ ಪಕ್ಷದವರದ್ದೇ ಸರ್ಕಾರ ಇದೆ. ನಮ್ಮ ಸರ್ಕಾರದವರು ಹಿಂದೆ ಅದೇ ಮಾತನ್ನು ಹೇಳಿದಾಗ ನೀವು ಅದನ್ನು ಚುನಾವಣಾ ಸ್ಟಂಟ್ ಎಂದು ಹೇಳಿದ್ದೀರಿ. ಆದರೆ ಈಗ ಅದರ ಬಗ್ಗೆ ತಾವು ಏನು ಹೇಳುತ್ತೀರಿ ? ಇವೊತ್ತಿನ ದಿವಸ ನೀವು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕಿದರೆ ಬಡರೈತರಿಗೆ ಬಹಳ ತೊಂದರೆಯಾಗುತ್ತದೆ. ವೀರೇಂದ್ರ ಪಾಟೀಲರು ಏನಾದರು ತೀರ್ಮಾನ ಮಾಡಿದ್ದರೆ ಅದನ್ನು ವೇಸ್ಟ್ ಪೇಪರ್ ಬ್ಯಾಸ್ಕೆಟಿಗೆ ಹಾಕಬೇಕೆಂದು ಹೇಳುತ್ತಿದ್ದೀರಿ. ಇದರಿಂದ ನೀವು ಅವರ ಮುಖಕ್ಕೆ ಮಸಿ ಬಳಿಯುವ ಪ್ರಯತ್ನವನ್ನು ಮಾಡುತ್ತಿದ್ದೀರಿ. ಇದರ ಬಗ್ಗೆ ತಾವು ಇವತ್ತು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ದೊಡ್ಡ ಶ್ರೀಮಂತರಾದವರಿಗೆ ಅನುಕೂಲ ಮಾಡಬೇಕೆಂದಿದ್ದರೆ ಅದನ್ನು ಹೇಳಿ. ಏಕೆಂದರೆ ಮಾನ್ಯ ಚನ್ನಬಸಪ್ಪನವರಿಗೆ ಹೆಚ್ಚು ಜಮೀನು ಇರುವುದರಿಂದ ಹೆಚ್ಚಿನ ಅನುಕೂಲವಾಗಬಹುದು. ಎರಡನೆಯದಾಗಿ ತಮ್ಮ ಬಜೆಟ್ ಭಾಷಣದಲ್ಲಿ ಒಂದು ಕೋಟಿ ಅಡಿಷನಲ್ ರೆವೆನ್ಯೂ ಬರುತ್ತದೆಂದು ಹೇಳಿದ್ದೀರಿ. ಅಂದರೆ ಹಳೆಯದ್ದನ್ನು ವಸೂಲಿ ಮಾಡಿ ಅಷ್ಟು ಬರುತ್ತದೆಂದು ಲೆಕ್ಕ ಹಾಕಿದ ಹಾಗೆ ಕಾಣುತ್ತದೆ. ಇನ್ನೊಂದು ವಿಚಾರವೇನೆಂದರೆ ತಾವು ಎಲೆಕ್ಷನ್ನಲ್ಲಿ ಗೆದ್ದಮೇಲೆ ಎರಡು ವರ್ಷದ ಕಂದಾಯ ಮಾತ್ರ ವಸೂಲು ಮಾಡಿ ಬಾಕಿ ವಸೂಲು ಮಾಡಬೇಡಿ ಎಂದು ಒಂದು ಸರ್ಕ್ಯುಲರ್ ಹೊರಡಿಸಿದಿರಿ. ಅದನ್ನು ಈಗ ಹಿಂತೆಗೆದುಕೊಂಡು ಈಗ ಪೂರ್ತಿಯಾಗಿ ವಸೂಲು ಮಾಡದಿದ್ದರೆ ನಿಮ್ಮ ಬಾಲ ಕತ್ತರಿಸುತ್ತೇವೆ, ಶಿಕ್ಷೆ ಕೊಡುತ್ತೇವೆ—ಇತ್ಯಾದಿ ಅಧಿಕಾರಿಗಳಿಗೆ ಹೇಳುತ್ತಿದ್ದೀರಂತೆ. ಸರ್ಕಾರದ ಹಣಕಾಸಿನ ಸ್ಥಿತಿಯನ್ನು ಉತ್ತಮಪಡಿಸಬೇಕೆಂದು ಬಡ ರೈತರಿಗೆ ಹಿಂಸೆ ಕೊಡುವುದು ಬೇಡ. ಅಲ್ಲದೆ ಈರೀತಿ ಮಾಡುವುದರಿಂದ ನಿಮಗೆ ಭೂಷಣವೂ ಬರುವುದಿಲ್ಲ. ಅಲ್ಲದೆ ತಾವು ಒಂದು ಕಾನ್ಫರೆನ್ಸ್ ಕರೆದು ಅಧಿಕಾರಿಗಳು ಯಾವ ರೀತಿ ವರ್ತನೆ ಮಾಡಬೇಕು ಮತ್ತು ಆಡಳಿತ ನಡೆಸಬೇಕೆಂಬುದರ ಬಗ್ಗೆ ಅಧಿಕಾರಿಗಳಿಗೆ ಹೇಳಿದ್ದೀರಿ.

ಆದರೆ ಇದರ ವಾಸ್ತವ ಪರಿಸ್ಥಿತಿ ಏನಾಗಿದೆ ಎಂದರೆ ಸರ್ಕಾರದವರು ಕೊಡತಕ್ಕ ವಾರ್ನಿಂಗ್ ಏನಿದೆ ಅದು ನನ್ನಂಥವನ ಮೇಲೇನೂ ಪರಿಣಾಮವನ್ನು ಉಂಟು ಮಾಡುತ್ತಿಲ್ಲ. ಅದರಿಂದ ಬಡ ಬೋರೇಗೌಡನ ಮೇಲೆ ಬಹಳ ಕೆಟ್ಟ ಪರಿಣಾಮವಾಗುತ್ತಿದೆ. ಈ ದಿವಸ ಆ ರೈತನ ಮಟ್ಟ ಎಲ್ಲಿಗಿಳಿದಿದೆ, ಎಷ್ಟು ಹೀನಾಯ ಸ್ಥಿತಿಗಿಳಿದಿದೆ ಎಂಬುದನ್ನು ಹೇಳಲಿಕ್ಕೇ ಸಾಧ್ಯವಿಲ್ಲ. ರೈತರಿಂದ ಬರಬೇಕಾದ ಬಾಕಿ ವಸೂಲಿಯನ್ನು ಸರ್ಕಾರ ಯಾವ ರೀತಿಯಲ್ಲಿ ನಡೆಸುತ್ತಿದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ನಮ್ಮಲ್ಲಿ ಒಬ್ಬ ರೈತ 1967 ರಲ್ಲಿ ಸಹಕಾರಿ ಸಂಘ ಒಂದರಲ್ಲಿ 300 ರೂಪಾಯಿಗಳನ್ನು ಸಾಲವಾಗಿ ಪಡೆದುಕೊಂಡು ಅದನ್ನು 1969 ರಲ್ಲಿ ತೀರಿಸಿದ್ದಾನೆ. ಆದಾಗ್ಯೂ ಆ ರೈತನು ಸಹಕಾರ ಸಂಘಕ್ಕೆ ಆ 300 ರೂಪಾಯಿಗಳ ಸಾಲಕ್ಕಾಗಿ ತೆರಬೇಕಾದ ಬಡ್ಡಿ, ಚಕ್ರಬಡ್ಡಿ, ಸುಸ್ತಿ ಬಡ್ಡಿ, ಇಲಾಖೆಯವರು ಹೊರಡಿಸಿದ ಹರಾಜ್ ನೋಟೀಸ್ ಫೀ ವಗೈರೆ ಮತ್ತು ಅವರು ಜೀಪಿನಲ್ಲಿ ಬಂದು ಹೋದ ಪೆಟ್ರೋಲ್ ಖರ್ಚು ಇತ್ತಿತ್ಯಾದಿಗಳೆಲ್ಲಾ ಸೇರಿ ಒಟ್ಟು 210 ರೂಪಾಯಿಗಳಾಗಿತ್ತು. ಅದನ್ನು ವಸೂಲ್ಮಾಡುವುದಕ್ಕಾಗಿ ಆ ರೈತನು ಮನೆಯಲ್ಲಿಲ್ಲದ ಕಾಲದಲ್ಲಿ ಅಂದರೆ ಅವನು ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ. ಅವನ ಮನೆಯ ಬೀಗ ಒಡೆದು, ಹಂಡೆ, ಲೋಟ, ತಟ್ಟೆ, ಚಂಬು ಇತ್ಯಾದಿ ಸಾಮಾನುಗಳನ್ನು ತೆಗೆದುಕೊಂಡು ಹೋಗಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಲ್ಯಾಂಡ್ ರೆವಿನ್ಯೂ ಬಾಕಿ ವಸೂಲಿಯನ್ನು ಮಾಡತಕ್ಕ ಬಗ್ಗೆ ರೈತರಿಗೆ ಹಿಂಸೆಯಾಗದಂತೆ ಅದನ್ನು ವಸೂಲ್ಮಾಡಬೇಕೆಂದು ತಿಳಿಸಿದ್ದೇವೆ. ಅಲ್ಲದೆ ಒಂದು ವರ್ಷದ ಬಾಕಿಯನ್ನು ಮಾತ್ರ ಕಲೆಕ್ಟ್ ಮಾಡಬೇಕೆಂದು ಹೇಳಿದ್ದೇವೆ. ಆದರೆ ಬಹಳ ಜನ ಬಾಕೀದಾರರಲ್ಲಿ ಆ ಬಾಕಿಯನ್ನು ಕೊಡುವುದಕ್ಕೆ ಚೈತನ್ಯವಿದ್ದಾಗ್ಯೂ ಕೊಡದೆ ಇರತಕ್ಕವರೇ ಹೆಚ್ಚು. ಬಹಳಮಟ್ಟಿಗೆ ಬಡವರು ಯಾರೂ ಬಾಕಿ ನಿಲ್ಲಿಸಿಕೊಂಡಿಲ್ಲ. ಆದರೆ ಬಾಕಿ ವಸೂಲಿಯನ್ನು ಹೆಚ್ಚು ತೊಂದರೆಯಾಗದ ರೀತಿಯಲ್ಲಿ ವಸೂಲ್ಮಾಡಬೇಕೆಂಬ ಸರ್ಕ್ಯುಲರ್ ಇನ್ನೂ ಹಾಗೆ ಇದೆ, ಅದನ್ನು ವಿತ್‌ಡ್ರಾ ಮಾಡಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಹೇಳುತ್ತಿರುವಂತೆ ಆ ಸರ್ಕ್ಯುಲರ್ ಇದ್ದರೂ ಅದನ್ನು ಕಾರ್ಯಗತ ಮಾಡುತ್ತಿಲ್ಲ. ಜಿಲ್ಲಾಧಿಕಾರಿಗಳು ತಾವು ಹೇಳತಕ್ಕ ಸರ್ಕ್ಯುಲರನ್ನು ಸಂಪೂರ್ಣವಾಗಿ ವಿತ್‌ಡ್ರಾ ಮಾಡಲಾಗಿದೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ಸಾಕ್ಷ್ಯ ಕೊಡಬಲ್ಲೆ. ನಾನೀಗ ಆ ಸಹಕಾರ ಸಂಘದವರು ಮಾಡುತ್ತಿರುವ ಕ್ರಮವನ್ನು ಹೇಳುತ್ತಿದ್ದೆ. ಅವರು ನಿಮ್ಮ ಆದೇಶಕ್ಕೆ ಮೀರಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಒಂದು ವರ್ಷದ ಬಾಕಿಯನ್ನು ವಸೂಲ್ಮಾಡಬೇಕೆಂದು ಹೇಳಿದೆ. ಅದರಲ್ಲೂ ಯಾರಿಗೆ ಆ ಬಾಕಿಯನ್ನು ಕೊಡುವುದಕ್ಕೆ ಶಕ್ತಿ ಇದೆಯೋ ಅಂಥವರಿಂದ ಅದನ್ನು ಕಡ್ಡಾಯವಾಗಿ ವಸೂಲ್ಮಾಡಲೇ ಬೇಕುಮತ್ತು ಕೊಡುವುದಕ್ಕೆ ಶಕ್ತಿ ಇರುವವರಲ್ಲ ಅದನ್ನು ಬಿಡುವುದಕ್ಕಾಗುತ್ತದೆಯೇ ?

ಶ್ರೀ ಎಚ್. ಡಿ. ದೇವೇಗೌಡ.—ಜನರಿಗೆ ಎಷ್ಟು ಕಿರುಕುಳ ಆಗುತ್ತಿದೆ ಎಂಬುದನ್ನು ಹೇಳುತ್ತಿದ್ದೇನೆ; ಅಷ್ಟೇ. ತಾವು ಹಿಂದೆ ಒಂದಾವರ್ತಿ ಮಡಕೇರಿಯಲ್ಲಿ ಭಾಷಣ ಮಾಡುತ್ತಿದ್ದಾಗ ರೈತರಿಗೆ ಕೊಡತಕ್ಕ ಸಾಲದ ಮೇಲಿನ ಬಡ್ಡಿಯನ್ನು ಅಂದರೆ ಬಡ್ಡಿ ದರವನ್ನು ಕಡಮೆ ಮಾಡಲಾಗುತ್ತದೆ ಎಂದು ಹೇಳಿದ್ದಿರಿ. ಅದಕ್ಕಾಗಿ ನಾನೀಗ ತಮ್ಮನ್ನು ಕೇಳುತ್ತೇನೆ......

ಶ್ರೀ ಕೆ. ಎಚ್. ಪಾಟೀಲ್ (ವ್ಯವಸಾಯ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು).—ನಮ್ಮ ಚೀಫ್ ಮಿನಿಸ್ಟರು ಹೇಳಿದಂತೆ ವರಲ್ಡ್ ಬ್ಯಾಂಕಿನವರು ಕೊಡುತ್ತಿದ್ದ ಬಡ್ಡಿ ದರ ಶೇಕಡ 12 ಇದ್ದುದು ಈಗ ಎಂಟೂವರೆ ಪರ್ಸೆಂಟಿಗೆ ಇಳಿದಿದೆ. ಅಂದಾಗ ಬಡ್ಡಿ ದರ ಕಡಮೆಯಾಗಲಿಲ್ಲವೆ ?

Sri H. D. DEVEGOWDA.—You have said that you are going to think of some other agency to give financial assistant to formers at a lower rate of interest. ಆದರೆ ಸರ್ಕಾರದವರು ಈ ದಿವಸ ಕೊಡುತ್ತಿರುವ ಸಾಲಕ್ಕೆ 10 ಪರ್ಸೆಂಟಿಗೆ ಕಡಿಮೆ ಇಲ್ಲದೆ ಬಡ್ಡಿಯನ್ನು ವಿಧಿಸುತ್ತಿದ್ದಾರೆ...

Sri D. DEVARAJ URS.—The Reserve Bank gives to the Apex Bank at the rate of 4%; the Apex Bank to the District Bank at the rate of 6½%. Then 2½% is included at the primary and district levels and the whole thing becomes 8½%. They are now charging 9% to 10%. I am talking only with reference to medium and short term loans. It varies between 9% to 10%. What I said there was this :

> "This is a matter you have to seriously think about. At one end you have 4 per cent interest and at the other end it works out to 10 per cent. In between 6 per cent variation is there. Can we not minimise it ? If structural change in the co-operative sector is needed, should we not think of it ? What are the possibilities ? You please think over."

ಶ್ರೀ ಎಚ್. ಡಿ. ದೇವೇಗೌಡ.—ನಾನು ಪತ್ರಿಕೆಗಳಲ್ಲಿ ನೋಡಿರತಕ್ಕ ವರದಿಯ ಪ್ರಕಾರ ಸರ್ಕಾರದವರು ಅದರಲ್ಲೂ ಮುಖ್ಯಮಂತ್ರಿಗಳ ಹೇಳಿಕೆಯನ್ನು ಹೇಳಿದೆ. You have said that the Government has to think of an alternative agency to advance agricultural finance at a lower rate of interest. ಹೀಗೆ ಹೇಳಿದ್ದಾರೆ. ಈ ದಿವಸ ನಾನು ಹಾಗೆ ಹೇಳಲಿಲ್ಲ, ಪತ್ರಿಕೆಗಳಲ್ಲಿ ವರದಿಯಾಗಿರತಕ್ಕದ್ದು ಸತ್ಯವಾದ್ದಲ್ಲ ಎಂದು ಹೇಳಿ.

ಶ್ರೀ ಡಿ. ದೇವರಾಜ ಅರಸ್.—ತಾವು ಇದೊಂದು ವಿಷಯದಲ್ಲೇ ಕಳೆದ ಹತ್ತು ನಿಮಿಷಗಳಿಂದ ಮಾತನಾಡುತ್ತಿದ್ದೀರಿ. ಕೋರ್ಟಿನಲ್ಲಿ ಡಿಕ್ರಿಯಾಗಿರತಕ್ಕ ಹಣವನ್ನು ಹೇಗೆ ವಸೂಲ್ಮಾಡಬೇಕು ?

Sri H. D. DEVE GOWDA.—I am not particular about individuals. ಆದರೆ ಸರ್ಕಾರದವರು ಈ ದಿವಸ ಡಿಫಾಲ್ಟರ್ಸ್‌ರಿಂದ ವಸೂಲ್ಮಾಡುತ್ತಿರುವುದು ಯಾವ ದರದ ಬಡ್ಡಿ ಆಗುತ್ತದೆಂದರೆ, ಅದು 18 ಪರ್ಸೆಂಟಿಗಿಂತ ಹೆಚ್ಚಾಗಿ ವರ್ಕ್‌ಔಟ್ ಆಗುತ್ತದೆ......

Sri D. DEVARAJ URS.—We will examine it. That is not a new matter. You are also in the co-operative movement. That is a matter which has got to be examined. I cannot say offhand about it. We have to sit and discuss about penal interest.

ಶ್ರೀ ಎಚ್. ಎಲ್. ನಂಜೇಗೌಡ.—ನಿಮ್ಮ ಸರ್ಕಾರವಿದ್ದಾಗಲೂ ಅದು ಹಾಗೇ ವರ್ಕ್ಔಟಾಗುತ್ತಿತ್ತು.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮದು ಪ್ರಗತಿಪರ ಸರ್ಕಾರ. ನೀವು ಮಾಡಿ ಈಗ. ಆದರೆ ನಾನು ಹೇಳುತ್ತಿರುವುದು ಈ ಬಾಕಿಯನ್ನು ಫೇಸ್ ಟ್ಯೆ ಫೇಸ್ ವಸೂಲ್ಮಾಡಬೇಕು ಎಂದು.

ಶ್ರೀ ಡಿ. ದೇವರಾಜ ಅರಸ್.—ಅಯ್ಯೋ ಪಾಪ ಎಂದರೆ ಬಾಕಿ ವಸೂಲಾಗುತ್ತದೆಯೇ ? ಕಿರುಕುಳವನ್ನು ಕೊಡದೆ ಬಾಕಿ ವಸೂಲ್ಮಾಡುವುದಕ್ಕೆ ಆಗುವುದೇ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಸಾಲವನ್ನು ವಸೂಲುಮಾಡುವಾಗ ಬಹಳ ಕಠಿಣವಾಗಿ ವಸೂಲುಮಾಡಬೇಕಾಗುತ್ತದೆ ಎಂಬುದಾಗಿ ಹೇಳಿದರೆ ಬಹಳ ಸಂತೋಷ. ಬಹಳ ಕಠಿಣವಾಗಿ ವಸೂಲುಮಾಡಿ. ಆದರೆ ಯಾವ ಸಂದರ್ಭದಲ್ಲಿ ಕಠಿಣತೆ ಪ್ರಯೋಗಮಾಡಬೇಕೆಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಿ. ನಾನು ಹಿಂದೆ ಸಹಕಾರ ಮಂತ್ರಿಗಳನ್ನು ಸಣ್ಣ ಸಣ್ಣ ರೈತರಿಂದ ಎಷ್ಟೆಷ್ಟು ಸಾಲ ಬಾಕಿ ಇದೆಯೆಂಬುದನ್ನು ಸಂಗ್ರಹಮಾಡಿ ಮುಖ್ಯಮಂತ್ರಿಗಳಿಗೆ ಕೊಡಿ ಎಂದು ಕೇಳಿದರೆ, ಅದನ್ನು ಇನ್ನೂ ಮಾಡಿಲ್ಲ. ಕಾಂಗ್ರೆಸ್ (ಆರ್) ಆಫೀಸ್ ಬೇರರ್ಸ್ ಸುಮಾರು ಎರಡು ಸಾವಿರ ರೂಪಾಯಿಗಳಷ್ಟು ಮಿಸ್‌ಅಪ್ರೋಪ್ರಿಯೇಷನ್ ಮಾಡಿದ್ದಾರೆಂದು ಹೇಳಿದಮೇಲೆ ಆ ವಿಷಯ ಏನಾಯಿತೋ ಗೊತ್ತಾಗಲಿಲ್ಲ. ಇನ್ನು ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್ ಬಗ್ಗೆ ಐರನ್ ಹ್ಯಾಂಡೆಡ್ ಆಗಿ ಡೀಲ್‌ಮಾಡುತ್ತೇವೆ, ಸಾಲಗಳನ್ನು ಕಠಿಣವಾಗಿ ವಸೂಲು ಮಾಡಬೇಕಾಗುತ್ತದೆಂದು ಹೇಳಿದಿರಿ. ರಾಜಕೀಯ ಮುಖಂಡರು ಯಾರೇ ಆಗಿರಲಿ ಆಫೀಸು ಅಥವಾ ಇಲಾಖೆಗಳಲ್ಲಿ ಯಾರೇ ಮೇಲಿರಲಿ, ಅವರ ಮೇಲೆ ತಾವು ಎಷ್ಟರಮಟ್ಟಿಗೆ ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕು. ಪಾರ್ಟಿಗಳಲ್ಲಿ ಎಷ್ಟೆಷ್ಟು ತಿಂದು ಮುಳುಗಿಸಿದ್ದೀರಿ ಎಂಬುದನ್ನು ಈ ಅಧಿವೇಶನದಲ್ಲಿ ಚರ್ಚೆ ಮಾಡೋಣ. ಎಲ್ಲೆಲ್ಲಿ ಏನೇನು ಮಾಡುತ್ತಿದ್ದೀರಿ ಎಂಬುದನ್ನೆಲ್ಲಾ ನಾನು ತಿಳಿದುಕೊಳ್ಳುತ್ತಿದ್ದೇನೆ. ನೀವು ಹೇಳುವುದನ್ನೆಲ್ಲಾ ಎಲವನ್ನೂ ಇಲ್ಲಿ ಕೂತುಕೊಂಡು ಕೇಳುತ್ತಿದ್ದೇನೆ. ಒಟ್ಟಿನಲ್ಲಿ ಯಾರ್‍ಯಾರನ್ನು ಹಿಡಿದು ಯಾವರೀತಿ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬುದನ್ನು ನೋಡುತ್ತೇನೆ. ನೀವು ಯಾವ್ಯಾವ ರೀತಿಯಲ್ಲಿ ಕೆಲವಾರು ಸಂದರ್ಭಗಳಲ್ಲಿ ಇಂಟರ್‌ವ್ಯೂ ಮಾಡಿದ್ದೀರಿ ಎಂಬುದನ್ನೂ ಸಹ ನಾನು ಪ್ರೂವ್ ಮಾಡುತ್ತೇನೆ. ಆದರೆ ಅದರಲ್ಲಿ ಸತ್ಯಾಂಶವಿಲ್ಲದಿದ್ದರೆ ನಾನು ಮಾಡಿರತಕ್ಕ ಅಪಾದನೆಗಳನ್ನು ನಾನು ಹಿಂದಕ್ಕೆ ವಾಪಸ್ಸು ಪಡೆಯುತ್ತೇನೆ. ನಾನು ಯಾವಾಗಲೂ ವಿಷಯಗಳನ್ನು ಚೆನ್ನಾಗಿ ಅಳೆದು ಮಾತನಾಡುತ್ತೇನೆ. ಯಾವ ವಿಷಯವನ್ನೂ ಸಹ ಅಷ್ಟು ಲಘುವಾಗಿ ಮಾತನಾಡುವವನಲ್ಲ.

Sri C. M. ARUMUGAM.—Particularly our Leader of the Opposition speaks only with facts. He never speaks without facts.

Sri D. DEVARAJ URS.—I want more and more facts.

Sri C. M. ARUMUGAM.—He takes a lot of time in getting at facts and studying them. He collects facts even from Journals and other literatures and brings them here and makes reference. It cannot be treated lightly. Those facts must be heard with all seriousness. The Chair must tell the Hon'ble Finance Minister that when the Leader of the Opposition speaks, he speaks only facts and nothing but facts.

Sri D. DEVARAJ URS.—We are happy for whatever facts that are brought before us. He has promised to give out names of all. I am waiting for it.

Sri H. D. DEVE GOWDA.—Unfortunately, I cannot give all names. I can quote several instances.

Sri D. DEVARAJ URS.—Left to myself, I do not mind giving out any name.

ಶ್ರೀ ಎಚ್. ಡಿ. ದೇವೇಗೌಡ.—ತಮಗೂ ಗೊತ್ತಿದೆ. ಈ ಸಭೆಯಲ್ಲಿ ಯಾರ ಹೆಸರನ್ನು ಹೇಳಬಾರದೆಂದು. ಅಂದಮೇಲೆ ನಾನು ಯಾರ ಹೆಸರನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಸೊಸೈಟಿಗಳ ಹೆಸರುಗಳನ್ನು ಬೇಕಾದರೆ ಇಲ್ಲಿ ಹೇಳಬಹುದು. ಅದಕ್ಕೆ ಅಭ್ಯಂತರವಿಲ್ಲ. ಮತ್ತೆ ಇನ್ನು ಕೆಲಸಕ್ಕೆ ಪೂರ್ತಿ ವಿವರಣೆ ಕೊಡುತ್ತೇನೆ, ಬೇಕಾದರೆ ಪತ್ರ ಬರೆಯುತ್ತೇನೆ. ಅದರ ಬಗ್ಗೆ

ಚರ್ಚೆಮಾಡೋಣ. ಅವರು ಯಾವ ಸ್ಥಾನದಲ್ಲಿಯೇ ಇರಲಿ, ಯಾವುದೇ ಕಾನೂನನ್ನು ಬದಲಾವಣೆ ಮಾಡುವ ಸಂದರ್ಭದಲ್ಲಿ ಸ್ಥಾನಮಾನ ಮುಖ್ಯವಲ್ಲವೆಂದು ಮುಖ್ಯಮಂತ್ರಿಗಳೇ ಒಂದು ಸಾರಿ ಹೇಳಿದ್ದಾರೆ. ಆದ್ದರಿಂದ ಯಾವ್ಯಾವ ಕೇಸಿನಲ್ಲಿ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ನಾನು ಈ ಸಂದರ್ಭದಲ್ಲಿ ಕೇಳಬೇಕಾಗುತ್ತದೆ.

ಇನ್ನು ಮಾರಾಟ ತೆರಿಗೆಯನ್ನು ಶೇಕಡ 3 ರಿಂದ 3.5ಕ್ಕೆ ಎನ್‌ಹ್ಯಾನ್ಸ್ ಮಾಡಿದ್ದಾರೆ. ಭೋಗವಸ್ತುಗಳ ಮಾರಾಟ ತೆರಿಗೆಯನ್ನು ಶೇಕಡ 12 ರಿಂದ 14ಕ್ಕೆ ಹೆಚ್ಚಿಸಲಾಗಿದೆ. ಹಣಕಾಸಿನ ಸಚಿವರು ಹಿಂದೆ ಇಂಟೆರಿಮ್ ಬಡ್ಜೆಟ್ಟನ್ನು ಮಂಡಿಸಿದಾಗ ಯಾವ ತೆರಿಗೆಯೂ ಇಲ್ಲದಂಥ ಬಡ್ಜೆಟ್ಟನ್ನು ಈ ಸಭೆಯ ಮುಂದೆ ಮಂಡಿಸಿದ್ದಕ್ಕಾಗಿ ಪ್ರತಿಯೊಬ್ಬ ಸದಸ್ಯರೂ ಈ ಸಭೆಯಲ್ಲಿ ಅಭಿನಂದನೆ ಮಾಡಿದ್ದಾರೆ. ಇವತ್ತು ಮಾರಾಟ ತೆರಿಗೆಯನ್ನು ಮೂರುವರೆ ಕೋಟಿ ರೂಪಾಯಿಗಳ ವರೆಗೂ ತಂದಿದ್ದಾರೆ. ನೀರಾವರಿ ತೆರಿಗೆಯನ್ನು 30 ರೂಪಾಯಿಗಳಿಂದ 60 ರೂಪಾಯಿಗಳವರೆಗೆ ತಂದಿದ್ದೀರಿ. ಈ ರೀತಿಯಲ್ಲಿ ಹೇಳಿಕೆಯನ್ನು ಕೊಡುವಾಗ ಈ ವಿಚಾರದಲ್ಲಿ ಮಾನ್ಯ ಶ್ರೀ ನಿಜಲಿಂಗಪ್ಪನವರ ಹೆಸರನ್ನು ಪ್ರಯೋಗಮಾಡಿದ್ದೀರಿ. ಅವರ ಹೆಸರನ್ನು ನಿಮ್ಮ ಬಡ್ಜೆಟ್ ಭಾಷಣದಲ್ಲಿ ಇನ್‌ಕ್ಲೂಡ್ ಮಾಡುವುದಕ್ಕೆ ಅಷ್ಟು ಸಹನೆ, ಸೌಜನ್ಯತೆ ಹೇಗೆ ಬಂತು ಎಂದು ಕೇಳಬೇಕಾಗಿದೆ. ಕೇವಲ ಮಾನ್ಯ ಶ್ರೀ ನಿಜಲಿಂಗಪ್ಪನವರ ಹೆಸರನ್ನು ಮಾತ್ರ ಸೂಚಿಸದೆ ಅವರ ಸಮಿತಿಯವರು ಹೇಳಿದ್ದಾರೆಂದು ತಿಳಿಸಿದ್ದೀರಿ. ಅದನ್ನು ಕಾರ್ಯರೂಪಕ್ಕೆ ತರಲು ತಮ್ಮ ಹಣದ ಪರಿಸ್ಥಿತಿ ಚೆನ್ನಾಗಿಲ್ಲ, ಏತಕ್ಕೋಸ್ಕರ ಇದಕ್ಕೆ ಕೈಹಾಕಬೇಕೆಂದು ಹೇಳುವುದನ್ನು ಬಿಟ್ಟು ಅವರ ಸಮಿತಿಯವರು ಶಿಫಾರಸು ಕೊಟ್ಟರೆಂಬುದಾಗಿ ಹೇಳಿದ್ದಾರೆ. ಈ ವಿಚಾರದಲ್ಲಿ ಭೂತಲಿಂಗಂ ಸಮಿತಿಯೂ ಸಹ ಶಿಫಾರಸು ಮಾಡಿದೆ. ಇದರಿಂದ ರಾಜ್ಯದಲ್ಲಿರತಕ್ಕ ರೈತರ ಪರಿಸ್ಥಿತಿ ಅಸಹಾಯಕತೆಗೆ ಒಳಪಟ್ಟಿದೆ. ಅವರು ಯಾವುದೋ ಒಂದು ಕಾರಣವನ್ನು ಕೊಟ್ಟು ರೈತರ ಮೇಲೆ 60 ರೂಪಾಯಿಗಳಂತೆ ತೆರಿಗೆ ಹಾಕಿದರೆ ನಿಮ್ಮ ಇನ್‌ವೆಸ್ಟ್‌ಮೆಂಟ್‌ನಲ್ಲಿ ಖಂಡಿತವಾಗಿ ರಿಟರ್ನ್ ಸಿಗುವುದಿಲ್ಲ. ಆದರೆ ಇನ್‌ಡೈರೆಕ್ಟಾಗಿ ಏನಾದರೂ ಬೆನಿಫಿಟ್ ಸಿಗಬಹುದು.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಅವರಿಗೆ ನೀರನ್ನು ಪುಕಸಟ್ಟೆ ಬಿಡೋಣವೆಂದು ಹೇಳುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಅವನಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸುವುದಕ್ಕಾಗಿ ಇನ್ನು ಮುಂದೆ 60 ರೂಪಾಯಿಗಳನ್ನು ಚಾರ್ಜ್ ಮಾಡುತ್ತೀರಿ. ಇದು ಬಹಳ ಜಾಸ್ತಿ. ನಗರ ಪ್ರದೇಶಗಳಲ್ಲಿರತಕ್ಕವರಿಗೆ ಏನೇನು ಸೌಲಭ್ಯಗಳನ್ನು ಕೊಡುತ್ತಿದ್ದೀರಿ ಎಂಬುದನ್ನು ಹೇಳಿ. ಆ ರೀತಿಯಾಗಿ ಏನಾದರೂ ಸೌಲಭ್ಯಗಳನ್ನು ಕೊಡುತ್ತಿದ್ದರೆ ಅದೂ ಕೂಡ ಕನ್‌ಸ್ಯೂಮರ್ಸ್ ಮೇಲೆಯೇ ಹೋಗುತ್ತದೆ. ಇವತ್ತು ಎಷ್ಟೆಷ್ಟು ತೆರಿಗೆಗಳನ್ನು ಅವರಿಂದ ನೀವು ವಸೂಲು ಮಾಡುತ್ತಿದ್ದೀರಿ ಎಂಬ ಬಗ್ಗೆ ವಿವರಣೆ ಬೇಕು. ಹೀಗೆ ಸುಮ್ಮನೆ ರೈತರಮೇಲೆ ತೆರಿಗೆ ಹಾಕುವುದಕ್ಕೆ ಬದಲಾಗಿ ಕಪ್ಪು ಹಣ ಅಥವಾ ಬ್ಲಾಕ್ ಮನಿ ಇಟ್ಟಿರುವವರನ್ನು ಹೊರಗೆ ತೆಗೆಯುವುದಾದರೆ, ನಿಮಗೆ ಎಷ್ಟೋ ಹಣ ಉಳಿತಾಯವಾಗುತ್ತದೆ. ನಿಮ್ಮ ಯೋಜನೆಗಳಿಗೆ ಹೆಚ್ಚಿಗೆ ಹಣವೂ ದೊರೆಯುತ್ತದೆ. ಕೇಂದ್ರ ಸರ್ಕಾರದವರು ವಾಂಚೂ ಕಮಿಟಿ ಎಂದು ಮಾಡಿದ ಮೇಲೆ ಆ ಕಮಿಟಿಯ ಶಿಫಾರಸುಗಳ ಪ್ರಕಾರ ಅಲ್ಲಿ ಕ್ರಮ ತೆಗೆದುಕೊಂಡಿದ್ದಕ್ಕಾಗಿ ಸುಮಾರು 6–7 ಸಾವಿರ ಕೋಟಿ ರೂಪಾಯಿಗಳಷ್ಟು ಬ್ಲಾಕ್‌ಮನಿ ಬಂದಿದೆ. ಅದೇ ರೀತಿಯಾಗಿ ತಾವು ಸಹ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ನೀವೂ ಸಹ ಅಂತಹ ಕ್ರಮವನ್ನು ತೆಗೆದುಕೊಂಡು ಬ್ಲಾಕ್‌ಮನಿ ಇರತಕ್ಕದ್ದನ್ನು ತೆಗೆದಿದ್ದರೆ ನಿಮ್ಮನ್ನು ನಾನು ಖಂಡಿತವಾಗಿ ಸ್ವಾಗತಮಾಡುತ್ತಿದ್ದೆ. ನೀವು ಆ ರೀತಿ ಮಾಡಿಲ್ಲ. ಕೇವಲ ಮಾರಾಟ ತೆರಿಗೆ ಮತ್ತು ವಾಟರ್ ರೇಟ್ ಹಾಕುವುದರಿಂದ ರೈತರಿಗೆ ಮತ್ತು ಜನಸಾಮಾನ್ಯರಿಗೆ ತೊಂದರೆಯೇ ಹೊರ್ತು ಮತ್ತೇನೂ ಇಲ್ಲ. ಬಹುಶಃ ನಾವೂ ನೀವೂ ಹಳ್ಳಿಯಿಂದ ಬಂದಿರುವ ಜನರೇ. ನೀವು ಹುಣಸೂರು ತಾಲ್ಲೂಕಿನಿಂದ ಮೊನ್ನೆತಾನೇ ಆರಿಸಿ ಬಂದಿದ್ದೀರಿ. ತೆರಿಗೆಗಳನ್ನು ಹಾಕುವ ಬಗ್ಗೆ ಹೆಚ್ಚು ನಿಗಾ ವಹಿಸಬೇಕಾಗುತ್ತದೆ. ನೀವು ತೆರಿಗೆ ಹಾಕಿದಮೇಲೆ ರೈತರು ಕೊಡಲೇ ಬೇಕು. ನಿಮ್ಮನ್ನು ಅಧಿಕಾರದಿಂದ ಕಿತ್ತು ಹಾಕಿದ ಮೇಲೆ ತೆರಿಗೆಯ ಭಾರವನ್ನು ರೈತರಿಗೆ ಕಡಿಮೆಮಾಡುವುದಕ್ಕೆ ಸಾಧ್ಯವಾಗುತ್ತದೋ ಏನೋ ಗೊತ್ತಿಲ್ಲ.

ಶ್ರೀ ಡಿ ದೇವರಾಜ್ ಅರಸ್.—ಕಬ್ಬು ಬೆಳೆಯುವವರು ತೆರಿಗೆ ಕೊಡಬಾರದೆಂದು ನೀವು ಹೇಳಿದರೆ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಅಭಿಪ್ರಾಯ ಆ ರೀತಿ ಇಲ್ಲ. ತೆರಿಗೆ ಹೆಚ್ಚುಮಾಡಕೂಡ ದೆಂದು ನಾನು ಹೇಳಿದ್ದು. ನಮ್ಮಲ್ಲಿ ಎಷ್ಟರಮಟ್ಟಿಗೆ ನಿಷ್ಠಾವಂತ ಪಹಣಿ ಲೆಕ್ಕ ಬರೆಯುವವರು ಇದ್ದಾರೆಂಬುದನ್ನು ನೋಡಬೇಕು. ಅವರ ಬಗ್ಗೆ ನಾನು ಹೆಚ್ಚಿಗೆ ವ್ಯಾಖ್ಯಾನ ಮಾಡುವುದಕ್ಕಾಗು ವುದಿಲ್ಲ. ನೀವು ಮಂಡ್ಯಾ ಜಿಲ್ಲೆಯನ್ನೊಂದೇ ಇಟ್ಟುಕೊಂಡು ಮಾತನಾಡಬೇಡಿ. ನಿಮ್ಮಲ್ಲಿ ಮೆಜಾರಿಟಿ ಇದೆಯೆಂದು ಭತ್ತದ ಬೆಳೆಗೂ ಎಕರೆಯೊಂದಕ್ಕೆ ನೀರು ದರವನ್ನು 20 ರೂಪಾಯಿನಂತೆ ವಿಧಿಸುತ್ತಿರುವುದು ನಿಜವಾಗಿ ಸಾಧುವಾದುದಲ್ಲ. ಕಬ್ಬಿಗೆ 30 ರಿಂದ 60ಕ್ಕೆ ಹೆಚ್ಚಿಸಿ ನೀರುದರವನ್ನು ವಿಧಿಸಿರುವುದು ಹೀಗೆ ಒಂದಕ್ಕೆ ಎರಡರಷ್ಟು ಏರಿಸಿರುವುದು ನಿಜವಾಗಿಯೂ ಸರಿಯಲ್ಲ. ಈ ರೀತಿ ಮಾನ್ಯ ಅರ್ಥಿಕ ಸಚಿವರು ಮಾಡಬಾರದಾಗಿತ್ತು, ಇಂಥ ಕಾರ್ಯಕ್ಕೆ ಅವರು ಕೈ ಹಾಕ ಬಾರದಾಗಿತ್ತು.

ಆಮೇಲೆ ಐದನೆಯ ಪಂಚವಾರ್ಷಿಕ ಯೋಜನೆ ಬಗ್ಗೆ ಹೇಳಿದ್ದಾರೆ.

11-00 A.M.

ಶ್ರೀ ಎಂ. ವೈ. ಘೋರ್ಪಡೆ.—ಕಬ್ಬಿನ ವಿಷಯ ಹೇಳುವುದಾದರೆ ಶ್ರೀ ನಿಜಲಿಂಗಪ್ಪನವರ ಸಮಿತಿ ಒಂದೇ ಅಲ್ಲ, ಇದುವರೆಗೆ ನೇಮಕವಾಗಿದ್ದ ಸಮಿತಿಗಳೆಲ್ಲವೂ ಹೇಳಿವೆ. 40 ಟನ್ ಕಬ್ಬು ಬೆಳೆದರೆ 3, 00 ರೂಪಾಯಿಗಳವರೆಗೆ ಆದಾಯ ಬರುವುದು. ಶೇಕಡ 5 ಗ್ರಾಸ್ ಇನ್‌ಕಂ ಅಂದರೆ 180 ರೂಪಾಯಿ ಆಗುವುದು. ಅದರಲ್ಲಿ ಮೂರನೆ ಒಂದು ಭಾಗ 60 ರೂಪಾಯಿ ವಿಧಿಸಲಾಗಿದೆ. ಮಹಾರಾಷ್ಟ್ರದಲ್ಲಿ 200 ರೂಪಾಯಿಗಳವರೆಗೂ ವಿಧಿಸಿದ್ದಾರೆ. ಆ ದೃಷ್ಟಿಯಿಂದ ಸಮಿತಿಯ ಹೆಸರನ್ನೂ ನನ್ನ ಭಾಷಣದಲ್ಲಿ ಸೇರಿಸಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ದೊಡ್ಡ ಮನಸ್ಸು ಮಾಡಿ 180 ರೂಪಾಯಿ ಹಾಕದೆ 60 ರೂಪಾಯಿ ಮಾತ್ರ ಹಾಕಿದ್ದೀರಿ. ಬಹಳ ಔದಾರ್ಯದಿಂದ ಈ ಕೆಲಸ ಮಾಡಿದ್ದೀರಿ. ಬಹಳ ಸಂತೋಷ. ಆದರೆ ನಮಗೆ ಸಮಾಧಾನವಿಲ್ಲ. ಇದು ಸರಿಯಲ್ಲ ಎಂದು ನಾವು ಹೇಳುತ್ತಿದ್ದೇವೆ.

ಶ್ರೀ ಎಂ. ವೈ. ಘೋರ್ಪಡೆ.—120 ರೂಪಾಯಿ ಎಕರೆಗೆ ಇದ್ದರೆ ಕಂಪ್ಲೀಟ್ ರಿಟರ್ನ್ ಬರುವುದು. 60 ಕೊಡುವುದು ದೊಡ್ಡ ಮಾತಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಕೊನೆಯದಾಗಿ ಪ್ಯಾರಾ 45 ರಲ್ಲಿ ಸಾಮಾಜಿಕ ನ್ಯಾಯ ಎಂಬ ಪದಗಳನ್ನು ಹಾಕಿದ್ದೀರಿ. ಆತ್ಮಾವಲಂಬನೆ ಮುಂತಾದ ಕೆಲವು ಪದಗಳೇನು ಬಳಸಿದ್ದೀರಿ ಅವು ಬಹಳ ಚೆನ್ನಾಗಿವೆ. ಸೋಷಿಯಲ್ ಜಸ್ಟಿಸ್ ಎಂಬುದಕ್ಕೆ ಸಾಮಾಜಿಕ ನ್ಯಾಯ ಎಂದು ಹೇಳಿದ್ದೀರಿ. ಮಂತ್ರಿಗಳು ಮಹಡಿ ಕಟ್ಟುವುದಕ್ಕೆ ಲೈಸೆನ್ಸ್ ಬೇಕಾಗಿಲ್ಲ, ಇದು ಸೋಷಿಯಲ್ ಜಸ್ಟಿಸ್. ಅರ್ಥ ಸಚಿವರು ಇದನ್ನು ವಿವರಿಸಬೇಕು. ಈ ರಾಜ್ಯದಲ್ಲಿ ಸೋಷಿಯಲ್ ಜಸ್ಟಿಸ್ ಇದೆ ಎಂದು ಹೇಳುವರು, ಅದನ್ನು ಜಾರಿಗೆ ತರಲು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಒಬ್ಬ ಮಂತ್ರಿಗಳು ಹೋಗಿ ಅಕ್ರಮವಾಗಿ ಯಾರೋ ಮನೆ ಕಟ್ಟಿದ್ದಾರೆಂದು ನಿಂತು ಅದನ್ನು ಒಡೆಸಿ ಹಾಕಿಸುವುದು ಡಿಕ್ಟೇಟರ್‌ಷಿಪ್ ಅಲ್ಲವೇ ? ಬೇಕಾದವರು ಲೈಸೆನ್ಸ್ ಇಲ್ಲದೆ ಮನೆ ಕಟ್ಟಬಹುದು, ಬೇಕಾದರೆ ಕಾರ್ಪೋರೇಷನ್ನಿನಿಂದ ಫೈಲನ್ನು ತರಿಸಿ ನೋಡಿ. ಸಾಮಾಜಿಕ ನ್ಯಾಯವೇ ಇದು ? ಮಂತ್ರಿಗಳು ಹಿಡಿತದಲ್ಲಿದ್ದಾರೆಯೇ ? ಅರ್ಥ ಸಚಿವರು ಸಾಮಾಜಿಕ ನ್ಯಾಯದ ಉಪದೇಶ ಹೇಳುತ್ತಿದ್ದಾರೆ. ಅವರು ಮಾತುಗಳು ಪದಗಳ ಪ್ರಯೋಗ ಬಹಳ ಚೆನ್ನಾಗಿದೆ.

ಶ್ರೀ ಎಂ. ವೈ. ಘೋರ್ಪಡೆ.—ಸಾಮಾಜಿಕ ನ್ಯಾಯ ಎಂಬ ಪದವನ್ನು ಉಪಯೋಗಿಸ ಬಾರದೇ ? ಆ ಉದ್ದೇಶ ಕೂಡ ಇರಬಾರದು ಎಂಬುದು ನಿಮ್ಮ ಅಭಿಪ್ರಾಯವೇ ?

ಶ್ರೀ ಎಚ್. ಡಿ. ದೇವೇಗೌಡ.—ಎಚ್ಚರಿಕೆಯಿಂದ ನೋಡಬೇಕಾಗುತ್ತದೆ ಎಂಬುದು ನನ್ನ ಅಭಿಪ್ರಾಯ.

ಶ್ರೀ ಎಂ. ವೈ. ಘೋರ್ಪಡೆ.—ಸಾಮಾಜಿಕ ನ್ಯಾಯ ಯಾವರೀತಿ ಇರಬೇಕು ಎಂದು ಸ್ಪಷ್ಟವಾಗಿ ಹೇಳಿ. ಅದನ್ನು ಬಿಟ್ಟು ಆ ಪದ ಉಪಯೋಗಿಸಬಾರದೇ ಎನ್ನುವಂತೆ ಇಷ್ಟು ಕೋಪ ಮಾಡಿಕೊಂಡರೆ ಹೇಗೆ ?

Sri C. M. ARUMUGAM.—The speech of the Hon. Minister for Finance is very well drafted and the way in which he read the speech in English yesterday is appreciable. The speech is mere a selection of

words, here and there. It is just to show to the country that they are all socialists. But nowhere in the speech he has stated how he is going to solve *garibi hatao*. I feel the budget speech is nothing but a lengthy report of several departments.

ಶ್ರೀ ಎಚ್. ಡಿ. ದೇವೇಗೌಡ.—45 ಮತ್ತು 46ನೇ ಪ್ಯಾರಾಗಳಲ್ಲಿ ಅರ್ಥ ಮಂತ್ರಿಗಳು ಹೇಳಿರುವುದು ಈ ರೀತಿ ಇದೆ "ನಮ್ಮ ದೇಶದ ಸ್ತ್ರೀಪುರುಷರನ್ನೂ, ಯುವಜನರನ್ನೂ ಸಾಮಾಜಿಕ ವಾಗಿ ಉದ್ದೇಶಸಾಧಕ ರೀತಿಯಲ್ಲಿ ಕಾರ್ಯ ಪ್ರವೃತ್ತಗೊಳಿಸಿ, ಈ ಲೋಕವು ಕೆಲವರಿಗೆ ಮಾತ್ರವಲ್ಲ, ಸಮಸ್ತರಿಗೂ ಜೀವನ ಯೋಗ್ಯವಾಗುವಂತೆ ಅವರ ಶಕ್ತಿ ಸಾಮರ್ಥ್ಯಗಳನ್ನೆಲ್ಲಾ ಸಂಘಟಿಸ ಬೇಕಾಗಿದೆ. ಸಮಾಜದ ಸಮಸ್ತ ಸಂಪ್ರದಾಯಗಳಲ್ಲೂ ರಚನೆಯಲ್ಲೂ ಬದಲಾವಣೆ ಅತ್ಯಗತ್ಯ."

"ಭಾರತದಲ್ಲಿ ದಾರಿದ್ರ್ಯವೂ, ನಿರುದ್ಯೋಗವೂ ಬಹೃತ್ ಸಮಸ್ಯೆಗಳಾಗಿವೆ. ದಾರಿದ್ರ್ಯ ನಿವಾರಣಾರ್ಥವಾಗಿ ನಡೆಯತಕ್ಕ ಸಂಗ್ರಾಮದಲ್ಲಿ ನಮ್ಮ ಶಕ್ತಿ ಸಾಮರ್ಥ್ಯಗಳೆಲ್ಲವನ್ನೂ ಧಾರೆಯೆರೆಯಬೇಕಾಗಿದೆ". ಇವು ಕೆಲವು ಬಹಳ ಒಳ್ಳೆಯ ಧೋರಣೆಗಳು, ನಿಜ. ಆದರೆ ಆದಾಯದ ಮಿತಿ ನಿಗದಿಮಾಡಬೇಕೆಂದು ಹೇಳಿದಾಗ ನಮ್ಮ ಮುಂದುವರೆದ ಮುಖಂಡರ ಸಲಹೆ ಅಸಂಬದ್ಧ. ಡಾ|| ಬಾಬು ಜಗಜೀವನರಾಂರವರು ಹೇಳಿರುವುದು ಪತ್ರಿಕೆಯಲ್ಲಿ ವರದಿಯಾಗಿದೆ. ಆಸ್ತಿಯ ಮಿತಿಯನ್ನು ಹೇರಬೇಕೆಂಬ ಸಲಹೆ ವಾಮ ಪಂಥೀಯವರ ಮಾನಸಿಕ ದಿವಾಳಿತನ ಎಂದು ಹೇಳಿದ್ದಾರೆ. ಸಮಾನತೆಯನ್ನು ತರುವುದಕ್ಕೆ ಇದು ತಮ್ಮ ಮುಖಂಡರು ಹೇಳುವ ಸಮರ್ಥನೆ.

ಶ್ರೀ ಡಿ. ದೇವರಾಜ ಅರಸ್.—ತಾವು ಎಕನಾಮಿಕ್ಸ್ ಓದಿಲ್ಲವೆಂದು ಹೇಳುತ್ತಿದ್ದಾರೆ, ಆದುದರಿಂದ ಪರವಾಗಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಆದುದರಿಂದಲೇ ದಿವಾಳಿತನವಾಗಿರುವದು. 25 ವರ್ಷಗಳ ಆಡಳಿತದ ಪರಿಣಾಮವಾಗಿ ಎಲ್ಲರೂ ಎಕ್ಸ್‌ಪರ್ಟ್ಸ್ ಆಗಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅವರು ಹೇಳಿರುವುದನ್ನು ಪೂರ್ಣವಾಗಿ ಓದಿ ಹೇಳಿ. ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಳಿದ್ದಾರೆಂಬುದನ್ನು ಅರ್ಥಮಾಡಿಕೊಂಡು ಹೇಳಿ.

ಶ್ರೀ ಡಿ. ದೇವೇಗೌಡ.—ಅದು ನನಗೆ ಅರ್ಥವಾಗುವುದಿಲ್ಲ. ಅದು ಸಮಾನತೆ ತರುವ ಮಾರ್ಗ. ಚುನಾವಣೆ ಮುಗಿದುಹೋಗಿದೆ, ಈಗ ಸಮಾನತೆ ಪ್ರಶ್ನೆಯಿಲ್ಲ.

[MADAM SPEAKER in the Chair]

ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಅರ್ಥ ಸಚಿವರು ಸಮಗ್ರ ಆಯವ್ಯಯವನ್ನು ಮಂಡಿಸಿದ್ದಾರೆ, ಕೆಲವು ಕ್ಲಾರಿಫಿಕೇಷನ್ಸ್ ಕೇಳಿದಾಗ ಹೇಳಿರುವುದನ್ನು ನಾನು ಪುನಃ ಹೇಳುವುದಿಲ್ಲ, ಕೆಲವು ನ್ಯಾಯ ಶಾಸ್ತ್ರದ ವಿಚಾರ ಮುಂದಿಟ್ಟಿದ್ದಾರೆ. ವಾಸ್ತವಾಂಶವಿಲ್ಲ. ಓವರ್‌ಡ್ರಾಫ್ಟ್ ಇಷ್ಟು ಬೇಗ ಕ್ಲಿಯರ್ ಮಾಡಿರುವುದಾಗಿ ಹೇಳುತ್ತಿದ್ದಾರೆ. ಹೇಗೆ ಮಾಡಿದ್ದಾರೆಂಬುದನ್ನು ನೋಡಬಹುದು. ಈ ದಿವಸ ಐದನೆಯ ಪಂಚವಾರ್ಷಿಕ ಯೋಜನೆ ಬಗ್ಗೆ ಕೆಲವು ಮಾತನಾಡಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ತಾವು ಬರೆದ ಪತ್ರಕ್ಕೆ ಉತ್ತರ ಕೊಟ್ಟಿದ್ದೇನೆ. ಅದು ಓವರ್ ಡ್ರಾಫ್ಟ್ ವಿಚಾರಕ್ಕೆ ಸಂಬಂಧಪಟ್ಟಿತ್ತು. ಕೇಂದ್ರ ಸರಕಾರದವರು ಸಾಲ ಕೊಟ್ಟಿದ್ದಾರೆ. ಅದರಿಂದ ಹೊಡೆದುಹಾಕಿದ್ದೇವೆ. ಇದರಿಂದ ಬೇರೆ ಕೇಂದ್ರದಿಂದ ಬರುವ ಗ್ರಾಂಟಿಗೆ ಧಕ್ಕೆ ಬರುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದರೂ ಕೂಡ ಇದು ಮ್ಯಾಜಿಕ್ ಆಗಿದೆ ಎಂದರೆ ಏನು ಹೇಳಬೇಕು ? ಹೀಗಾದರೆ ಪತ್ರಕ್ಕೆ ಉತ್ತರ ಕೊಟ್ಟು ಪ್ರಯೋಜನವೇನು ?

ಶ್ರೀ ಎಚ್. ಡಿ. ದೇವೇಗೌಡ.—ನೀವು ಈ ಪತ್ರ ಬರೆದಿದ್ದೀರಿ. ಬಡ್ಜೆಟ್ ಭಾಷಣದಲ್ಲಿ ಕೋಟ್ ಮಾಡಿದ್ದೇವೆ ಎಂದು ಹೇಳಿದ್ದೀರಿ.

ಶ್ರೀ ಡಿ. ದೇವರಾಜ್ ಅರಸ್.—ಅದು ಹೇಳಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹೇಳಿದ್ದೀರಿ, ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್‌ನಿಂದ ಟರ್ಮ್ಸ್ ಅಂಡ್ ಕಂಡೀಷನ್ಸ್ ಮೇಲೆ ಸಾಲ ಕೊಟ್ಟಿದ್ದಾರೆ. ನೀವು ಸಾಲ ಮಾಡಿರುವ ಭಾವನೆ ಹೇಗೆ ? ಅದರ ಅಡ್ಜಸ್ಟ್‌ಮೆಂಟ್ ಹೇಗೆ ?

ಶ್ರೀ ಎಂ. ವೈ. ಘೋರ್ಪಡೆ.—ನಮ್ಮ ರಾಜ್ಯಕ್ಕೆ ಬರಬೇಕಾದ ಹಣದಲ್ಲೇ ಈ ಓವರ್‌ಡ್ರಾಫ್ಟ್ ಅಡ್ಜಸ್ಟ್ ಮಾಡಿಬಿಟ್ಟಿದ್ದರೆ ಈ ಬಡ್ಜೆಟ್ ಮಾಡುವುದಕ್ಕೇ ಆಗುತ್ತಿರಲಿಲ್ಲ. ವೇಸ್ ಅಂಡ್ ಮೀನ್ಸ್ ನಿಂದ ಅಡ್ವಾನ್ಸ್ ಆಗಿ ಸಾಲವನ್ನು ತೆಗೆದುಕೊಂಡು ಕೊಟ್ಟಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಇನ್ನು 5ನೇ ಪಾಂಚವಾರ್ಷಿಕ ಯೋಜನೆ ಜಾರಿಗೆ ಬರಬೇಕಾದರೆ ಇನ್ನೂ ಒಂದು ವರ್ಷ ಇದೆ. ಆಗಲೇ 5ನೇ ಪಾಂಚವಾರ್ಷಿಕ ಯೋಜನೆ ಬಗ್ಗೆ ಬಹಳ ಆಶಾದಾಯಕವಾದಂಥ ಒಂದು ಪ್ರೋಗ್ರಾಂನ್ನು ಇಟ್ಟುಬಿಟ್ಟಿದ್ದೀರಿ. ಬಡತನ ನಿವಾರಣೆ ಮಾಡುವುದು ಇನ್ನು ಏನೇನೋ ತರಬೇಕು ಎಂದು ಪ್ರೋಗ್ರಾಂ ಹಾಕಿಕೊಂಡಿದ್ದೀರಿ. All hurdles cleared to remove poverty and unemployment in the 5th plan ಎಂದು ಶ್ರೀ ಸಿ. ಸುಬ್ರಹ್ಮಣ್ಯಂರವರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಆ ಘೋಷಣೆಗಳು ಪತ್ರಿಕೆಯಲ್ಲೂ ಕೂಡ ಬಂದಿದೆ. ಈಗ ಪತ್ರಿಕೆಗಳು ನಿಮ್ಮ ಹಿಡಿತಕ್ಕೆ ಸಿಕ್ಕಿಬಿಟ್ಟಿವೆ. ಇಲ್ಲದಿದ್ದರೆ ಅವರು ಉಳಿಯುವುದಕ್ಕಾಗುವುದಿಲ್ಲ. ನೀವು ಹೇಳಿದ್ದೆಲ್ಲಾ ಬರೆಯಬೇಕು. ತಾವು ಏನು ಒಂದು ಪ್ರೋಗ್ರಾಂ ಹಾಕಿಕೊಂಡಿರುತ್ತೀರೋ ಅದು ಕಾರ್ಯಗತವಾಗದೇ ಹೋದರೆ ದೇಶದಲ್ಲಿ ಅನಾಯಕತ್ವ ಬರುತ್ತದೆ ಎಂದು ಬಹುಶಃ ಈ ಮಾತನ್ನು ಶ್ರೀಮತಿ ಇಂದಿರಾ ಗಾಂಧಿಯವರೂ ಕೂಡ ಹೇಳಿ ಬಿಟ್ಟಿದ್ದಾರೆ. ಮತ್ತು ನಿಮಗೆ ಯಾರಿಗೂ ಉಳಿಗಾಲವೂ ಇಲ್ಲ. ಸಿಂಡಿಕೇಟ್‌ನವರು ಹೇಳುವುದಕ್ಕೆ ಹೆಸರಿಲ್ಲದ ಹಾಗೆ ಆಯಿತು. ನಾವೆಲ್ಲಾ ಸ್ವಲ್ಪ ಜನರು ಉಳಿದುಕೊಂಡುಬಿಟ್ಟಿದ್ದೇವೆ ಆದುದರಿಂದ ಈಗ ನಿಮಗೆ ಉಳಿಗಾಲವಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಅದನ್ನು ನೋಡಿಕೊಳ್ಳೋಣ.

ಶ್ರೀ ಎಚ್. ಡಿ. ದೇವೇಗೌಡ.—ನೋಡಿಕೊಳ್ಳುವುದು ಜನರ ಕೈಯಲ್ಲಿ ಇದೆ, ನಮ್ಮ ಕೈಯಲ್ಲಲ್ಲ, ನಿಮ್ಮ ಕೈಯಲ್ಲೂ ಇಲ್ಲ. ಮನೆಯ ಯಜಮಾನ ಸಂಸಾರ ಕೆಡಿಸಿಹೋದಮೇಲೆ ಮಕ್ಕಳು ಕಷ್ಟಕ್ಕೆ ಸಿಕ್ಕಿಹಾಕಿಕೊಂಡ ಹಾಗೆ ಇದೆ.

ಶ್ರೀ ಡಿ. ದೇವರಾಜ್ ಅರಸ್.—ಹಿಂದೆ ಹಾಗೆ ಮಾಡಿಬಿಟ್ಟಿದ್ದಾರೆ. ಆ ಪಾಪದ ಹೊರೆ ನಿಮ್ಮ ಬೆನ್ನಿನ ಹಿಂದೆಯೇ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಬೆನ್ನಿನ ಹಿಂದೆಯೂ ಕೂಡ ಇದೆ. ಆ ಪಾಪದ ಹೊರೆ ನಾನು ಹೊತ್ತುಕೊಳ್ಳುವುದಕ್ಕಾಗುವುದಿಲ್ಲ. ಅದನ್ನು ವಿಚಾರಣೆ ಮಾಡಿ ಎಂದು ಹೇಳಿದ್ದೇನೆ.

ಇದನ್ನು ಕೊನೆಯದಾಗಿ ಒಂದೇ ಒಂದು ಮಾತು ಹೇಳುತ್ತೇನೆ. ತಾವು ಇಂಟೀರಿಯಮ್ ಬಡ್ಜೆಟ್ಟನ್ನು ಪಾಸು ಮಾಡುವಾಗ ಏನು ಹೇಳಿದಿರಿ ಎಂದರೆ ಸಮಾಜದಲ್ಲಿರುವ ದೀನದಲಿತ ವರ್ಗದವರ ಸುಧಾರಣೆ ಬಗ್ಗೆ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುತ್ತೇವೆ ಎಂದು ಭಾಷಣ ಮಾಡಿದಿರಿ. ಈಗ ಅಂಥಾ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಂತೆ ಕಾಣಲಿಲ್ಲ. ಸೋಷಿಯಲ್ ಸರ್ವಿಸಸ್ ಬಗ್ಗೆ ಅನ್ ಎಂಪ್ಲಾಯ್‌ಮೆಂಟ್ ಬಗ್ಗೆ ಹಿಂದಿನ ಸರ್ಕಾರ ಏನು ಹಣ ನೀಡಿತ್ತೋ ಅದನ್ನು ಈ ಬಡ್ಜೆಟ್ಟಿನಲ್ಲಿ ನೋಡಿದರೆ ಅಷ್ಟು ಹಣ ಕೊಟ್ಟಿಲ್ಲ. ಲ್ಯಾಂಡ್ ರೀಫಾರಂಸ್ ಬಗ್ಗೆ ಒಂದು ಮಾತೂ ಕೂಡ ಮಾತನಾಡಿಲ್ಲ. ಆದುದರಿಂದ ಇದು ಬಡವರ ಬಡ್ಜೆಟ್ ಎಂದು ಹೇಗೆ ಹೇಳುತ್ತೀರಿ ? ಇದು ತಮ್ಮ ಪ್ರಗತಿಗಾಮಿಯ ಬಡ್ಜೆಟ್ ಆಗಿದೆ. ಇದು ಸತ್ಯಕ್ಕೆ ದೂರವಾದ ಮಾತು. ಆದುದರಿಂದ ಇದನ್ನು ವಿರೋಧ ಮಾಡುತ್ತೇನೆ.

ಇನ್ನು ಟ್ಯಾಕ್ಸ್ ಬಗ್ಗೆ ಹೇಳುವುದಾದರೆ ಟ್ಯಾಕ್ಸನ್ನು ರೈತರ ಮೇಲೆ ಹಾಕಬೇಡಿ. ರೈತರು ಕೊಡುವುದಕ್ಕಾಗುವುದಿಲ್ಲ. ಆ ಬಡ ಜನಕ್ಕೆ ಹೊಟ್ಟೆಗೆ ಇಲ್ಲದೇ ಇರುವಾಗ ಟ್ಯಾಕ್ಸ್ ಕೊಡುವುದಕ್ಕೆ ಹೇಗೆ ಆಗುತ್ತದೆ. ಆದುದರಿಂದ ಇದರ ಬಗ್ಗೆ ಆಲೋಚನೆ ಮಾಡಿ ಮುಂದೆ ಬರತಕ್ಕಂಥ ಕಾಲದಲ್ಲಿ ಎಚ್ಚರಿಕೆ ವಹಿಸಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸಭಾಧ್ಯಕ್ಷಣಿಯವರೇ, ನನಗೆ ಮಾತನಾಡಲು 15 ನಿಮಿಷ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಮೊಟ್ಟಮೊದಲನೆಯದಾಗಿ ಅರ್ಥಶಾಸ್ತ್ರ ಪರಿಣಿತರಾಗಿರುವ ಅರ್ಥಮಂತ್ರಿಗಳನ್ನು ನಾನು ಸ್ವಾಗತಿಸಿ ಅವರು ಏನು ಒಂದು ಗಾಂಭೀರ್ಯವಾದ, ಸಮಾಜದ ಒಂದು ಧೋರಣೆಯನ್ನು ಇಟ್ಟಿದ್ದಾರೋ ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ದೈನಂದಿನದಲ್ಲಿ ಸರ್ಕಾರದಲ್ಲಿ ಆಗತಕ್ಕಂಥ ಕೆಲವು ನ್ಯೂನತೆಗಳನ್ನು ಸಭೆಯ ಮುಂದೆ ಇಡಲಿಕ್ಕೆ ಬಯಸುತ್ತೇನೆ.

ಮೊಟ್ಟಮೊದಲನೆಯದಾಗಿ ವಿದ್ಯಾಭ್ಯಾಸದ ವಿಚಾರವಾಗಿ ಹೇಳುತ್ತೇನೆ. ಈ ವಿದ್ಯಾಭ್ಯಾಸಕ್ಕೆ ನಮ್ಮ ಸರ್ಕಾರದಿಂದ ಬಹುತೇಕ ಹಣ ಖರ್ಚಾಗುತ್ತಾ ಇದೆ. ವಿದ್ಯಾಪರಿಣತರನ್ನು ಕೂಡ ಹೆಚ್ಚು ಹೆಚ್ಚು ತಯಾರು ಮಾಡುತ್ತಾ ಇದ್ದಾರೆ. ಇದು ಈಗ ಬೃಹದಾಕಾರವಾಗಿ ಬೆಳೆದು ಬಂದಿದೆ. ವಿಶ್ವ ವಿದ್ಯಾನಿಲಯದಿಂದ ಹೊರಗೆ ಬರತಕ್ಕಂಥ ವಿದ್ಯಾ ಸಮೂಹ ಏನು ಇದೆ ಅದು ದೇಶಕ್ಕೆ ಒಂದು ದೊಡ್ಡ ತಲೆನೋವು ಆಗಿ ಪರಿಣಮಿಸಿದೆ. ಬ್ರಿಟಿಷರ ಕಾಲದಿಂದಲೂ ಏನು ಒಂದು ಸಂಪ್ರದಾಯ ವನ್ನು ಯೂನಿವರ್ಸಿಟಿಯವರು ಹಾಕಿಕೊಂಡು ಬಂದರೋ ಅದನ್ನೇ ಮುಂದುವರಿಸಿಕೊಂಡು ಹೆಚ್ಚು ಹೆಚ್ಚು ವಿದ್ಯಾವಂತರನ್ನು ತಯಾರು ಮಾಡುತ್ತಾ ಇದ್ದಾರೆ. ಫ್ರಾನ್ಸ್ ದೇಶದಲ್ಲಿ ಈರೀತಿ ವಿದ್ಯಾ ಭ್ಯಾಸ ಕೊಟ್ಟು ಅನ್ ಎಂಪ್ಲಾಯ್‌ಮೆಂಟ್ ಬಹಳ ಹೆಚ್ಚಳವಾದುದರಿಂದ ಎಜುಕೇಷನ್ ಸಿಸ್ಟಂನ್ನು ಬದಲಾಯಿಸಿದರು. ಆದುದರಿಂದ ಇಲ್ಲೂ ಕೂಡ ಈ ವಿದ್ಯಾಭ್ಯಾಸದ ಒಂದು ಸಿಸ್ಟಂನ್ನು ಬದಲಾವಣೆ ಮಾಡಿದ ಹೊರತು ದೇಶಕ್ಕೆ ಈ ತಲೇನೋವು ತಪ್ಪಿದ್ದಲ್ಲ. ಈ ದಿವಸ ನೂರಾರು, ಸಾವಿರಾರು ಜನ ಡಾಕ್ಟರುಗಳು ಪದವೀಧರರಾಗಿ ಕೆಲಸ ಇಲ್ಲದೇ ಬೀದಿ ಬೀದಿಯಲ್ಲಿ ಅಲೆದಾಡುತ್ತಾ ಇರುವುದನ್ನು ಕೇಳಿದ್ದೇವೆ. ಅದು ಎಲ್ಲರ ಗಮನಕ್ಕೂ ಕೂಡ ಬಂದಿದೆ. ಅವರು ಖರ್ಚು ಮಾಡಿರುವ ದುಡ್ಡು ನೋಡಿದರೆ ಪ್ರೈವೇಟ್ ಕಾಲೇಜುಗಳಿಗೆ 50 ಸಾವಿರ ರೂಪಾಯಿ ಡೊನೇಷನ್ ಕೊಟ್ಟು ವಿದ್ಯಾಭ್ಯಾಸ ವ ಗಿಸಿಕೊಂಡು ಬಂದು ಬಿಟ್ಟಿದ್ದಾರೆ. ಕೆಲಸ ಇಲ್ಲ. ಈ 50 ಸಾವಿರ ಕೊಟ್ಟು ಜಮೀನನ್ನು ಕ್ರಿಗೆದುಕೊಂಡು ಬಿಟ್ಟಿದ್ದರೆ ಅವನು ಸುಖವಾಗಿರಬಹುದಾಗಿತ್ತು. ಅವನು 50 ಸಾವಿರ ರೂಪಾಯಿ ಕ್ಯಾಪಿಟೇಷನ್ ಫೀಸ್ ಕೊಟ್ಟು ತನ್ನ ವಿದ್ಯಾಭ್ಯಾಸ ಮುಗಿಸಿಕೊಂಡು ಎಲ್ಲಿ ಕೆಲಸ ಹುಡುಕಿಕೊಂಡು ಹೋದರೂ ಅಲ್ಲಿ 'ನೋ ವೇಕೆನ್ಸಿ' ಎನ್ನುವ ಬೋರ್ಡ್ ತಗಲು ಹಾಕಿರುವುದನ್ನು ನೋಡಿದರೆ ಅಂತಹ ವಿದ್ಯಾಭ್ಯಾಸ ಕ್ರಮವನ್ನು ಇನ್ನೆಷ್ಟು ಕಾಲ ಮುಂದುವರೆಸಿಕೊಂಡು ಹೋಗಬೇಕು ಎಂದು ನಾನು ಶಂಕೆಪಡುತ್ತೇನೆ. ಇನ್ನು ಪಾಶ್ಚಿಮಾತ್ಯ ದೇಶಗಳಲ್ಲಿ ಹೋಗಿ ನೋಡಿದರೆ ಅಲ್ಲಿ ಮೆಟ್ರಿಕ್ಯು ಲೇಷನ್ ಪಾಸ್ ಮಾಡಿದ ಮೇಲೆ ಒಂದು ಆಪ್ಟಿಟ್ಯೂಡ್ ಟೆಸ್ಟ್ ಅಂತ ಮಾಡುತ್ತಾರೆ. ಅದರಲ್ಲಿ ಅವನು ಯಾವ ರೀತಿಯಾದ ವಿದ್ಯಾಭ್ಯಾಸ ಮಾಡಿದರ ಮುಂದುವರೆಯಬಲ್ಲ, ಅವನು ಯಾವ ರೀತಿ ಯಾದ ಪರಿಶ್ರಮ ಪಟ್ಟರೆ ತನ್ನ ಜೀವನವನ್ನು ನಡೆಸಬಲ್ಲ, ಅವನು ಯಾವ ಯಾವ ಕಾರ್ಯದಲ್ಲಿ ತನ್ನ ಜೀವನವನ್ನು ನಡೆಸುವುದಕ್ಕೆ ತಯಾರಾಗಿದ್ದಾನೆ, ಇವನ್ನು ನೋಡಿಕೊಂಡು ತನ್ನ ವಿದ್ಯಾಭ್ಯಾಸ ವನ್ನು ಮುಂದುವರೆಸುತ್ತಾನೆ. ಆದರೆ ಇವೊತ್ತು ನಮ್ಮಲ್ಲಿ ಕಾಣುವ ರೀತಿಯಲ್ಲಿ, ಅಪ್ಪ ಡಾಕ್ಟರ್ ಕೆಲಸ ಮಾಡುತ್ತಿದ್ದರೆ, ಮಗನೂ ಡಾಕ್ಟರ್ ಆಗಬೇಕು, ಅವನು ಶುಂಠಿಕಾಯಿ ಆಗಿದ್ದರೂ ಚಿಂತೆಯಿಲ್ಲ. ಅವನನ್ನು ಕಾಲೇಜಿಗೆ ಸೇರಿಸಬೇಕು. ನಾಳೆ ಇಂಜಕ್ಷನ್ ಕೊಡುವಾಗ ನೀರು ಕೊಡುತ್ತಾನೋ ಪೆನ್ಸಿ ಲಿನ್ ಕೊಡುತ್ತಾನೋ ಗೊತ್ತಿಲ್ಲ. ಅಂತೂ ಎಂ.ಬಿ.ಬಿ.ಎಸ್. ಗ್ರ್ಯಾಜ್ಯುಯೇಟ್ ಆಗಿ ಬರುತ್ತಾನೆ. ಇಂತಹ ವಿದ್ಯಾಭ್ಯಾಸ ಕ್ರಮವನ್ನು ಪುನರ್‌ಪರಿಶೀಲನೆ ಮಾಡದೆ ಹೋದರೆ, ದೇಶದಲ್ಲಿ ಕಲ್ಯಾಣ ಆಗು ತ್ತದೆಯೇ ಎಂದು ನಾನು ಕೇಳಲಿಕ್ಕೆ ಬಯಸುತ್ತೇನೆ. ಅವೊತ್ತು ಬ್ರಿಟಿಷರು ಏತಕ್ಕಾಗಿ ವಿಶ್ವವಿದ್ಯಾ ನಿಲಯ ಇಟ್ಟುಕೊಂಡಿದ್ದರೋ ಅದನ್ನೇ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. 25 ವರ್ಷಗಳು ಆದರೂ ಕೂಡ ವಿದ್ಯಾಭ್ಯಾಸದಲ್ಲಿ ಕ್ರಾಂತಿಕಾರಿ ಬದಲಾವಣೆಯಾಗಿಲ್ಲ. ಫಸ್ಟ್ ಡಿವಿಜನ್ ಕ್ಲಾರ್ಕ್ ಮತ್ತು ಸೆಕೆಂಡ್ ಡಿವಿಜನ್ ಕ್ಲಾರ್ಕ್ ತಯಾರು ಮಾಡತಕ್ಕ ಯೂನಿವರ್ಸಿಟಿಯನ್ನು ಏತಕ್ಕಾಗಿ ಇಟ್ಟುಕೊಂಡಿದ್ದಾರೆ ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಮೆಟ್ರಿಕ್ಯುಲೇಷನ್ ಆದನಂತರ ಆತನಿಗೆ ಯಾವ ಉದ್ಯೋಗದಲ್ಲಿ ಪರಿಣತೆ ಇದೆ ಯಾವ ತರಹ ವಿದ್ಯಾಭ್ಯಾಸ ಕೊಡಬೇಕು ಎಂಬು ದನ್ನು ಯೋಚಿಸಬೇಕು. ಅದನ್ನು ಬಿಟ್ಟು ಎಲ್ಲರೂ ಯೂನಿವರ್ಸಿಟಿಗೆ ಹೋಗಬೇಕು ಬಿ.ಎ., ಎಂ.ಎ. ಪಾಸ್ ಮಾಡಿಕೊಂಡು ಸರ್ಕಾರಕ್ಕೆ ತಲೆನೋವು ಆಗುವ ವಿದ್ಯಾಭ್ಯಾಸ ನಮಗೆ ಬೇಕಿಲ್ಲ. ಅಂಥ ವಿದ್ಯಾಭ್ಯಾಸಕ್ಕೆ ಹಣ ಖರ್ಚು ಮಾಡುವುದು ಸರಿಯಾದ್ದಲ್ಲ. ಇನ್ನು ವಿದ್ಯಾಭ್ಯಾಸದಲ್ಲಿ ಇರತಕ್ಕ ಕೆಲವು ನ್ಯೂನತೆಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 7ನೇ ಸ್ಟ್ಯಾಂಡರ್ಡ್ ಆದಕೂಡಲೇ ಮೆರಿಟ್ ಟೆಸ್ಟ್ ಮಾಡುವುದಕ್ಕೆ ಕೆಲವರಿಗೆ ನೇಮಿಸಿ ಅವರಿಗೆ 500 ರೂಪಾಯಿ ತಲುಬು ಕೊಡುತ್ತಾರೆ. ಈ ವ್ಯವಸ್ಥೆಯನ್ನು ಏತಕ್ಕೆ ಇಟ್ಟುಕೊಂಡಿದ್ದಾರೆಂದು ಕೇಳುತ್ತೇನೆ. ಇದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಶಿವಮೊಗ್ಗಾ ಜಿಲ್ಲೆಯಲ್ಲಿ ಒಬ್ಬ ವಿದ್ಯಾರ್ಥಿ ಮೆರಿಟ್ ಟೆಸ್ಟ್ ಕೂಡಲಿಕ್ಕೆ ಬರಬೇಕಾಗಿತ್ತು. 20ನೇ ತಾರೀಖು ಪರೀಕ್ಷೆ ಇದ್ದರೆ ಆತನಿಗೆ 20ನೇ ತಾರೀಖು ಬೆಳಿಗ್ಗೆ ಕಾಗದ ಬಂದಿದೆ. ಪರಿಕ್ಷಾ ಕೇಂದ್ರ ಇರುವುದು ಶಿವಮೊಗ್ಗಾದಲ್ಲಿ. ಸಾಗರ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಇರುವ ಹುಡುಗನಿಗೆ ಪರೀಕ್ಷೆಗೆ ಕೂಡಬೇಕೆಂದು 20ನೇ ತಾರೀಖು 12 ಗಂಟೆಗೆ ಕಾಗದ ಬಂದರೆ ಅವನು 11 ಗಂಟೆಗೆ ಪರೀಕ್ಷೆಗೆ ಕೂಡುವುದು ಹೇಗೆ? ಇಂತಹ ಬರೀ ಕಣ್ಣು ಒರಸುವ ನೀತಿ ಯನ್ನು ಇಟ್ಟುಕೊಂಡಿದ್ದಾರೆ. ಜನ ನಿಮ್ಮನ್ನು ನೋಡಿ ನಗುತ್ತಾರೆ. ಬಹುಶಃ ಯಾವುದೋ ಕೆಲವು ವಿದ್ಯಾರ್ಥಿಗಳ ಬಗ್ಗೆ ಆಸಕ್ತಿ ವಹಿಸಿ ನಿಜವಾದ ಮೇಧಾವಿ ವಿದ್ಯಾರ್ಥಿಗಳನ್ನು ಕೆಳಕ್ಕೆ ಹಾಕಬೇಕೆಂಬ ದೃಷ್ಟಿಯಿಂದ ಮಾಡುತ್ತಿದ್ದಾರೆಂದು ಕೆಲವು ವಿದ್ಯಾರ್ಥಿಗಳ ತಂದೆತಾಯಿಗಳಿಗೆ ಸಂಶಯ ಬರುತ್ತದೆ.

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಇನ್ನು ವಿದ್ಯಾ ಇಲಾಖೆಯಲ್ಲಿ ಟೀಚರ್ಸ್ ನೇಮಕ ಮಾಡುವಾಗ ಕೇವಲ ಮೆರಿಟ್ ಕನ್ಸಿಡರೇಷನ್ ಇರಬೇಕೇ ಹೊರತು ಇನ್ನು ಯಾವ ಕನ್ಸಿಡರೇಷನ್ ಇರಬಾರದು. ನಾನು ನನ್ನ ಕ್ಷೇತ್ರದ ಭಾಗದಲ್ಲಿ ಒಂದು ಸ್ಕೂಲು ಸಂದರ್ಶನ ಮಾಡಿದೆ. ಒಬ್ಬ ವಿದ್ಯಾರ್ಥಿ ಪರೀಕ್ಷೆಯಲ್ಲಿ ಉತ್ತರ ಬರೆದಿದ್ದನು. ಆ ಉತ್ತರದಲ್ಲಿ ಗ್ರಾಮರ್ ಇರಲಿಲ್ಲ. ಸಂಟೆನ್ಸ್ ಒಂದೂ ಸರಿಯಿಲ್ಲ. ಆದರೆ ಉಪಾಧ್ಯಾಯರು ರೈಟ್ ಹಾಕಿದ್ದಾರೆ. ಯಾತಕ್ಕೆ ಹೀಗೆ ಮಾಡಿದ್ದಾರೆ ಎಂದರೆ ಅವರಿಗೆ ಅದು ಸರಿ ಇದೆಯೋ ತಪ್ಪು ಇದೆಯೋ ಎಂದು ಹೇಳತಕ್ಕ ಸಾಮರ್ಥ್ಯದಲ್ಲಿ ನ್ಯೂನತೆ ಕಂಡುಬರುತ್ತದೆಯೆಂದು ಸಭೆಯ ಮುಂದೆ ಇಡಬಯಸುತ್ತೇನೆ. ಇಂತಹ ಉಪಾಧ್ಯಾಯರು ವಿದ್ಯಾರ್ಥಿಗಳನ್ನು ಭಾರತದ ಸತ್‌ಪ್ರಜೆಗಳಾಗಿ ತಯಾರು ಮಾಡುತ್ತಿದ್ದಾರೆಯೇ ಎಂದು ಸಂಶಯ ವ್ಯಕ್ತಪಡಿಸಲಿಕ್ಕೆ ಬಯಸುತ್ತೇನೆ.

ಎರಡನೆಯದು, ಸಹಕಾರಿ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಲಿಕ್ಕೆ ಬಯಸುತ್ತೇನೆ. ಒಂದು ನಿದರ್ಶನ ಮೊನ್ನೆ ನನ್ನ ಗಮನಕ್ಕೆ ಬಂತು. ಒಬ್ಬರು ಇನ್ನೂರು, ಮುನ್ನೂರು ರೂಪಾಯಿ ಸಾಲ ತೆಗೆದುಕೊಂಡಿದ್ದಕ್ಕೆ ಇಂಟರೆಸ್ಟ್, ಕಾಂಪೋಂಡ್ ಇಂಟ್ರೆಸ್ಟ್ ಲೆಕ್ಕಾಚಾರ ಹಾಕಿದರೆ, ಅಸಲಿಗಿಂತ ಬಡ್ಡಿ ಜಾಸ್ತಿಯಾಗಿದೆ. ನೀವು ಯಾವರೀತಿ ಲೆಕ್ಕಚಾರ ಹಾಕುತ್ತೀರೋ ಗೊತ್ತಾಗುವುದಿಲ್ಲ. ನಿಮಗೆ ಬಡ ಜನರಿಗೆ ಸಹಾಯ ಮಾಡುವ ನೀತಿ ಅನುಸರಿಸಬೇಕೆಂದು ಅಭಿಪ್ರಾಯ ಇರಬೇಕಾದರೆ ಒಬಿರಾಯನ ಕಾಲದ ಬಡ್ಡಿ ಹಾಕುತ್ತಾ ಇದ್ದೀರಿ. ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಯೋಗ್ಯ ಸಹಕಾರ ಸಂಘಗಳಲ್ಲಿ ಯಾವ ಸಹಕಾರ ಸಂಘಗಳಲ್ಲೇ ಆಗಲಿ 100 ರೂಪಾಯಿ ಸಾಲ ತೆಗೆದುಕೊಳ್ಳಬೇಕಾದರೆ 50 ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ನೀವು ಹಾಕತಕ್ಕ ಬಡ್ಡಿ ದರ 8 ರೂಪಾಯಿ. ಈ ನ್ಯೂನತೆಯನ್ನು ಸರಿಪಡಿಸದೆ ಹೋದರೆ ಸಹಕಾರ ಸಂಸ್ಥೆಗಳಿಗೆ ಏತಕ್ಕೆ ಸಾಲ ತೆಗೆದುಕೊಳ್ಳಬೇಕು ಎನ್ನುವ ಅಭಿಪ್ರಾಯ ಬರುತ್ತದೆ. ಬ್ಯಾಂಕಿಗೆ ಸಾಲಕ್ಕಾಗಿ ಅರ್ಜಿ ಹಾಕಿದರೆ ವರ್ಷಾನುಗಟ್ಟಲೆ ಕಾಯಬೇಕಾಗುತ್ತದೆ. ಸಮಯಕ್ಕೆ ಸರಿಯಾಗಿ ಬರದ ಸಾಲ ಊಟಕ್ಕೆ ಇಲ್ಲದ ಉಪ್ಪಿನಕಾಯಿನಂತಾಗುತ್ತದೆ. ಸಮಯಕ್ಕೆ ಸರಿಯಾಗಿ ಸಿಕ್ಕದ ಸಾಲ ಯಾವ ಉದ್ದೇಶಕ್ಕಾಗಿ ತೆಗೆದುಕೊಳ್ಳುತ್ತಾರೋ ಆ ಉದ್ದೇಶಕ್ಕೆ ಉಪಯೋಗಿಸುವುದಿಲ್ಲ. ಅದು ಲಗ್ನಕ್ಕೋ ಅಥವಾ ಇನ್ನು ಯಾವುದಕ್ಕೋ ಉಪಯೋಗವಾಗುತ್ತದೆ. ಆದುದರಿಂದ ಏತಕ್ಕೆ ಹಣವನ್ನು ವ್ಯಯ ಮಾಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದರೋ ಆ ಉದ್ದೇಶ ಸಫಲವಾಗುವುದಿಲ್ಲ ಎನ್ನುವ ಮಾತನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮೂರನೆಯದಾಗಿ, ವಸೂಲಾತಿ ಪ್ರಶ್ನೆ ಬರುತ್ತದೆ. ವಸೂಲಾತಿಯಲ್ಲಿ ಇರತಕ್ಕ ನ್ಯೂನತೆಯನ್ನು ಸಹಕಾರ ಸಚಿವರು ಗಮನಿಸಬೇಕು. ಯಾವಾಗ ಬೆಳೆ ಕಟಾವಿಗೆ ಬರುತ್ತದೆ ಆ ಟೈಮಿನಲ್ಲಿ ವಸೂಲಿಗೆ ಹೋಗುವುದಿಲ್ಲ. ಇವರು ವಸೂಲಿಗೆ ಹೋಗುವುದು ಯಾವಾಗ ಎಂದರೆ, ಮಳೆಗಾಲದಲ್ಲಿ ಹೋಗುತ್ತಾರೆ. ಆ ಟೈಮಿನಲ್ಲಿ ಬತ್ತ ಇರುವುದಿಲ್ಲ; ಮತ್ತು ಏನೂ ಇರುವುದಿಲ್ಲ. ಒಡಕು ಮಡಕೆ ಜಪ್ತಿ ಮಾಡಿಕೊಂಡು ಬರುತ್ತಾರೆ. ಅಧಿಕಾರಿಗಳಿಗೆ ಕೊಡತಕ್ಕ ಟಿ.ಎ. ಅಥವಾ ಜೀಪು ವೆಚ್ಚವೂ ಕೂಡ ಬರುವುದಿಲ್ಲ. ಒಂದು ಪೈಸೆಯೂ ವಸೂಲು ಆಗುತ್ತಾ ಇಲ್ಲ. ಬಡವರ ಮೇಲೆ ವಸೂಲಾತಿ ಕ್ರಮ ಜರುಗಿಸುತ್ತಾರೆ. ಶ್ರೀಮಂತರ ಹತ್ತಿರ ರಾಜಕೀಯ ಧುರೀಣರ ಹತ್ತಿರ ಬರುವುದೇ ಇಲ್ಲ. ಅವರು ಲಕ್ಷಗಟ್ಟಲೆ ಸಾಲ ತೆಗೆದುಕೊಂಡಿದ್ದರೂ ಕೂಡ, ಅವರಿಗೆ ಮಂತ್ರಿಗಳ ಆಶೀರ್ವಾದ ಇರುವುದರಿಂದ ಅವರು ಯಾರಿಗೂ ಅಂಜಬೇಕಾಗುವುದಿಲ್ಲ. ವಸೂಲಿ ಕ್ರಮ ಯಾರ ಮೇಲೆ ತೆಗೆದುಕೊಳ್ಳುತ್ತಾರೆಂದರೆ ಯಾರಿಗೆ ಒಂದು ಹೊತ್ತು ಹೊಟ್ಟೆಗೆ ತಿನ್ನುವುದಕ್ಕೆ ಇರುವುದಿಲ್ಲ ಅವನ ಹತ್ತಿರ ಹೋಗಿ ಒಡಕು ಮಡಕೆ ಜಪ್ತಿ ಮಾಡಿ ರೆಕಾರ್ಡ್ ಮಾಡಿಕೊಂಡು ಬರುತ್ತಾರೆ. ಈ ನ್ಯೂನತೆ ಪರಿಹಾರವಾಗದೇ ಹೋದರೆ ಬಡವರ ಹತ್ತಿರ ಒಳ್ಳೆಯ ಮಾತನ್ನು ಕೇಳುವುದಕ್ಕೆ ಆಗುವುದಿಲ್ಲ ಎಂದು ನಾನು ತಮಗೆ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ರಾಷ್ಟ್ರೀಕರಣವಾದ ಬ್ಯಾಂಕುಗಳು ಏನು ಇವೆ ಇದರ ಬಗ್ಗೆ ಹೇಳಬೇಕಾಗುತ್ತದೆ. ಯಾವ ಉದ್ದೇಶವನ್ನು ಇಟ್ಟುಕೊಂಡು ಮಹಾತಾಯಿ ಇಂದಿರಾಜೀಯವರು ಬ್ಯಾಂಕು ರಾಷ್ಟ್ರೀಕರಣ ಮಾಡಿದರೋ ಆ ಉದ್ದೇಶ 100ರಲ್ಲಿ ಒಂದು ಭಾಗ ಕೂಡ ಸಫಲವಾಗಲಿಲ್ಲ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು. ಕಾರಣ ಏನು ಎಂದರೆ, ಅಡ್ಮಿನಿಸ್ಟ್ರೇಷನ್ ಆ ರೀತಿ ಇದೆ. ರಿಪ್ಪನ್ ಪೇಟೆಯಲ್ಲಿ ಕೆನರಾ ಬ್ಯಾಂಕ್ ಬ್ರ್ಯಾಂಚ್ ಇದೆ. ಅಲ್ಲಿ ಒಬ್ಬ ಮ್ಯಾನೇಜರ್ ಇದ್ದಾರೆ. ಆ ಮ್ಯಾನೇಜರ್ ಮಹಾಶಯ, ರಿಕಾರ್ಡು ತಂದುಕೊಟ್ಟರೆ ನನಗೆ ನಾಲ್ಕು ಐದು ಮೈಲಿ ಹೋಗುವುದಕ್ಕೆ ಆಗುವುದಿಲ್ಲ ಎಂದು ಹೇಳಿ, ಅವನು ಟೌನು ಬಿಟ್ಟು ಕದಲುವುದಿಲ್ಲ. ಅವನ ಉದ್ಧಟತನ ಆ ರೀತಿ ಇದೆ. ಡೆಲ್ಲಿಯಲ್ಲಿ ಕೂತುಕೊಂಡು ಕ್ರಮಬದ್ಧವಾಗಿ ಕಾನೂನು ಮಾಡಿದ್ದರೂ ಇದರ ಸಾಫಲ್ಯ ಎಷ್ಟರಮಟ್ಟಿಗೆ ಆಗುತ್ತದೆ ಎಂದು ಕೇಳುತ್ತೇನೆ. ರೈತ ಬ್ಯಾಂಕಿಗೆ ಹೋದರೆ, ಅವನಿಗೆ ಸಾಲ

ಸಿಕ್ಕುವುದಿಲ್ಲ ಅವನ ರಿಕಾರ್ಡು ಪರಿಶೀಲನೆ ಮಾಡುವುದಿಲ್ಲ. ಆದರೆ ಒಬ್ಬ ವ್ಯಾಪಾರಸ್ಥ ಅಥವಾ ದೊಡ್ಡ ಉದ್ದಿಮೆದಾರ ಇವರಿಗೆ ಕಾಫಿ, ಚಹ ಮತ್ತು ಊಟ ಎಲ್ಲಾ ಕೊಡುವುದರಿಂದ ಅವನಿಗೆ ಸಾಲ ಬೇಕಾದಷ್ಟು ಸಿಕ್ಕುತ್ತದೆ. ಯಾವ ಉದ್ದೇಶದಿಂದ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ್ದೇವೋ ಆ ಉದ್ದೇಶ ಸಫಲವಾಗಿದೆಯೇ ಎಂದು ನಮ್ಮ ಸರ್ಕಾರ ಯೋಚನೆ ಮಾಡಿದರ ನಿಜವಾಗಿ ನಮಗೆ ಬಡ ಜನರಿಂದ ಒಳ್ಳೆಯ ಮಾತು ಸಿಕ್ಕುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಕೈಗಾರಿಕೆಯ ಬಗ್ಗೆ ಮಾನ್ಯ ಅರ್ಥ ಸಚಿವರು ಇಟ್ಟಿರತಕ್ಕ ಬಡ್ಜೆಟ್ ಹಣ ಸಾಲದು ಎಂದು ನಾನು ತಿಳಿದುಕೊಂಡಿದ್ದೇನೆ. ಶಿವಮೊಗ್ಗಾ ಜಿಲ್ಲೆ ವಿಚಾರ ಹೇಳಬೇಕಾದರೆ ರೈತರಿಗೆ ತ್ರಿಶಂಕು ಸ್ವರ್ಗವಾಗಿದೆ. ಅಲ್ಲಿ ಮಳೆ ಇಲ್ಲದೆ 8-10 ವರ್ಷಗಳಾಗಿವೆ. ಮಲೆನಾಡಿನಲ್ಲಿ ಮಳೆ ಇದೆ ಎನ್ನುವ ಭಾವನೆ ಜನರಿಗೆ ಇದೆ. ಆದರೆ ಅಲ್ಲಿ ಮಳೆ ದಿನೇ ದಿನೇ ಕಡಿಮೆಯಾಗುತ್ತದೆ. ಈಗ ಮಳೆಗಾಲ ಜುಲೈನಲ್ಲಿ ಪ್ರಾರಂಭವಾಗುವುದಿಲ್ಲ, ಆಗಸ್ಟ್‌ಗೆ ಷುರುವಾಗುತ್ತದೆ. ಅದಕ್ಕೆ ಮಲೆನಾಡಿನಲ್ಲಿ ಅವ್ಯವಸ್ಥೆ ಉಂಟಾಗಿದೆ. ದೇಶದಲ್ಲಿ ಏನು ವ್ಯವಸಾಯ ಬುನಾದಿಯಮೇಲೆ ಸಮಾಜ ನಿರ್ಮಾಣವಾಗಿದೆ ಅದು ಬದಲಾವಣೆಯಾಗದ ಹೊರತು ಆರ್ಥಿಕಾಭಿವೃದ್ಧಿ ಖಂಡಿತ ಸಾಧ್ಯವಿಲ್ಲ. ಇವೊತ್ತು ಕೈಗಾರಿಕೆ ಏನಾಗಿದೆ ಎಂದರೆ ಬೆಂಗಳೂರು, ಮೈಸೂರು ಸಿಟಿಗಳಲ್ಲಿ ಕೈಗಾರಿಕೆ ಕೇಂದ್ರೀಕೃತವಾಗಿದೆ. ಯಾರಾದರೂ ಬಾಂಬೆ, ಕಲ್ಕತ್ತಾ ಕಡೆಯಿಂದ ದೊಡ್ಡ ದೊಡ್ಡ ಉದ್ದಿಮೆದಾರರು ಬಂದರೆ ಅವರು ಇಂತಹ ಹಳ್ಳಿಗಳಿಗೆ ಹೋಗಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಿ, ಅಲ್ಲಿ ಸಿಕ್ಕತಕ್ಕ ಸ್ಥಳೀಯ ಮೆಟೀರಿಯಲ್ಸ್ ಉಪಯೋಗ ಮಾಡುವುದಕ್ಕೆ ಸಾಧ್ಯವಿದೆ ಎಂದು ನಮ್ಮ ಸರ್ಕಾರ ಹೇಳಿದರೆ ಇದರಿಂದ ಅನೇಕ ಸಮಸ್ಯೆಗಳು ಪರಿಹಾರವಾದೀತು ಎನ್ನುವ ಮಾತನ್ನು ಹೇಳಲಿಕ್ಕೆ ನಾನು ಬಯಸುತ್ತೇನೆ.

ಇನ್ನು ಅರಣ್ಯ ಇಲಾಖೆಯ ಬಗ್ಗೆ ನಾನು ಎರಡು ಮಾತುಗಳನ್ನು ಹೇಳಬೇಕಾಗಿದೆ. ಇವತ್ತು ನಮ್ಮ ಮಲೆನಾಡಿನಲ್ಲಿ ಸಾಗರ, ಹೊಸನಗರ ಮತ್ತು ಇನ್ನು 2-3 ತಾಲ್ಲೂಕುಗಳು ಮುಳುಗಡೆ ಆಗಿರುವುದರಿಂದ ತಾಲ್ಲೂಕು ಬೋರ್ಡುಗಳಿಗೆ ಅರಣ್ಯದಿಂದ ಬರತಕ್ಕ ರೆವಿನ್ಯೂ ಇನ್‌ಕಂ ಬರುತ್ತಾ ಇಲ್ಲ. ಕಾರವಾರ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಿಂದ ತಮಗೆ ಬರತಕ್ಕಂಥ ಉತ್ಪತ್ತಿಯಲ್ಲಿ ಕೆಲವೊಂದು ಅಂಶವನ್ನು ಕೊಡತಕ್ಕ ನೀತಿಯನ್ನು ಏನು ಇಟ್ಟಿದ್ದೀರೋ ಆ ನೀತಿಯನ್ನು ಶಿವಮೊಗ್ಗ ಜಿಲ್ಲೆಗೂ ಅಳವಡಿಸಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

11-30 A.M.

ಅನಂತರ ಯಾವಾಗಲೂ ಬಯಲು ಸೀಮೆಗೂ ಮತ್ತು ಮಲೆನಾಡಿಗೂ ಒಂದು ವ್ಯತ್ಯಾಸ ಇದೆ ಎಂದು ತಾವು ತಿಳಿದುಕೊಳ್ಳಬೇಕು. ಮಲೆನಾಡಿನಲ್ಲಿ 100 ಕ್ಕೆ 99 ಭಾಗ ಭೂಮಿ ಅರಣ್ಯಕ್ಕೆ ಸೇರಿರತಕ್ಕಂಥ ಭೂಮಿ. ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ರೈತರಿಗೆ ಇದುವರೆಗೂ ಕೊಡುತ್ತಿದ್ದರು. ಈಗ ತಾನೆ ಸರ್ಕಾರದವರು ತಳೆದುಕೊಂಡಿರತಕ್ಕ ನೀತಿಯಿಂದಾಗಿ ಅರಣ್ಯ ಇಲಾಖೆಯವರು ಲಾರಿಯಲ್ಲಿ ಹೋಗಿ ಅಲ್ಲಿರತಕ್ಕ ಜನರನ್ನು ಎಬ್ಬಿಸಿ ಅವರನ್ನು ಹೀಯಾಳಿಸಿ, ನೂಕುತ್ತಿರುವುದನ್ನು ನೋಡಿದರೆ ನಮ್ಮ ಕಣ್ಣಲ್ಲಿ ನೀರು ಬರುತ್ತದೆ. ನಾವು ಎಷ್ಟು ಅರ್ಜಿಗಳನ್ನು ಈ ಬಗ್ಗೆ ಅರಣ್ಯ ಇಲಾಖೆಯವರಿಗೆ ಕೊಟ್ಟರೂ ಕೂಡ ಅವನ್ನು ಪರಿಶೀಲಿಸುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇವರಿಗೆ ಯೋಗ್ಯ ಪುನರ್ವಸತಿ ಏರ್ಪಾಡು ಮಾಡಿ ಸಾಗರ, ಹೊಸನಗರ ಮತ್ತು ತೀರ್ಥಹಳ್ಳಿಯಲ್ಲಿ ಜಮೀನು ಮುಳುಗಡೆ ಆದ ಜನರಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ, ಎಲ್ಲಿ ನೀರಿನ ಆಶ್ರಯ ಇದೆಯೋ ಅಲ್ಲಿ ವಸತಿ ಏರ್ಪಾಡು ಮಾಡುವ ಯೋಚನೆ ಮಾಡಿ. ಎಲ್ಲಿ ನೀರಿನ ಆಶ್ರಯವಿದೆಯೋ ಅಲ್ಲಿ ಸಾಗುವಳಿ ಮಾಡಿಕೊಂಡಿರಲಿ. ಇಲ್ಲದೆ ಹೋದರೆ ಒಂದು ಕೈಗಾರಿಕೆಯನ್ನು ಅವರ ಜೀವನೋಪಾಯಕ್ಕೆ ಮಾಡಿಕೊಡಲಿ. ಇದು ಮಾನವೀಯತೆಯ ಪ್ರಶ್ನೆ. ನೂರಾರು ಕುಟುಂಬಗಳು 10-15 ವರ್ಷಗಳಿಂದ ಅರಣ್ಯ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಬರುತ್ತಿದ್ದುದನ್ನು ತಪ್ಪಿಸಿದ್ದೀರಿ. ನಮಗೆ ಅರಣ್ಯ ಬೇಕು ಎನ್ನುವ ತತ್ವವನ್ನು ನಾನೂ ಒಪ್ಪುತ್ತೇನೆ. ಮಾನವೀಯತೆಯ ದೃಷ್ಟಿಯಿಂದ ಇವರಿಗೆ ಏನಾದರೂ ಪರಿಹಾರ ಸೂಚನೆ ಮಾಡದೆ ಇವರನ್ನು ಅಲ್ಲಿಂದ ಹೋಗಿ ಎಂದರೆ ಇವರು ಎಲ್ಲಿಗೆ ಹೋಗುತ್ತಾರೆ? ಸಮುದ್ರಕ್ಕೋ, ನದಿಗೋ ಹೋಗಿ ಬೀಳಬೇಕು. ನಮ್ಮ ಸರ್ಕಾರ ಇವರ ಬಗ್ಗೆ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕ್ರಾಷ್ ಪ್ರೋಗ್ರಾಂ ವಿಚಾರದಲ್ಲಿ ಹೇಳಬೇಕೆಂದರೆ ತಾಲ್ಲೂಕು ಬೋರ್ಡುಗಳಿಗೆ ನಮ್ಮ ಇಂದಿರಾಜಿಯವರು ಅನ್ ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ನಿವಾರಣೆಗೋಸ್ಕರ ಲಕ್ಷಗಟ್ಟಲೆ ಹಣವನ್ನು ಕೊಟ್ಟಿದ್ದಾರೆ. ಸುಳ್ಳು ರೋಲ್ ಕಾಲ್ ಬರೆದು, ಒಂದು ನಯಾ ಪೈಸಾ ಕೆಲಸವೂ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಆಗದೆ ಲಕ್ಷಗಟ್ಟಲೆ ದುಡ್ಡು ಖರ್ಚಾಗಿದೆ ಎಂದು ತೋರಿಸುತ್ತಿದ್ದಾರೆ. ಇದನ್ನು ಇನ್‌ವೆಸ್ಟಿಗೇಟ್ ಮಾಡಬೇಕು. ನಾವು ಏನು ಉದ್ದೇಶವಿಟ್ಟುಕೊಂಡಿದ್ದೇವೆ ಅದು ಸಾಫಲ್ಯವಾಗುತ್ತಾ ಇಲ್ಲ. ಇದನ್ನು ಯೋಚನೆ ಮಾಡಬೇಕಾಗಿದೆ.

ಸರ್ಕಾರದಲ್ಲಿ 80-100 ರೂಪಾಯಿ ಸಂಬಳ ತೆಗೆದುಕೊಳ್ಳತಕ್ಕ ನೌಕರರ ವಿಚಾರ ಬಡ್ಜೆಟ್ಟಿನಲ್ಲಿ ಹೇಳಿದ್ದಾರೆ. ಅವರಿಗೆ ಕೊಡತಕ್ಕ ಸಂಬಳ ಹೆಚ್ಚು ಮಾಡಿದ್ದೀರಿ. ಅದು ತೀರ ಸಾಲದು ಎಂದು ಹೇಳುತ್ತೇನೆ. ಜೀವನದ ಮಟ್ಟ ಮೊದಲು ಇರುವುದಕ್ಕಿಂತ ಹತ್ತು ಪಾಲು ಹೆಚ್ಚಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಯಾವ ತಾಲ್ಲೂಕು ಬೋರ್ಡಿನಲ್ಲಿ ಆ ರೀತಿ ಸುಳ್ಳು ರೋಲ್ ಕಾರ್ ಇಟ್ಟಿದ್ದಾರೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸೂಪರ್‌ವೈಸರ್ ಇರುತ್ತಾರೆ. ಅವರು ಎಲ್ಲಾ ಕೊಲ್ಯೂಡ್ ಆಗುತ್ತಾರೆ. ಅದನ್ನೆಲ್ಲಾ ಇಲ್ಲಿ ನಾನು ಹೇಳಬೇಕಾಗಿಲ್ಲ. ಒಂದು ರೋಲ್ ಕಾರ್‌ನಲ್ಲಿ ರಾಮ, ಭೀಮ, ಕೃಷ್ಣ, ಸೋಮ ಎಂಬುದಾಗಿ ಬರೆದು ದುಡ್ಡು ಹಂಚಿದಹಾಗೆ ಖರ್ಚನ್ನು ತೋರಿಸುತ್ತಾರೆ. ಕೆಲಸ ಮಾತ್ರ ಆಗಿರುವುದಿಲ್ಲ. ಇನ್ನು ಸರ್ಕಾರಿ ನೌಕರರ ಬಗ್ಗೆ ಹೇಳುತ್ತೇನೆ. ತಾವು ಏನು ಇವತ್ತು ಅವರಿಗೆ ಸಂಬಳವನ್ನು ಹೆಚ್ಚು ಮಾಡಿದ್ದೀರಿ ಅದು ಏತಕ್ಕೂ ಸಾಲದು. 100-125ರೂಪಾಯಿ ಸಂಬಳ ಬರತಕ್ಕ ಕಾರಕೂನ ಇದರ ಜೊತೆಗೆ 10-20 ರೂಪಾಯಿ ಲಂಚ ತಿನ್ನದೆ ಸಂಸಾರ ನಿರ್ವಹಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನೌಕರರಿಗೆ ಸರಿಯಾದ ರೀತಿಯಲ್ಲಿ ಸಂಬಳ ಕೊಡದೆ ಹೋದರೆ ಲಂಚ ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರಿ ಆಫೀಸುಗಳಿಗೆ ಒಂದು ಕಾಗದ ಬರೆದರೆ, ಫೈಲು ಒಂದು ಆಫೀಸಿನಿಂದ ಇನ್ನೊಂದು ಆಫೀಸಿಗೆ ಹೋಗಬೇಕಾದರೆ ವಾರಗಟ್ಟಲೆ, ತಿಂಗಳುಗಟ್ಟಲೆ ಹಿಡಿಯುತ್ತದೆ. ನಮ್ಮ ಜನರು ನಮ್ಮ ಸರ್ಕಾರದ ಬಗ್ಗೆ ಬೃಹದಾಕಾರವಾದ ನಿರೀಕ್ಷಣೆ ಇಟ್ಟುಕೊಂಡಿದ್ದಾರೆ. ಹಿಂದಿನ ಕಾಲದಲ್ಲಿ ಆಫೀಸಿಗೆ ಒಂದು ಕಾಗದ ಬರೆದರೆ ಎಂಟು ದಿವಸದೊಳಗೆ ಉತ್ತರ ಬರುತ್ತಿತ್ತು. ಈಗ ಸಂಬಂಧಪಟ್ಟ ಕಾರಕೂನನನ್ನು ನೋಡಿ ಫೈಲನ್ನು ತೆಗೆಸಿಕೊಂಡು ಹೋಗಬೇಕು. ತಾನಾಗಿ ಫೈಲ್ ಮೂವ್ ಆಗುವುದಿಲ್ಲ. ಇದು ಸುಧಾರಣೆ ಆಗದ ಹೊರತು ನಮ್ಮ ಸರ್ಕಾರಕ್ಕೆ, ನಮ್ಮ ನಾಯಕತ್ವಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ ಎಂದು ಮಂತ್ರಿವರ್ಯರಲ್ಲಿ ಅರಿಕೆ ಮಾಡಿಕೊಂಡು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷಿಣಿಯವರಿಗೆ ವಂದಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷಿಣಿಯವರೇ, ಮಾರ್ಚ್ 25 ರಲ್ಲಿ ಏನು ಬಡ್ಜೆಟ್ ಇಟ್ಟಿದ್ದಾರೋ ಅದರಲ್ಲಿ ಕೆಲವು ಫಿಗರ್ಸ್‌ಗಳನ್ನು ಅಡ್ಜಸ್ಟ್ ಮಾಡಿ ಇದು ಹೊಸ ಬಡ್ಜೆಟ್‌ಎಂದು ಅರ್ಥಸಚಿವರು ನಮ್ಮ ಮುಂದೆ ಇಟ್ಟಿದ್ದಾರೆ. ಇದರಲ್ಲಿ ಆಶಾದಾಯಕವಾದ ವಿಚಾರಗಳು ಎಂದರೆ ಒಂದನೆಯದಾಗಿ ಓವರ್ ಡ್ರಾಫ್ಟ್ ಕ್ಲಿಯರ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅದು ಸಂತೋಷದ ವಿಚಾರ. ಎರಡನೆಯದು ಸ್ಲಂಕ್ಲಿಯರೆನ್ಸ್ ಬಗ್ಗೆ ಸ್ವಲ್ಪ ಹಣ ಇಟ್ಟಿದ್ದೇವೆಂದು ಹೇಳಿದ್ದಾರೆ. ನಮ್ಮ ಬೆಂಗಳೂರು ನಗರದಲ್ಲಿ ಹೆಚ್ಚಾಗಿ ಸ್ಲಂ ಇರುವ ಕಡೆ ಕೇಂದ್ರ ಸರ್ಕಾರದಿಂದ ಹಣ ಬರುತ್ತದೋ ಇಲ್ಲವೋ ಗೊತ್ತಿಲ್ಲ, ಬರುತ್ತದೆಂದು ತೋರಿಸಿ ಬಿಟ್ಟು, ಬೆಂಗಳೂರು ನಗರದಲ್ಲಿ ಅತಿ ಮುಖ್ಯವಾಗಿ ಆಗಬೇಕಾದಂಥ ಈ ಸ್ಲಂ ಕ್ಲಿಯರೆನ್ಸ್‌ಗೆ ಯಾವ ಹಣವನ್ನು ಇಡದೆ ಇರತಕ್ಕದ್ದು ಒಂದು ಲೋಪ. ಮುಖ್ಯವಾಗಿ ಸರ್ಕಾರಿ ನೌಕರರು ಹಾಗೂ ಪೆನ್‌ಷನ್‌ದಾರರಿಗೆ ಸ್ವಲ್ಪ ಹೆಚ್ಚಿನ ತುಟ್ಟಿಭತ್ಯ ಕೊಡಬೇಕು ಎನ್ನುವ ಒಂದು ಸೂಚನೆ ಕೊಟ್ಟಿದ್ದಾರೆ. ಅವರಿಗೆ ಸ್ವಲ್ಪ ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ನಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತೇವೆ. ಎರಡೂಮುಕ್ಕಾಲು ಕೋಟಿ ಇರತಕ್ಕ ಜನಸಂಖ್ಯೆಯಲ್ಲಿ ಕೇವಲ ಈ ನಾಲ್ಕು ಲಕ್ಷ ಸರ್ಕಾರಿ ನೌಕರರಿಗೆ ಮಾತ್ರ ಸೌಲಭ್ಯವನ್ನು ಒದಗಿಸಿಕೊಟ್ಟು ಉಳಿದ 271 ಲಕ್ಷ ಜನರಿಗೆ ಯಾವ ವಿಧವಾದ ಪ್ರತಿಫಲವನ್ನು ಕೊಡದೆ ಅವರಮೇಲೆ 4 ಕೋಟಿ ರೂಪಾಯಿ ತೆರಿಗೆಯನ್ನು ಹಾಕಿದ್ದಾರೆ. ಹೀಗೆ ಕೇವಲ ನಾಲ್ಕು ಲಕ್ಷ ಜನಕ್ಕೆ ಅನುಕೂಲ ಮಾಡಿಕೊಟ್ಟು ಮಿಕ್ಕ ಜನಗಳಿಗೆ ಒಂದೂವರೆ ರೂಪಾಯಿಯಷ್ಟು ಹೆಚ್ಚಿನ ಸುಂಕ ಹಾಕಿ ಅವರ ಮೇಲೆ ತೆರಿಗೆಯ ಭಾರವನ್ನು ಹೊರಿಸಿದ್ದಾರೆಂದು ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರದ ತೆರಿಗೆಯ ಹೊರೆ ವರ್ಷೇ ವರ್ಷೇ ಏರುವ ಕಾಲದಲ್ಲಿ, ರಾಜ್ಯ ಸರ್ಕಾರವೂ ಸೇಲ್ಸ್ ಟ್ಯಾಕ್ಸ್, ಮೋಟಾರ್ ಟ್ಯಾಕ್ಸ್, ವಾಟರ್ ರೇಟ್ ತೆರಿಗೆ ಹೇರಿರತಕ್ಕದ್ದು ಅಷ್ಟು ಉಚಿತವಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ವಸೂಲು ಮಾಡತಕ್ಕ ತೆರಿಗೆಯನ್ನು ಸರಿಯಾದಂತ ರೀತಿಯಲ್ಲಿ ವಸೂಲು ಮಾಡಿ ಖರ್ಚಿನ ಬಾಬುಗಳಲ್ಲಿ ಅಲ್ಲಲ್ಲಿ ಉಳಿತಾಯ ಮಾಡಿದ್ದರೆ ಈ ಹೆಚ್ಚುವರಿ ತೆರಿಗೆಯನ್ನು

ಹಾಕಬೇಕಾದ ಸಂದರ್ಭವಿರಲಿಲ್ಲ ಎಂದು ಹೇಳುತ್ತೇನೆ. ವ್ಯವಸಾಯದ ಮತ್ತು ಕೈಗಾರಿಕಾ ಅಭಿವೃದ್ಧಿಯ ಬಗ್ಗೆ ಬೇಕಾದಷ್ಟು ಉತ್ತೇಜನ ಕೊಡುತ್ತೇವೆಂದು ಒಂದು ಕಡೆ ಹೇಳುವುದು, ಮತ್ತೊಂದು ಕಡೆ ವಾಟರ್ ರೇಟನ್ನು, ಸೇಲ್ಸ್ ಟ್ಯಾಕ್ಸನ್ನು ಹೆಚ್ಚಿಸಿ ರೈತರಿಗೆ ಬೇಕಾದಂಥ ಮೋಟಾರ್ ಪಾರ್ಟ್ಸ್‌ಗಳ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಮತ್ತು ಜನಗಳ ದಿನ ನಿತ್ಯ ಜೀವನಕ್ಕೆ ಬೇಕಾದ ಸಾಮಾನುಗಳ ಮೇಲೆ ತೆರಿಗೆಯನ್ನು ಹಾಕಿದ್ದಾರೆ. ಕೈಗಾರಿಕೆ ಮತ್ತು ವ್ಯವಸಾಯಕ್ಕೆ ಧಕ್ಕೆ ತರತಕ್ಕ ರೀತಿಯಲ್ಲಿ ಟ್ಯಾಕ್ಸ್ ಹಾಕಿದರೆ, ಯಾವ ವಿಧವಾದಂಥ ಪ್ರಗತಿಯನ್ನು ನಾವು ಮಾಡಿದಂತಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಮತ್ತು ರೆವಿನ್ಯೂ ಸರ್ಪ್ಲಸ್ ಸುಮಾರು ಏಳು ಕೋಟಿ ರೂಪಾಯಿಗಳು ಎಂದು ತೋರಿಸಿ ಕೊನೆಗೆ ಓವರ್ ಆಲ್ ಡಿಫಿಸಿಟ್ ನಾಲ್ಕು ಕೋಟಿ ರೂಪಾಯಿ ಎಂದು ನಮ್ಮ ಮುಂದೆ ಇಟ್ಟಿದ್ದಾರೆ. ಇದು ಜಗ್ಲರಿ ಆಫ್ ಫಿಗರ್ಸ್, ಇದರಿಂದ ಹೆಚ್ಚು ಸೌಕರ್ಯ ಜನಗಳಿಗೆ ಆಗುತ್ತದೆ ಎನ್ನುವ ನಂಬಿಕೆ ನನಗೆ ಇಲ್ಲ. ಲ್ಯಾಂಡ್ ರೆವೆನ್ಯೂನಲ್ಲಿ ಸುಮಾರು 7 ಕೋಟಿ ರೂಪಾಯಿ ವರಮಾನ ಬರುತ್ತದೆ, 485 ಕೋಟಿ ರೂಪಾಯಿ ಖರ್ಚಾಗುತ್ತದೆ ಎಂದು ಹೇಳುತ್ತಾರೆ. ಒಂದಾನೊಂದು ಕಾಲದಲ್ಲಿ ರಾಜ್ಯದ ಮುಖ್ಯ ವರಮಾನ ಭೂಕಂದಾಯವಾಗಿತ್ತು. ಈಗ ಭೂಕಂದಾಯದಿಂದ 7 ಕೋಟಿ ರೂಪಾಯಿ ವರಮಾನ ಬಂದು 5 ಕೋಟಿ ರೂಪಾಯಿ ಖರ್ಚಾಗುತ್ತದೆ. ಬರೀ ಎರಡು ಕೋಟಿ ರೂಪಾಯಿಗಳಿಗೋಸ್ಕರ ಭೂಕಂದಾಯವನ್ನು ಏಕೆ ಇಡಬೇಕು ? ವರಮಾನ ತೆರಿಗೆ ಅಥವಾ ಬೇರೆ ರೀತಿಯಲ್ಲಿ ಹಣವನ್ನು ತುಂಬಿಸಿಕೊಂಡು ಈ ತೆರಿಗೆಯನ್ನು ಏಕೆ ತೆಗೆದುಹಾಕಬಾರದು ಎಂದು ಯೋಚನೆ ಮಾಡಬೇಕಾಗಿತ್ತು. ಇದರಿಂದ ರೈತರಿಗಾದರೂ ಸಹಾಯ ಮಾಡಿದಂತೆ ಆಗುತ್ತಿತ್ತು.

ರಾಜ್ಯದಲ್ಲಿ ಪಾನನಿರೋಧವನ್ನು ಜಾರಿಗೆ ತರಬೇಕು ಎನ್ನುವ ಉದ್ದೇಶದಿಂದ ಮಾರಾಟ ತೆರಿಗೆಯನ್ನು ಜಾರಿಗೆ ತಂದರು. ಮಾರಾಟ ತೆರಿಗೆಯಿಂದ 51 ಕೋಟಿ ರೂಪಾಯಿ ಬರುತ್ತದೆ, ಖರ್ಚು 1.37 ಕೋಟಿ ರೂಪಾಯಿ ಎಂದು ಹೇಳುತ್ತಾರೆ. ಆದರೆ ಈ ಮಾರಾಟ ತೆರಿಗೆ ದಿನೇ ದಿನೇ ನಿತ್ಯ ಜೀವನದ ವಸ್ತುಗಳದ್ದು ಇದರಿಂದ ಸಾರ್ವಜನಿಕರ ಖರ್ಚಿನ ಮಟ್ಟ ಹೆಚ್ಚಾಗುವುದಕ್ಕೆ ಅವಕಾಶವಾಗುತ್ತಿದೆ. ಟ್ಯಾಕ್ಸ್ ಹಾಕುವಾಗ ಅದನ್ನು ಸರಿಯಾದ ರೀತಿಯಿಂದ ವಸೂಲು ಮಾಡಿದರೆ ಸರ್ಕಾರಕ್ಕೆ ಹೆಚ್ಚಿನ ಆದಾಯ ಬಂದು ಹೊಸ ತೆರಿಗೆಗಳನ್ನು ಹಾಕುವ ಅವಶ್ಯಕತೆ ಬರುವುದಿಲ್ಲ. ಎಕ್ಸೈಸ್ ಡ್ಯೂಟಿಯಿಂದ 28 ಕೋಟಿ ರೂಪಾಯಿ ವರಮಾನ ಬರುತ್ತದೆ, 2 ಕೋಟಿ ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ಕಳ್ಳಭಟ್ಟಿಯನ್ನು ತಪ್ಪಿಸಿದರೆ ಸರ್ಕಾರಕ್ಕೆ ಒಂದು ಕೋಟಿ ರೂಪಾಯಿ ವರಮಾನ ಹೆಚ್ಚಿಸುವುದಕ್ಕೆ ಸಾಧ್ಯವಿದೆ. ಆ ಬಗ್ಗೆ ಗಮನ ಕೊಡದೆ ಇರುವುದು ಅಷ್ಟು ಒಳ್ಳೆಯದಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಮೋಟಾರ್ ವೆಹಿಕಲ್ಸ್ ಇಲಾಖೆಯಲ್ಲಿ ಲಂಚ ತುಂಬಿ ತುಳುಕಾಡುತ್ತಿದೆ. ಟ್ಯಾಕ್ಸ್ ಹೆಚ್ಚಿಸುವುದರ ಮೂಲಕ ಸರ್ಕಾರಕ್ಕೆ ವರಮಾನ ಹೆಚ್ಚಾಗಿ ಬರುತ್ತದೆ ಎಂದು ಹೇಳಬಹುದಾದರೂ ಅದರಲ್ಲಿ ಸುಮಾರು ಅರ್ಧ ಭಾಗದಷ್ಟು ಲಂಚದ ರೂಪದಲ್ಲಿ ಹೋಗುತ್ತದೆ. ಈ ಇಲಾಖೆಯಲ್ಲಿರುವ ಲಂಚದ ಹಾವಳಿಯನ್ನು ತಪ್ಪಿಸಿದ್ದೇ ಆದರೆ, ವಾಹನಗಳ ಮೇಲಿನ ತೆರಿಗೆಯನ್ನು ಸೇಕಡ 10ರಷ್ಟು ಹೆಚ್ಚು ಮಾಡಿದರೂ ಅದರಿಂದ ಜನಗಳಿಗೆ ತೊಂದರೆಯಾಗುವುದಿಲ್ಲ.

As motor vehicles tax you are getting 11 crores. By way of corruption–illegal gratification–,you are losing nearly half that amount. If you can somehow avoid the corruption and inconvenience that has been caused to the vehicle owners, you can certainly raise vehicle tax. They will gladly pay it, if you get them out of the clutches and harassment of the people who control it.

Sri M. Y. GHORPADE.—How to eradicate corruption ? Will the hon. Member please make some concrete suggestions as to the steps which have to be taken to eradicate corruption and for a more effective collection of sales tax?

Sri T. R. SHAMANNA.—I have been given only ten minutes' time. When the demand comes, I will just try to give my opinion.

ಪೋಲೀಸ್ ಇಲಾಖೆಯಲ್ಲಿ ಸುಮಾರು 10 ಕೋಟಿ ರೂಪಾಯಿ ಖರ್ಚುಮಾಡಿ ಅದರಿಂದ ವರಮಾನ 0.37 ಕೋಟಿ ರೂಪಾಯಿ ಎಂದು ಹೇಳಿದ್ದಾರೆ ಈ ಇಲಾಖೆಗೆ 10 ಕೋಟಿ ರೂಪಾಯಿ

(SRI T. R. SHAMANNA)

ಖರ್ಚು ಮಾಡುವಾಗ ದೇಶದಲ್ಲಿ ಕಳ್ಳತನ ಕಡಮೆಯಾಗಿದೆಯೇ, ದರೋಡೆ ಕಡಮೆಯಾಗಿದೆಯೇ, ಖೂನಿಗಳು ಕಡಮೆಯಾಗಿವೆಯೇ, ಯಾವುದು ಕಡಮೆಯಾಗಿದೆ ಎಂದು ನೋಡಿದರೆ ಯಾವುದೂ ಕಡಮೆಯಾಗಿಲ್ಲ. ಈ ಇಲಾಖೆಗೆ 10 ಕೋಟಿ ರೂಪಾಯಿ ಖರ್ಚು ಮಾಡುವುದರ ಬದಲು ಜನಗಳ ಮಾರಲ್ ಸ್ಟಾಂಡರ್ಡ್ಸ್ ಉತ್ತಮವಾಗುವುದಕ್ಕೆ ಏನಾದರೂ ಪ್ರಯತ್ನಪಟ್ಟರೆ ಒಳ್ಳೆಯದಾಗುತ್ತದೆ. ಪೋಲೀಸ್ ಇಲಾಖೆಗೆ 10 ಕೋಟಿ ರೂಪಾಯಿ ಖರ್ಚು ಮಾಡುತ್ತಿರುವುದು ಜಾಸ್ತಿ, ಅದಕ್ಕೆ ತಕ್ಕ ಪ್ರತಿಫಲ ಅದರಿಂದ ದೊರೆಯುತ್ತಿಲ್ಲ ಎಂದು ಹೇಳುತ್ತೇನೆ.

ರೈತ ಬಾಂಧವರಿಗೆ ಸ್ವಲ್ಪ ಬೇಜಾರಾಗಬಹುದು. ನೀರಾವರಿಯಲ್ಲಿ ಕಮರ್ಷಿಯಲ್ ಮತ್ತು ನಾನ್ ಕಮರ್ಷಿಯಲ್ ತೆಗೆದುಕೊಂಡರೆ 22 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೀರಿ. ಅದರಿಂದ ಬರತಕ್ಕ ವರಮಾನ ಕೇವಲ 2.7 ಕೋಟಿ ರೂಪಾಯಿಗಳು. ಈಗಾಗಲೇ ನೀರಾವರಿ ಗೋಸ್ಕರ ಸುಮಾರು 225–250 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇದುವರೆಗೆ ಹಾಕಿರತಕ್ಕ ಬಂಡವಾಳ ಮತ್ತು ಈ ವರ್ಷ ಖರ್ಚು ಮಾಡತಕ್ಕ ಹಣವನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಅದರಿಂದ ಕೇವಲ ಮೂರು ಕೋಟಿ ರೂಪಾಯಿ ವರಮಾನ ಬಂದರೆ ಇದು ವ್ಯವಹಾರವೇ, ವ್ಯಾಪಾರವೇ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು. ವ್ಯವಸಾಯ ಬಹಳ ಮುಖ್ಯವಾದುದು ನೀರಾವರಿ ಎಲ್ಲಕ್ಕಿಂತ ಮುಖ್ಯವಾದುದು ಎನ್ನುವ ಅಭಿಪ್ರಾಯವಿದೆ. ಆದರೆ ರೈತರಿಗೆ ತೊಂದರೆಯಾಗದ ಹಾಗೆ ಹೆಚ್ಚಿನ ರೀತಿಯಲ್ಲಿ ಅದರಿಂದ ವರಮಾನ ತೆಗೆದುಕೊಳ್ಳುವುದಕ್ಕೆ ಒಂದು ದಾರಿ ಕಂಡುಹಿಡಿಯಬೇಕು. You must find a way out and see as to how you can increase food production, and check the middlemen, so that the profits that the middleman is making go to the producer. Let the consumer and producer be benefited and not the middleman. Find a way as to how you can get a better return for the capital investment. You have already invested 200 crores and you are investing about 22 crores again. The return is only three crores. The money that you are spending is from borrowed funds. Some thinking is necessary in that direction. As a person who knows something of Commerce, I am just telling you about it. It is left for the persons who want to take the country to socialism to think as to how best to get incomes without harassing the people.

ವಿದ್ಯಾಭ್ಯಾಸಕ್ಕೆ ಮತ್ತು ಆರೋಗ್ಯಕ್ಕೆ ಮೊದಲು ಒದಗಿಸಿದ್ದುದಕ್ಕಿಂತ ಖೋತಾ ಮಾಡಿದ್ದಾರೆ. ಇದು ಸರಿಯಿಲ್ಲ. ವಿದ್ಯಾಭ್ಯಾಸಕ್ಕೆ 59.6 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಅದರಿಂದ ಬರತಕ್ಕ ವರಮಾನ 4.25 ಕೋಟಿ ರೂಪಾಯಿ ? ನಾನು ವಿದ್ಯಾ ಸಚಿವರಲ್ಲಿ ತಿಳಿಸಬೇಕೆಂದಿರುವುದು ಇಷ್ಟೇ—ವಿದ್ಯಾಭ್ಯಾಸಕ್ಕೆ ಕಡಮೆ ಹಣ ಖರ್ಚು ಮಾಡಿ ಎಂದು ಹೇಳುವುದಿಲ್ಲ. ನಾವು ಒಂದು ದಿನಕ್ಕೆ ಸುಮಾರು 100 ಸರ್ಟಿಫಿಕೇಟುಗಳನ್ನು ಕೊಡುತ್ತೇವೆ. ಅದರಲ್ಲಿ 90 ಪರ್ಸೆಂಟ್ ಸುಳ್ಳು ಸರ್ಟಿಫಿಕೇಟ್ ಎನ್ನುವುದು ಗೊತ್ತಿದೆ. ಯಾರು ಸರಿಯಾದ, ನಿಗದಿಯಾದ ವರಮಾನವನ್ನು ಪಡೆಯುತ್ತಾರೆ ಅಂಥವರಿಗೆ ಯಾವ ಪ್ರತಿಫಲವೂ ಸಿಕ್ಕುತ್ತಿಲ್ಲ. ವ್ಯಾಪಾರ ಮಾಡುವವರು, ಬೇರೆ ಬೇರೆ ಉದ್ಯಮಗಳನ್ನು ಇಟ್ಟುಕೊಂಡಿರುವವರು ಹೆಚ್ಚಿನ ಅನುಕೂಲ ಪಡೆದು ನಿಜವಾಗಿ ಯಾರಿಗೆ ಅನುಕೂಲ ಸಲ್ಲಬೇಕಾಗಿತ್ತೋ ಅಂಥವರಿಗೆ ಸಲ್ಲುತ್ತಿಲ್ಲ. ಆದುದರಿಂದ ಈ ಬಡ ವಿದ್ಯಾರ್ಥಿಗಳು ಯಾರು ಎನ್ನುವುದನ್ನು ಕಂಡುಹಿಡಿದು ಅಂಥವರಿಗೆ ಹೆಚ್ಚಿನ ಸಹಾಯ ಒದಗಿಸಿ ಕೊಟ್ಟು, ಕೊಡುವುದಕ್ಕೆ ಶಕ್ತಿ ಇರುವುದರಿಂದ ಹೆಚ್ಚಿನ ಶುಲ್ಕ ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡಿ ವಿದ್ಯಾಭ್ಯಾಸದಿಂದ ಬರತಕ್ಕ ವರಮಾನವನ್ನು ಹೆಚ್ಚು ಮಾಡಿದರೆ ಉತ್ತಮವೆಂದು ತಿಳಿದುಕೊಂಡಿದ್ದೇನೆ.

ಆರೋಗ್ಯ ಇಲಾಖೆಗೋಸ್ಕರ ಒದಗಿಸಿದ್ದ ಹಣವನ್ನೂ ಮೊಟಕು ಮಾಡಿದ್ದಾರೆ. 18 ಕೋಟಿ ರೂಪಾಯಿ ಖರ್ಚು ಮಾಡುವಾಗ ಅದರಿಂದ ಬರುವಂಥ ವರಮಾನ 1·8 ಕೋಟಿ ರೂಪಾಯಿ. ಕೈಗಾರಿಕಾ ಇಲಾಖೆಯಲ್ಲಿ 15 ಕೋಟಿ ರೂಪಾಯಿ ಖರ್ಚು ಮಾಡಿ ಅದರಿಂದ ಕೇವಲ 12 ಕೋಟಿ ರೂಪಾಯಿ ಮಾತ್ರ ವರಮಾನ ಬರುತ್ತದೆ. ಇದರಿಂದ ಇನ್ನೂ ಹೆಚ್ಚಿನ ವರಮಾನ ಪಡೆಯುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ನೋಡಬೇಕು. ಕಮ್ಯೂನಿಟಿ ಡೆವಲಪ್‌ಮೆಂಟ್, ನ್ಯಾಷನಲ್

ಎಕ್ಸ್‌ಟೆನ್‌ಷನ್ ಸ್ಕೀಮುಗಳಿಗೆ 5.8 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಇದರಿಂದ ನಿಜವಾಗಿ ಸಮಾಜ ಕಲ್ಯಾಣ ಆಗುತ್ತಿದೆಯೇ? ಇದರಿಂದ ಇನ್ನೂ ಹೆಚ್ಚಿನ ಅನುಕೂಲವಾಗಬೇಕು ಎನ್ನುವುದರ ಕಡೆಗೆ ಸರ್ಕಾರದವರು ಸಾಕಾದಷ್ಟು ಗಮನ ಕೊಡಬೇಕು.

ಸಹಕಾರ ಇಲಾಖೆ ಸಾಧಾರಣವಾಗಿ ತನ್ನ ಕಾಲಮೇಲೆ ತಾನು ನಿಂತುಕೊಂಡು, ಸಹಕಾರ ತತ್ವಗಳನ್ನು ಜನಗಳಿಗೆ ಅರ್ಥಮಾಡಿ ಕೊಡಬೇಕು. ಈ ಇಲಾಖೆಗೆ ಖರ್ಚು ಮಾಡುವ ಹಣ 15 ಕೋಟಿ ರೂಪಾಯಿಗಳಾದರೆ, ಅದರಿಂದ ಬರುವಂಥ ವರಮಾನ ಕೇವಲ. 75 ಕೋಟಿ ರೂಪಾಯಿಗಳು. Co-operation Department must be really of a co-operative nature. I feel that the expenditure on Co-operation can be reduced if the Department is efficiently managed.

ಕೊನೆಯದಾಗಿ ನನ್ನ ಸಲಹೆಗಳನ್ನು ಹೇಳುವುದಕ್ಕೆ ಮುಂಚೆ ಒಂದು ಮಾತು ಹೇಳುತ್ತೇನೆ. ಲ್ಯಾಂಡ್ ಸೀಲಿಂಗ್, ಅರ್ಬನ್ ಸೀಲಿಂಗ್ ಬಗ್ಗೆ ವಿಸ್ತಾರವಾದ ಮಾತುಕತೆಗಳು ನಡೆಯುತ್ತಿವೆ. ಇದರ ಬಗ್ಗೆ ಬಜೆಟ್ಟಿನಲ್ಲಿ ಟೋಕನ್ ಗ್ರ್ಯಾಂಟ್ ಕೂಡ ಕೊಡದೆ ಇರುವುದಕ್ಕೆ ಕಾರಣ ಗೊತ್ತಾಗಿಲ್ಲ. ಈ ವರ್ಷ ಅದು ಬರುತ್ತದೆಯೋ, ಮುಂದಿನ ವರ್ಷ ಬರತ್ತದೆಯೋ ಎನ್ನುವ ಬಗ್ಗೆ ನನಗೆ ಸಂದೇಹ ಬರುತ್ತಿದೆ. ಸೋಷಿಯಲ್ ಸರ್ವಿಸಸ್‌ಗಳಿಗಾಗಿ ಎಂದು ಇಲ್ಲಿ ದೊಡ್ಡದಾಗಿ ಹಣವನ್ನು ಒದಗಿಸಿದ್ದಾರೆ. ಇದರಿಂದ ಯಾವ ಕೆಲಸಗಳೂ ಆಗುತ್ತಿಲ್ಲ. ಇಲ್ಲಿರುವ ಜನರಿಗೆ ಬರೀ ಸಂಬಳ ಸಾರಿಗೆಗಾಗಿ ಈ ಹಣ ಖರ್ಚಾಗುತ್ತಿದೆಯೇ ಹೊರತು ಬೇರೆ ಯಾವ ಕೆಲಸಗಳಿಗೂ ಇದು ಉಪಯೋಗವಾಗುತ್ತಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ಮುಖ್ಯವಾದ ವಿಚಾರ ಸರಕಾರ ಹೇಳುತ್ತಿದೆ. ಅದು ಜನರಿಗೆ ಮುಖ್ಯವಾಗಿ ಬೇಕಾಗಿರುವ ಹೊಟ್ಟೆಗೆ ಅನ್ನ, ಉಡಲು ಬಟ್ಟೆ ಮತ್ತು ವಾಸಿಸಲು ಮನೆ ಇವುಗಳನ್ನು ಮಾಡಬೇಕು ಎಂದು ಅವರು ಸೋಷಿಯಲಿಸಂ ಬಗ್ಗೆ ಗುರಿ ಇಟ್ಟುಕೊಂಡಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಇದರಲ್ಲಿ ಆಸ್ತಿಯ ಸೀಲಿಂಗು ಹಾಗೂ ಭೂಮಿಯ ಸೀಲಿಂಗು ಇದರ ಬಗ್ಗೆ ಹೇಳುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಹಣಕಾಸಿನ ಮಂತ್ರಿಗಳು ಅವರ ಭಾಷಣದಲ್ಲಿ ಒಂದು ಮಾತನ್ನೂ ಹೇಳಲಿಲ್ಲ. ಇದರ ಬಗ್ಗೆ ಏನಾದರೂ ಹೇಳಿದ್ದರೆ ನಾವು ಇಲ್ಲಿ ಯೋಚನೆ ಮಾಡಬಹುದಾಗಿತ್ತು.

Sri C. M. ARUMUGAM.—Nobody seems to take down the points. The Finance Minister is engaged with the Forest Minister or otherwise called as the General Minister. There is no mention about land reforms, land ceiling and urban ceiling. These two points are very important.

MADAM SPEAKER.—The hon. Member is entitled to say all this in his speech. But he may kindly sit down now.

Sri M. Y. GHORPADE.—It has been mentioned that the success of our policies and programmes including such vital measures as land reforms, will depend on the active awareness and participation of the people. It has been mentioned as a very vital programme which can only succeed if the people actively participate in it. We have passed a law and for the law to become successful, it is necessary for people to actively participate and be actively aware. Awareness has to be there, to successfully implement the land reforms. This is the statement that I have made in the Budget. The Budget speech contains only items on which we get revenue or items on which we have got to spend. The rest become a matter of adjustment which are not directly pertinent to the revenue or expenditure. There is nothing wrong in not mentioning these things. Land Reforms and ceilings are fundamental to the programme of the party to which I belong. It has been well publicised. So there was no need to make a detailed mention in this because there are no financial implications right now. This is a

(SRI M. Y. GHORPADE)

fundamental programme on which the party has come to power and it has been mentioned by the Prime Minister and also by the Chief Minister. There was no need for me to make a separate statement in my budget speech.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ನಗರದ ಆಸ್ತಿಗಳ ಮೇಲೆ ಮಿತಿ ಮತ್ತು ಭೂಮಿಯ ಮೇಲೆ ಮಿತಿಯ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಸರಕಾರ ಈಗಾಗಲೇ ಪ್ರತಿಪಾದನೆ ಮಾಡುತ್ತಿದೆ. ಇದನ್ನು ಮಾಡಿದ ಮೇಲೆ ಇವುಗಳನ್ನು ಯಾವ ರೀತಿ ಕಾರ್ಯಗತ ಮಾಡುತ್ತಾರೆ ಮತ್ತು ಇದಕ್ಕೆ ಎಲ್ಲಿಂದ ಹಣವನ್ನು ಒದಗಿಸುತ್ತಾರೆ ಎನ್ನುವ ಪ್ರಶ್ನೆಗಳು ಬಂದೇ ಬರುತ್ತವೆ. ಆಯುವ್ಯಯದ ಪಟ್ಟಿಯಲ್ಲಿ ಇದರ ಬಗ್ಗೆ ಯಾವ ದೃಷ್ಟಿಕೋನವೂ ಇಲ್ಲ. ಇದನ್ನು ಮಂತ್ರಿಗಳು ಇಲ್ಲಿ ಪ್ರಸ್ತಾಪಮಾಡಬಹುದಾಗಿತ್ತು ಎಂದು ನನ್ನ ಭಾವನೆ.

ಶ್ರೀ ಎಂ. ವೈ ಘೋರ್ಪಡೆ.—ಇದರ ಬಗ್ಗೆ ನಾವಾಗಲೇ ಸ್ಪಷ್ಟವಾಗಿ ಹೇಳಿಯಾಗಿದೆ. The items that are there inolving financial implications, are mentioned in the Budget.

SRI T. R. SHAMANNA.—My complaint is that though the Government is wedded to the certain programmes, Government has not provided even a token grant. Therefore I thought that probably they are not taking up these items this year. That is what I wanted to say. ತಾವೀಗ ಸೋಷಿಯಲಿಸ್ಟ್ ಪ್ಯಾಟರನ್ ಎಂದು ಏನು ಹೇಳುತ್ತಾ ಬರುತ್ತಿದ್ದೀರೋ ಅದನ್ನು ಯಾವ ರೀತಿ ತರುತ್ತೀರಿ ಎನ್ನುವುದನ್ನು ಇಲ್ಲಿ ಮಂತ್ರಿಗಳು ಹೇಳಬಹುದಾಗಿತ್ತು. ಮತ್ತು ನಿಮ್ಮ ತತ್ವಗಳಿಗನುಗುಣವಾಗಿ ಸರಕಾರ ಕೆಲಸ ಮಾಡಿದರೆ ಜನತೆಗೂ ಅನುಕೂಲವಾಗುತ್ತದೆ ಎಂದು ಅವರು ತಿಳಿಯಬಹುದಾಗಿತ್ತು.

ಇನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿರುವುದು ಸಾಲದು. ಇನ್ನೂ ಹೆಚ್ಚು ಖರ್ಚು ಮಾಡಬೇಕಾಗಿತ್ತು. ನಮಗೆ ಬೇಕಾಗಿರುವುದು It must be more of a qualitative nature rather than quantitative nature ಎಂದು ಇಲ್ಲಿ ಒತ್ತಾಯವಾಗಿ ಹೇಳುತ್ತೇನೆ.

ಕೊನೆಯದಾಗಿ ನಾನು ಕೆಲವು ಸಲಹೆಗಳನ್ನು ಸರಕಾರದ ಮುಂದೆ ಇಡುತ್ತೇನೆ. ಮೊದಲನೆಯದು, ಹೊಸ ತೆರಿಗೆಗಳನ್ನು ಹಾಕುವುದನ್ನು ಬಿಟ್ಟು ಸೇಲ್ಸ್ ಟ್ಯಾಕ್ಸನ್ನು ಸರಿಯಾದ ರೀತಿಯಲ್ಲಿ ವಸೂಲು ಮಾಡಲು ತಕ್ಕ ಕ್ರಮ ತೆಗೆದುಕೊಂಡರೆ ಸರಕಾರಕ್ಕೆ ಇದರಿಂದ ಇನ್ನೂ ಐದು ಕೋಟಿ ರೂಪಾಯಿಗಳ ವರಮಾನ ಬರುತ್ತದೆ. ಇದರಿಂದ ರಾಜ್ಯದ ವರಮಾನವನ್ನು ಹೆಚ್ಚು ಮಾಡಲು ಸಾಧ್ಯವಾಗುತ್ತದೆ.

ಎರಡನೆಯದು ಕಳ್ಳಭಟ್ಟಿಯನ್ನು ತಪ್ಪಿಸಿ, ಲೈಸನ್ಸ್ ಷಾಪುಗಳಲ್ಲೇ ಹೆಂಡ ಸಾರಾಯಿಗಳನ್ನು ಮಾರಲು ಅವಕಾಶ ಕೊಟ್ಟರೆ ಇದರಿಂದ ಸರಕಾರಕ್ಕೆ ಇನ್ನೂ ಒಂದು ಕೋಟಿ ರೂಪಾಯಿಗಳಷ್ಟು ಹೆಚ್ಚು ವರಮಾನ ಪಡೆಯಲು ಸಾಧ್ಯವಾಗುತ್ತದೆ.

ಮೂರನೆಯದು ಎಜ್ಯುಕೇಷನ್ ಸೆಸ್ಸು ಹಾಗೂ ಹೆಲ್ತ್ ಸೆಸ್ ಎಂದು ಹಾಕುವುದಕ್ಕೆ ಬದಲಾಗಿ ಇದನ್ನು ಕೊಡಲು ಶಕ್ತಿಯುಳ್ಳವರಿಂದ ವಸೂಲು ಮಾಡಲು ತಕ್ಕ ಕ್ರಮ ತೆಗೆದುಕೊಂಡರೆ ಸರಕಾರಕ್ಕೆ ಇನ್ನೂ ಒಂದು ಕೋಟಿ ರೂಪಾಯಿ ಆದಾಯ ಹೆಚ್ಚಿಸಬಹುದು. ಇನ್ನು ಬೇರೆ ಬೇರೆ ಇಲಾಖೆಗಳಲ್ಲಿ ಸೋರಿಹೋಗುತ್ತಿರುವ ಹಣವನ್ನು ಉಳಿತಾಯ ಮಾಡುವ ಕಡೆಗೆ ತಕ್ಕ ಕ್ರಮ ತೆಗೆದುಕೊಂಡರೆ ಇದರಿಂದ ಸುಮಾರು ಮೂರು ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣ ಸರಕಾರಕ್ಕೆ ಸಿಗುತ್ತದೆ. ಈ ರೀತಿ ಸರಕಾರ ತನ್ನ ಆದಾಯವನ್ನು ಇನ್ನೂ ಹತ್ತು ಕೋಟಿಯವರೆಗೆ ಹೆಚ್ಚು ಮಾಡಿಕೊಳ್ಳಲು ಅವಕಾಶವಿದೆ ಮತ್ತು ಇದರಿಂದ ರಾಜ್ಯದ ವರಮಾನವನ್ನು ಇನ್ನೂ ಹೆಚ್ಚಿಸಲು ಸಾಧ್ಯವಾಗುತ್ತದೆ ಎಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಇಷ್ಟೇ ಅಲ್ಲದೆ ನಮ್ಮ ಸರಕಾರ ಸಿಬ್ಬಂದಿಗಾಗಿ ಬಹಳವಾಗಿ ಹಣವನ್ನು ಖರ್ಚು ಮಾಡುತ್ತಿದೆ ಮತ್ತು ಸರಕಾರದ ಸಿಬ್ಬಂದಿಯ ಖರ್ಚು ದಿನೇ ದಿನೇ ಹೆಚ್ಚಾಗುತ್ತಾ ಬರುತ್ತಿದೆ ಮತ್ತು ವಿಪರೀತವಾಗಿ ಇದು ಏರುತ್ತಿದೆ. ಬರೀ ಸಂಬಳಸಾರಿಗೆಗಾಗಿಯೇ ಹೆಚ್ಚು ಹಣ ಖರ್ಚು ಆಗುತ್ತಿದೆ. ಇದರಲ್ಲಿ ಸರಿಯಾಗಿ

ಕೆಲಸ ಮಾಡುವವರು ಕತ್ತೆಯ ಹಾಗೆ ದುಡಿಯುತ್ತಲೇ ಇದ್ದಾರೆ, ಆದರೆ ಕೆಲಸ ಮಾಡದೇ ಇರುವ ಕೆಲವರಿಗೆ ತಮಗೆ ಯಾವಾಗ ಹೆಚ್ಚು ಸಂಬಳ ಬರುತ್ತೆ ಮತ್ತು ಇನ್‌ಕ್ರಿಮೆಂಟು ಯಾವಾಗ ಬರುತ್ತೆ ಎಂದು ನೋಡುತ್ತಾರೆಯೇ ವಿನಾ ದಕ್ಷತೆಯ ಕಡೆಗೆ ಗಮನವಿಲ್ಲ. ಇದರಿಂದಾಗಿ ಎಸ್ಟಾಬ್ಲಿಷ್‌ಮೆಂಟು ಚಾರ್ಜುಗಳು ಹೆಚ್ಚಾಗುತ್ತಿವೆ. ಸರಕಾರ ಹೆಚ್ಚು ದಕ್ಷತೆಯಿಂದ ಕೆಲಸವಾಗುವುದರ ಕಡೆಗೆ ಲಕ್ಷ್ಯ ಕೊಡಬೇಕು. ಕೇಂದ್ರ ಸರಕಾರದವರಿಂದ ಹೆಚ್ಚು ಬಾಂಧವ್ಯ ಈಗ ಸಿಗುತ್ತಿರುವುದರಿಂದ ಅವರಿಂದ ಹೆಚ್ಚು ಗ್ರಾಂಟುಗಳನ್ನು ಪಡೆದು ಹೆಚ್ಚು ಹಣ ತರುವುದರ ಕಡೆಗೆ ಪ್ರಯತ್ನ ಮಾಡಬೇಕು. ಸರಕಾರ ಇನ್ನೂ ಅನೇಕ ಬಾಬುಗಳಲ್ಲಿ ಉಳಿತಾಯ ಮಾಡಲು ಅವಕಾಶವಿದೆ. ಸರಕಾರ ಎಕ್ಸ್‌ಪೆರಿಮೆಂಟು ಮಾಡಬೇಕೆಂದು ಹಣ ವೆಚ್ಚ ಮಾಡುತ್ತಿದೆ. ಪ್ರತಿಯೊಂದು ಬಾಬಿನಲ್ಲೂ ಎಕ್ಸ್‌ಪೆರಿಮೆಂಟು ಎಂದು ಮಾಡಲು ಹೋಗಿ ಹಣ ಖರ್ಚಾಗುತ್ತಿದೆ. ವಿದ್ಯಾ ಇಲಾಖೆಯಲ್ಲಿ ಎಕ್ಸ್‌ಪೆರಿಮೆಂಟು ಎಂದು ಮಾಡಿ ಸಾವಿರಾರು ರೂಪಾಯಿಗಳಷ್ಟು ಹಣ ವೆಚ್ಚ ಮಾಡುತ್ತಿದೆ. ಇಂತಹ ಎಕ್ಸ್‌ಪೆರಿಮೆಂಟುಗಳನ್ನು ಮಾಡುವುದನ್ನು ನಿಲ್ಲಿಸಿದರೆ ಸರಕಾರಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಹಣ ಉಳಿತಾಯವಾಗುತ್ತದೆ, ಇದರಿಂದ ಉಳಿತಾಯವಾಗುವ ಹಣವನ್ನು ಇನ್ನೂ ಹೆಚ್ಚು ಉಪಯುಕ್ತವಾದ ಕೆಲಸಗಳಿಗಾಗಿ ಉಪಯೋಗ ಮಾಡಬಹುದು.

ಕೊನೆಯದಾಗಿ ಬೆಂಗಳೂರು ನಗರದ ಅತಿ ಮುಖ್ಯವಾದ ಸಮಸ್ಯೆ ಎಂದರೆ ನೀರಿನ ಸಮಸ್ಯೆ, ಇದಕ್ಕಾಗಿ ವಾಟರ್ ಸಪ್ಲೈ ಹಾಗೂ ಸ್ಯುಯರೇಂಜ್ ಬೋರ್ಡ್ ಎಂದು ಮಾಡಿದ್ದಾರೆ. ಇದರ ಕಾರ್ಯಕ್ರಮಗಳನ್ನು ಬೇಗ ಪೂರೈಸಲು ತಕ್ಕ ಕ್ರಮ ತೆಗೆದುಕೊಳ್ಳಬೇಕು ಮತ್ತು ಜನರಿಗೆ ಸಾಕಷ್ಟು ನೀರನ್ನು ಬೇಗ ಒದಗಿಸಿಕೊಡುವುದರ ಕಡೆಗೆ ಸಹಾಯಮಾಡಬೇಕು.

ನಾನು ಇಷ್ಟು ಸೂಕ್ಷ್ಮವಾಗಿ ಸಲಹೆಗಳನ್ನು ಕೊಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

12 NOON

ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಆರ್ಥಿಕ ಸಚಿವರು ಈ ಸಭೆಯ ಮುಂದೆ ಏನು ಒಂದು ಆಯವ್ಯಯ ಪಟ್ಟಿಯನ್ನು ಮಂಡಿಸಿದ್ದಾರೆ, ಅದು ಬಹಳ ಜಾಣ್ಮೆಯಿಂದ ಮತ್ತು ಚತುರತೆಯಿಂದ ಕೂಡಿದ್ದಾಗಿದೆ. ನಾನು ಎಷ್ಟೋ ಬಡ್ಜೆಟ್‌ಗಳನ್ನು ಅವಲೋಕನ ಮಾಡಿದ್ದೇನೆ, ಆದರೆ ಈ ಸಾರಿಯಿರುವ ಬಡ್ಜೆಟ್ ಬಹಳ ವಿಶೇಷವಾದ ರೀತಿಯಲ್ಲಿದೆ. ಅದಕ್ಕಾಗಿ ಮಾನ್ಯ ಆರ್ಥಿಕ ಸಚಿವರು ಮತ್ತು ಆರ್ಥಿಕ ಶಾಖೆಯವರು ಅಭಿನಂದನಾರ್ಹರು. ಬೃಹದಾಕಾರವಾಗಿದ್ದ 'ಓವರ್ ಡ್ರಾಫ್ಟ್' ಸಮಸ್ಯೆಯನ್ನು ಸಮತೋಲನ ಮಾಡುವುದಕ್ಕೆ ಒಂದು ಕಾರ್ಯಕ್ರಮ ಕೈಗೊಂಡಿದ್ದಾರೆ. ಕೇಂದ್ರಸರ್ಕಾರದಿಂದ ನಮ್ಮ ಯೋಜನೆಗಳಿಗೆ ಹೆಚ್ಚು ಹಣವನ್ನು ದೊರಕಿಸಿಕೊಳ್ಳುವ ಭರವಸೆಯನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯದ ಒಂದು ಆರ್ಥಿಕ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಮತ್ತು ಭದ್ರತೆಯಿಂದ ನಡೆಸಿಕೊಂಡು ಹೋಗುವ ಭರವಸೆಯನ್ನು ಕೊಟ್ಟಿದ್ದಾರೆ. ನಾನಾ ವಿಷಯಗಳ ಬಗ್ಗೆ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಆಹಾರ ಉತ್ಪನ್ನಗಳನ್ನು ಹೆಚ್ಚು ಮಾಡುವ ಬಗ್ಗೆ, ಜನರ ವರಮಾನ ಹೆಚ್ಚುವ ಬಗ್ಗೆ, ಸಮಾಜವಾದವನ್ನು ಜಾರಿಗೆ ತರುವ ಬಗ್ಗೆ, ಸುಖೀ ರಾಜ್ಯವನ್ನು ಸ್ಥಾಪನೆ ಮಾಡುವ ಬಗ್ಗೆ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಆದರೂ ಇದು ಸಾಲದು. ಗರೀಬಿ ಹಟಾವೋ ಎಂದು ಏನು ಹೇಳುತ್ತೇವೆ, ಅದರಂತೆ ದೇಶದ ಎಲ್ಲ ಪ್ರಜೆಗಳಿಗೂ ವಾಸಕ್ಕೆ ಮನೆ, ಮೈತುಂಬಾ ಬಟ್ಟೆ ಮತ್ತು ಊಟ ದೊರೆಯುವಂತೆ ಸರ್ಕಾರ ಪ್ರಯತ್ನ ಮಾಡಬೇಕು. ಇದೇ ಮಹಾತ್ಮ ಗಾಂಧೀಜಿಯವರ ಕನಸಾಗಿತ್ತು. ಅವರ ಕನಸು ನನಸಾಗುವಂತೆ ಮಾಡಲು ದೇಶದ ಎಲ್ಲ ಜನರಿಗೂ ಕನಿಷ್ಠ ಸವಲತ್ತುಗಳು ದೊರೆಯುವಂತೆ ಸರ್ಕಾರ ಪ್ರಯತ್ನ ಮಾಡಬೇಕು. ಎಲ್ಲ ಜನರಿಗೂ ಕನಿಷ್ಠ ಸವಲತ್ತುಗಳನ್ನು ದೊರಕಿಸಿಕೊಡುವಂತೆ ಸರ್ಕಾರ ಆಡಳಿತದಲ್ಲಿ ಇದ್ದರೆ, ಅಂತಹ ಸರ್ಕಾರ ನಿಜಕ್ಕೂ ಅಭಿನಂದನಾರ್ಹ. ನಮಗೆ ಸ್ವಾತಂತ್ರ್ಯ ಬಂದು 25 ವರ್ಷಗಳಾಯಿತು. ಕಳೆದ 25 ವರ್ಷಗಳಿಂದ ಅಧಿಕಾರಕ್ಕೆ ಬಂದಂಥ ಸರ್ಕಾರಗಳು ಎಲ್ಲ ಜನರನ್ನು ಸುಖವಾಗಿ ಇಡುವುದಕ್ಕೆ ಪ್ರಯತ್ನ ಮಾಡಿದವು. ಆದರೆ ಅದು ಆಗುತ್ತಿಲ್ಲ. ಇದಕ್ಕೆ ಆಡಳಿತ ಯಂತ್ರದ ತಪ್ಪೇ, ಅಥವಾ ಸರ್ಕಾರೀ ನೌಕರರ ತಪ್ಪೇ ಎಂಬುದನ್ನು ಕಂಡುಹಿಡಿಯಬೇಕಾಗಿದೆ. ಎಲ್ಲಿ ದೋಷ ಇದೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಎಲ್ಲಿಯವರೆಗೆ ಈ ದೋಷವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುವುದಿಲ್ಲವೋ ಅಲ್ಲಿಯವರೆಗೆ ಯಾವ ಸರ್ಕಾರ ಆಡಳಿತಕ್ಕೆ ಬಂದರೂ ಕೂಡ, ಎಲ್ಲ ಜನರಿಗೂ ಸೌಖ್ಯ ಒದಗಿಸಿಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

(ಶ್ರೀ ಜಿ. ಪುಟ್ಟಸ್ವಾಮಿ)

ಇಂದು ಲಂಚವೆಂಬುದು ತಾಂಡವಾಡುತ್ತಿದೆ. ಇದಕ್ಕೆ ಕಾರಣ ಏನೆಂಬುದು ಕಂಡುಹಿಡಿಯಬೇಕು. ಜೀವನ ಮಟ್ಟ ಹೆಚ್ಚಿರುವುದರಿಂದ ಜೀವನ ನಡೆಸುವುದು ಕಷ್ಟವಾಗಿದೆ. ಈ ರೀತಿ ಜೀವನ ಮಟ್ಟ ಹೆಚ್ಚುವುದಕ್ಕೆ ಯಾರು ಕಾರಣಕರ್ತರು ಎಂಬುದನ್ನು ಕಂಡುಹಿಡಿಯಬೇಕು. ಇದನ್ನು ಕಂಡುಹಿಡಿಯುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಕೇವಲ ಸರ್ಕಾರೀ ನೌಕರರ ಸಂಬಳ ಜಾಸ್ತಿ ಮಾಡುವುದರಿಂದ ರಾಜ್ಯದ ಎಲ್ಲ ಜನರ ಜೀವನ ಮಟ್ಟವನ್ನು ಸುಧಾರಿಸಿದಂತಾಗುವುದಿಲ್ಲವೆಂದು ಹೇಳುತ್ತೇನೆ. ಮಾನ್ಯ ಆರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ಸರ್ಕಾರೀ ನೌಕರರ ಮತ್ತು ಪೆನ್‌ಷನ್‌ದಾರರ ತುಟ್ಟಿಭತ್ಯವನ್ನು ಜಾಸ್ತಿ ಮಾಡಿರುವುದಾಗಿ ತಿಳಿಸಿದ್ದಾರೆ. ಅದೇ ರೀತಿಯಾಗಿ ದುರ್ಬಲರಾದಂಥವರಿಗೂ ಕೂಡ ರಕ್ಷಣೆ ಕೊಡುವುದು ಸರ್ಕಾರದ ಕರ್ತವ್ಯವಾಗಿದೆ. ಇಂದು ಹರಿಜನ ಮತ್ತು ಗಿರಿಜನರ ಮೇಲೆ ಏನು ಶೋಷಣೆ ನಡೆಯುತ್ತಿದೆ ಅದನ್ನು ನಿಲ್ಲಿಸುವುದು ಸರ್ಕಾರದ ಕರ್ತವ್ಯವಾಗಿದೆ. ಹರಿಜನ ಮತ್ತು ಗಿರಿಜನರ ಮೇಲೆ ಶೋಷಣೆ ಎಂಬುದು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುವ ಬದಲು ಜಾಸ್ತಿಯಾಗುತ್ತಿದೆ. ರಾಜ್ಯಾಂಗದಲ್ಲಿ ಹೇಳಿರುವ ಪ್ರಕಾರ ಹರಿಜನ ಮತ್ತು ಗಿರಿಜನರಿಗೆ ಸೂಕ್ತ ಪ್ರಾತಿನಿಧ್ಯ ಕೊಡಿಸಿಕೊಡುವುದಕ್ಕೆ ಮತ್ತು ಅವರಿಗೆ ಆಗುತ್ತಿರುವ ಶೋಷಣೆಯನ್ನು ತಪ್ಪಿಸಲು ಸರ್ಕಾರದವರು ಪ್ರತ್ಯೇಕವಾದ ಒಂದು ಇಲಾಖೆಯನ್ನೇ ರಚನೆ ಮಾಡಬೇಕು. ಆ ಇಲಾಖೆಯವರು ಏನೇನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂಬ ಬಗ್ಗೆ ಸರ್ಕಾರಕ್ಕೆ ಪ್ರತಿದಿನವೂ ವರದಿ ಬರಬೇಕು. ಅಂತಹ ಒಂದು ವ್ಯವಸ್ಥೆಯಾಗಬೇಕು. ಏಕೆಂದರೆ ನಮ್ಮ ಜನರ ಸುಧಾರಣೆ ಎಷ್ಟು ಆಗಬೇಕಾಗಿತ್ತೋ ಅಷ್ಟು ಆಗಲಿಲ್ಲ. ಈಗ ದಕ್ಷರಾದಂಥ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದಿದ್ದಾರೆ. ಈಗಿನ ಮುಖ್ಯ ಮಂತ್ರಿಗಳು ಮೊದಲನಿಂದಲೂ ಬಡವರ ಬಡತನವನ್ನು ಹೋಗಲಾಡಿಸಲು ಹೋರಾಟ ಮಾಡಿದವರಾಗಿದ್ದಾರೆ. ಅವರ ಕೆಲಸವನ್ನು ನಾನು ಬಹಳ ಆಸಕ್ತಿಯಿಂದ ನೋಡುತ್ತಿದ್ದೇನೆ. ಅವರ ಒಂದು ನಾಯಕತ್ವದಲ್ಲಿಯಾದರೂ, ಈಗಿನ ಆಡಳಿತ ಯಂತ್ರ ಏನಿದೆ ಅದು ಬದಲಾವಣೆಯಾಗಬೇಕು. ಉದಾಹರಣೆಗಾಗಿ ಒಂದು ಕೈಗಾರಿಕೆಯನ್ನೇ ತೆಗೆದುಕೊಂಡರೆ, ಯಾರಾದರೂ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಲು ಮುಂದೆ ಬಂದರೆ, ಅವರಿಗೆ ಜಾಗ್ರತೆ ಅನುಮತಿ ಕೊಡುವುದಿಲ್ಲ. ಇದಕ್ಕೆ ಕಾರಣ ಆಡಳಿತದಲ್ಲಿ ತೊಂದರೆ ಇರುವುದು. ಈಗಿನ ಕಾಲಕ್ಕೆ ತಕ್ಕಂತೆ ಆಡಳಿತ ಯಂತ್ರವನ್ನು ಬದಲಾವಣೆ ಮಾಡಬೇಕು. ಒಬಿರಾಯನ ಕಾಲದ ಪದ್ಧತಿಯೇ ಇನ್ನು ಮುಂದೆಯೂ ಮುಂದುವರಿಯುವುದು ಸರಿಯಲ್ಲ. ಸಮಾಜವಾದದ ತತ್ವಕ್ಕೆ ಅನುಸಾರವಾಗಿ ಎಲ್ಲ ಕೆಲಸಗಳನ್ನು ಕೂಡ ಅತಿ ಜಾಗ್ರತೆಯಾಗಿ ಮಾಡುವಂತಾಗಲು ಈಗಿನ ಆಡಳಿತ ಯಂತ್ರವನ್ನು ಕೂಡಲೇ ಬದಲಾವಣೆ ಮಾಡಬೇಕು. ಕಾರ್ಯವಿಳಂಬವಾಗುವುದನ್ನು ಮೊದಲು ತಪ್ಪಿಸಬೇಕು.

ಶ್ರೀ ಎಸ್. ವೈ. ಪಾಟೀಲ್ (ಸಿಂದ್ಗಿ).—ನನ್ನ ಒಂದು ಕ್ರಿಯಲೋಪವಿದೆ, ಏನೆಂದರೆ ಬಡ್ಜೆಟ್ ಮೇಲೆ ಚರ್ಚೆ ನಡೆಯುವ ಕಾಲಕ್ಕೆ ಎಲ್ಲ ಇಲಾಖೆಗಳ ವಿಚಾರಗಳು ಬರುವುದರಿಂದ ಸಂಬಂಧಪಟ್ಟ ಎಲ್ಲ ಮಂತ್ರಿಗಳು ಸಭೆಯಲ್ಲಿ ಹಾಜರಿರಬೇಕು. ಮುಂಬೈ ಅಸೆಂಬ್ಲಿಯಲ್ಲಿಯೂ ಕೂಡ ಬಡ್ಜೆಟ್ ಚರ್ಚೆಯಾಗುವ ಕಾಲಕ್ಕೆ ಎಲ್ಲ ಮಂತ್ರಿಗಳೂ ಹಾಜರಿರುತ್ತಾರೆ. ಅದೇ ರೀತಿ ಇಲ್ಲಿಯೂ ಮಂತ್ರಿಗಳು ಹಾಜರಿದ್ದು ವಿಷಯದ ಬಗ್ಗೆ ಲಕ್ಷ್ಯಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಅದು ಕ್ರಿಯಾಲೋಪವಾಗುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಅಧ್ಯಕ್ಷರು ಬಹಳ ದಕ್ಷತೆಯಿಂದ ಸಭೆಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆ, ಅದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

MADAM SPEAKER.—Thanks for the Compliments. The hon. member may speak on the Budget.

ಶ್ರೀ ಜಿ. ಪುಟ್ಟಸ್ವಾಮಿ.—ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮಕ್ಕಾಗಿ ಬಡ್ಜೆಟ್‌ನಲ್ಲಿ 1.57 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಈ ಹಣದಲ್ಲಿ ಬಹುಭಾಗದ ಹಣ ಸರ್ಕಾರೀ ನೌಕರರ ಸಂಬಳಕ್ಕಾಗಿಯೇ ಖರ್ಚಾಗುತ್ತದೆ. ಈ ಹಣದಲ್ಲಿ ನೌಕರರ ಸಂಬಳಕ್ಕೆ ಎಷ್ಟು ಖರ್ಚಾಗುತ್ತದೆ, ಈ ಹಿಂದುಳಿದ ಜನರ ಕಲ್ಯಾಣಕ್ಕಾಗಿ ಎಷ್ಟು ಖರ್ಚಾಗುತ್ತದೆ ಎಂಬುದನ್ನು ವಿಮರ್ಶೆ ಮಾಡಬೇಕಾಗಿದೆ. ಹರಿಜನ ಮತ್ತು ಗಿರಿಜನರ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಈ ಸಭೆಯಲ್ಲಿ ಬಹಳ ಕಳಕಳಿಯಿಂದ ಮಾತನಾಡುತ್ತಾರೆ. ಅದೇ ರೀತಿಯಲ್ಲಿ ಮಂತ್ರಿಗಳು ಸಹ ಬಹಳ ಆಸಕ್ತಿಯಿಂದ ಇರುವಂತೆ ಕಾಣುತ್ತಿದೆ. ಅನೇಕ ಜನ ಮಂತ್ರಿಗಳು ಈ ಹಿಂದುಳಿದವರ

ಕಲ್ಯಾಣಕ್ಕಾಗಿ ದುಡಿದಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಸರ್ಕಾರದವರು ಎಷ್ಟೇ ಪ್ರಯತ್ನ ಪಡುತ್ತಿದ್ದರೂ ಕೂಡ ಈ ಹರಿಜನ ಮತ್ತು ಗಿರಿಜನರ ಕಲ್ಯಾಣವಾಗುತ್ತಿಲ್ಲ. ಇದಕ್ಕೆ ಕಾರಣ ಈ ಜನರಿಗೆ ಎಷ್ಟು ಪರ್ಸೆಂಟ್ ಭೂಮಿ ವ್ಯವಸಾಯಕ್ಕೆ ಸಿಕ್ಕಬೇಕಾಗಿತ್ತೋ ಅಷ್ಟು ಸಿಕ್ಕಿಲ್ಲ. ಈ ಜನರಿಗೆ 18 ಪರ್‌ಸೆಂಟ್ ನೌಕರಿಯನ್ನು ಮೀಸಲಾಗಿಡಬೇಕೆಂದು ನಿಯಮವಿದ್ದರೂ ಕೂಡ ಅದು ಸರಿಯಾಗಿ ಕಾರ್ಯಗತವಾಗುತ್ತಿಲ್ಲ. ಆಯಾ ಇಲಾಖೆಯ ಮುಖ್ಯಾಧಿಕಾರಿಗಳು ಮತ್ತು ಯೂನಿಟ್ ಆಫೀಸರ್‌ಗಳು ಇದನ್ನು ಕಟ್ಟುನಿಟ್ಟಾಗಿ ಪರಿಪಾಲಿಸುತ್ತಿದ್ದಾರೆಯೇ ಎಂಬುದನ್ನು ಸರ್ಕಾರದವರು ತನಿಖೆ ಮಾಡಿ ನೋಡಬೇಕು. 18 ಪರ್‌ಸೆಂಟ್ ಪ್ರಾತಿನಿಧ್ಯವನ್ನು ಇವರಿಗೆ ಸರಿಯಾಗಿ ಕೊಡದಿದ್ದರೆ ಇವರು ಬೇರೆ ಜನಾಂಗದವರ ಮಟ್ಟಕ್ಕೆ ಬರುವುದು ಕಷ್ಟವಾಗುತ್ತದೆ. ಇವರಿಗಾಗಿ ಮೀಸಲಾಗಿಟ್ಟ ಸ್ಥಾನಗಳಿಗೆ ಅಭ್ಯರ್ಥಿಗಳು ಸಿಗದಿದ್ದರೆ ಆ ಸ್ಥಾನಗಳಿಗೆ ಬೇರೆ ಜನಾಂಗದವರನ್ನು ನೇಮಕ ಮಾಡದೆ, ಆ ಸ್ಥಾನಗಳನ್ನು ಹಾಗೆಯೇ ಖಾಲಿ ಇಟ್ಟು ಅಭ್ಯರ್ಥಿಗಳು ಸಿಕ್ಕಿದಾಗ ಆ ಸ್ಥಾನಗಳನ್ನು ಭರ್ತಿ ಮಾಡಬೇಕು. ಇಲ್ಲದಿದ್ದರೆ ಈ ಜನಾಂಗದವರು ಮುಂದೆ ಬರುವುದು ಕಷ್ಟವಾಗುತ್ತದೆ. ಇಂದು ಹರಿಜನರಿಗಾಗಿ ಮೀಸಲು ಸ್ಥಾನಗಳನ್ನು ಇಡುತ್ತೇವೆಂದು ಹೇಳುತ್ತಾರೆ. ಆದರೆ ಅದನ್ನು ಕಾರ್ಯಗತ ಮಾಡುತ್ತಿಲ್ಲ. ಎಲ್ಲ ಇಲಾಖೆಗಳಲ್ಲಿಯೂ ಕಾರ್ಯಗತವಾಗುವಂತೆ ಸರ್ಕಾರದವರು ತೀವ್ರವಾದ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ. ಈ ಬಗ್ಗೆ ಸರ್ಕಾರದವರು ಒಂದು ದೊಡ್ಡ ನೀತಿಯನ್ನು ಹಾಕಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಿವೃತ್ತಿಯಾಗುವ ವಯಸ್ಸಾಗಿರುವವರಿಗೆ ಎಕ್ಸ್‌ಟೆನ್‌ಷನ್ ಕೊಡಬಾರದು. ಕೆಲವರಿಗೆ ಎಕ್ಸ್‌ಟೆನ್‌ಷನ್ ಕೊಡುವುದು, ಕೆಲವರಿಗೆ ಬಿಡುವುದು ಇದು ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಇದನ್ನು ದಯವಿಟ್ಟು ಮುಂದುವರಿಸಬೇಡಿ. ಸರ್ಕಾರದಲ್ಲಿ ಮಿತವ್ಯಯವನ್ನು ಮಾಡುವ ಬಗ್ಗೆ ಸರ್ಕಾರದವರು ಸಮಿತಿಯನ್ನೇನು ನೇಮಕ ಮಾಡಿದ್ದಾರೆ ಆ ಸಮಿತಿಯವರು ನೌಕರರ ನೇಮಕಾತಿ ಇತ್ಯಾದಿಗಳ ಬಗ್ಗೆ ಕೊಟ್ಟಿರತಕ್ಕ ವರದಿಯನ್ನು ನೋಡಿದರೆ ತಲೆತಗ್ಗಿಸುವಂಥಾದ್ದಿದೆ. ಇದನ್ನು ಸರ್ಕಾರದವರು ಗಮನಿಸಬೇಕು ಎಂದು ನಾನು ಹೇಳುತ್ತೇನೆ.

ನಮ್ಮ ದೇಶದಲ್ಲಿರತಕ್ಕ ವಿಶ್ವವಿದ್ಯಾನಿಲಯಗಳನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು. ಅವುಗಳ ಸುಧಾರಣೆಯನ್ನು ಸಾಕಷ್ಟು ಮಾಡಬೇಕು. ಅಧಿಕಾರವರ್ಗದವರ ಬಗ್ಗೆ ಹೇಳಬೇಕಾದರೆ ಕೆಲವು ದಿವಸಗಳು ಪರದೇಶದ ಅಧಿಕಾರವರ್ಗದವರನ್ನು ಇಲ್ಲಿ ಕೆಲಸ ಮಾಡುವುದಕ್ಕೆ ಬಿಡಬೇಕೋ ಏನೋ ಎಂದು ನನಗೆ ಅನಿಸುತ್ತದೆ. ನಮ್ಮ ನೌಕರ ವರ್ಗದವರಿಗೆ ಏನು ಬೇಕಾದರೂ ಕೊಡೋಣ. ಅವರಿಗೆ ವಾಸದ ಮನೆ, ಇತರೆ ಸೌಕರ್ಯಗಳು, ವಿಶೇಷಭತ್ಯ ಇವೆಲ್ಲವನ್ನೂ ಕೊಟ್ಟರೂ ಚಿಂತೆಯಿಲ್ಲ. ಆದರೆ ಆಡಳಿತ ಯಂತ್ರದ ಸುಧಾರಣೆ ಆಗಬೇಕು ಎಂದು ನನ್ನ ಅಭಿಪ್ರಾಯ.

ನಮ್ಮ ಮಲೆನಾಡು ಬಹಳ ಹಿಂದುಳಿದಿದೆ. ಮಲೆನಾಡಿನಲ್ಲಿ ಅನೇಕ ಸಂಪತ್ತು ಇದೆ. ಒಂದು ಸಾರಿ ಮಾನ್ಯ ಮಂತ್ರಿಗಳು ಹೇಳಿದರು ನಮ್ಮ ದೇಶದಲ್ಲಿ ಒಂದು ತೊಟ್ಟು ನೀರೂ ಪೋಲಾಗದ ರೀತಿಯಲ್ಲಿ ಕೂಡಿಟ್ಟುಕೊಂಡು ಅದನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಬೇಕು, ಅದು ನಮ್ಮ ದೇಶದ ಆಸ್ತಿ ಎಂದು ಹೇಳಿದರು. ಈಗ ನಮ್ಮ ಮಲೆನಾಡಿನಲ್ಲಿ ಬೇಕಾದಷ್ಟು ನದಿಗಳು ಹುಟ್ಟಿ ಹರಿದು ಅವುಗಳು ಬೇರೆ ಜಿಲ್ಲೆಯವರಿಗೆ ಅವುಗಳ ಪ್ರಯೋಜನವನ್ನು ಕೊಡುತ್ತವೆ. ಮಲೆನಾಡಿನಲ್ಲಿ ಅರಣ್ಯ ಸಂಪತ್ತು ಇದೆ, ಖನಿಜಸಂಪತ್ತು ಇದೆ, ನೀರಿನ ಸಂಪತ್ತು ಇದೆ. ಇಂಥಾ ಸಂಪತ್ತು ಇರತಕ್ಕಂಥಾ ಪ್ರದೇಶದಲ್ಲಿ ಸಂಚಾರ ಸೌಕರ್ಯ ಬಹಳ ಕಡಿಮೆಯಾಗಿದೆ. ಖನಿಜ ಸಂಪತ್ತನ್ನು ಅಭಿವೃದ್ಧಿ ಮಾಡಿ ಅದನ್ನು ಉಪಯೋಗ ಮಾಡಿಕೊಳ್ಳಬೇಕಾದರೆ ಸಂಚಾರ ಸೌಕರ್ಯಬೇಕು, ವೈದ್ಯಕೀಯ ಸೌಕರ್ಯಬೇಕು ಮತ್ತು ವಿದ್ಯಾಭ್ಯಾಸ ಸೌಕರ್ಯಬೇಕು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ಜೂನಿಯರ್ ಕಾಲೇಜುಗಳನ್ನು ಸರ್ಕಾರದವರು ಸ್ಥಾಪನೆ ಮಾಡಬೇಕು. ನಮ್ಮ ಮೂಡಿಗೆರೆಗೆ ಜೂನಿಯರ್ ಕಾಲೇಜನ್ನು ಕೊಟ್ಟಿಲ್ಲ. ನಿಜವಾಗಿಯೂ ಇದು ಬಹಳ ಶೋಚನೀಯ. ನಮ್ಮ ಮೂಡಿಗೆರೆಗೆ ಒಂದು ಜೂನಿಯರ್ ಕಾಲೇಜನ್ನು ಕೊಡಬೇಕು ಹಾಗೆಯೇ ನಮ್ಮ ಮಲೆನಾಡಿನಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ಜೂನಿಯರ್ ಕಾಲೇಜನ್ನು ಕೊಡುವಂತಹ ಒಂದು ನೀತಿಯನ್ನು ಹಾಕಿಕೊಳ್ಳಬೇಕು ಎಂದು, ಮಾನ್ಯ ವಿದ್ಯಾ ಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮೈನರ್ ಇರಿಗೇಷನ್ನಿಗಾಗಿ ಸರ್ಕಾರದವರು ಬಹಳ ಹಣವನ್ನು ಪ್ರೊವೈಡ್ ಮಾಡುತ್ತಾರೆ. ಆದರೆ ಆ ಹಣವನ್ನು ಸರ್ಕಾರದವರು ಖರ್ಚು ಮಾಡುವುದಿಲ್ಲ. ಆ ಹಣವನ್ನು ಉಳಿಸುತ್ತಾರೆ. ಈ ಬಾಬಿಗೆ ಬಡ್ಜೆಟ್ಟಿನಲ್ಲಿ ಹಣವನ್ನು ತೋರಿಸಿ ಮತ್ತೆ ಅದನ್ನು ಉಳಿಸುವುದು ಒಳ್ಳೆಯದಲ್ಲ. ಮಲೆ

(ಶ್ರೀ ಜಿ. ಪುಟ್ಟಸ್ವಾಮಿ)

ನಾಡನ್ನು ಎಷ್ಟು ಅಭಿವೃದ್ಧಿ ಮಾಡುತ್ತಾರೆಯೋ ಅಷ್ಟೂ ದೇಶಕ್ಕೆ ಒಳ್ಳೆಯದು ಆದ್ದರಿಂದ ಮಲೆನಾಡಿನಲ್ಲಿರತಕ್ಕ ಸಂಪತ್ತನ್ನು ಉಪಯೋಗಿಸಿಕೊಳ್ಳಬೇಕಾದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಮಲೆನಾಡಿನ ಅಭಿವೃದ್ಧಿಗಾಗಿ ಹಣವನ್ನು ಒದಗಿಸಬೇಕು. ಹಿಂದೆ ಮಲೆನಾಡಿನ ಅಭಿವೃದ್ಧಿಗಾಗಿ ಒಂದು ಬೋರ್ಡ್ ಇತ್ತು ಅದನ್ನು ಮತ್ತೆ ಪುನರ್ರಚನೆ ಮಾಡಬೇಕು. ಮತ್ತು ಸಮಗ್ರವಾದ ಮಲೆನಾಡಿನ ಅಭಿವೃದ್ಧಿಗಾಗಿ ಸರ್ಕಾರದವರು ಹೆಚ್ಚಿನ ನಿಗಾಕೊಟ್ಟು ಅದನ್ನು ಸಾಧಿಸಿ ಕೀರ್ತಿಯನ್ನು ಗಳಿಸಬೇಕು ಎಂದು ನಾನು ಹೇಳುತ್ತೇನೆ.

ಮಲೆನಾಡಿನಲ್ಲಿ ವಿದ್ಯಾಭ್ಯಾಸದ ಸುಧಾರಣೆ ಕೂಡ ಆಗಬೇಕಾಗಿದೆ. ಮಕ್ಕಳಿಗೆ ಸರಿಯಾದಂತಹ ವಿದ್ಯಾಭ್ಯಾಸ ದೊರೆತು ಅವರ ವಿದ್ಯಾಮಟ್ಟ ಹೆಚ್ಚದ ಹೊರತು ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ವಿದ್ಯಾಭ್ಯಾಸದ ಮಟ್ಟವನ್ನು ಹೆಚ್ಚಿಸಬೇಕು. ಮಕ್ಕಳಿಗೆ ಸರಿಯಾದಂತಹ ವಿದ್ಯಾಭ್ಯಾಸವನ್ನು ಒದಗಿಸಿಕೊಟ್ಟು ಅವರಿಗೆ ಜೀವನ ಮಾರ್ಗವನ್ನು ಕಲ್ಪಿಸಿಕೊಡುವ ಒಂದು ಅವಕಾಶವನ್ನು ಒದಗಿಸಿಕೊಟ್ಟರೆ ಮಾತ್ರ ನಿರುದ್ಯೋಗ ನಿವಾರಣೆಯಾಗುತ್ತದೆ. ಇಲ್ಲದಿದ್ದರೆ ಸರ್ಕಾರಕ್ಕೆ ಬಹಳ ತೊಂದರೆಯಾಗುತ್ತದೆ. ವಿದ್ಯಾಭ್ಯಾಸ ಮಾಡಿದವರೆಲ್ಲರಿಗೂ ಸರ್ಕಾರದವರೇ ನೌಕರಿ ಕೊಡುವುದಕ್ಕಾಗುವುದಿಲ್ಲ. ಮುಂದೆ ಇದೇ ಒಂದು ದೊಡ್ಡ ಸಮಸ್ಯೆಯಾಗಿ ಸರ್ಕಾರಕ್ಕೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ವಿದ್ಯಾಭ್ಯಾಸ ಮುಗಿದಮೇಲೆ ಅವನು ತನ್ನ ಸ್ವಂತಕಾಲಮೇಲೆ ನಿಂತುಕೊಂಡು ಜೀವನವನ್ನು ನಡೆಸತಕ್ಕಂಥಾ ವೃತ್ತಿ ಶಿಕ್ಷಣವನ್ನು ಮಕ್ಕಳಿಗೆ ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಇದರ ಜೊತೆಗೆ ನ್ಯಾಯ, ನೀತಿ, ಧರ್ಮಗಳನ್ನು ಅನುಸರಿಸುವಂತಹ ಒಂದು ವಿದ್ಯಾಭ್ಯಾಸ ಮಕ್ಕಳಿಗೆ ದೊರೆಯುವಂತಾಗಬೇಕು. ಆ ರೀತಿ ಮಾಡಿದರೆ ಪೋಲೀಸು ಇಲಾಖೆಗೆ ಹೆಚ್ಚು ಖರ್ಚು ಮಾಡಬೇಕಾಗಿಲ್ಲ, ನ್ಯಾಯ ಇಲಾಖೆಗೆ ಹೆಚ್ಚು ಖರ್ಚು ಮಾಡಬೇಕಾಗಿಲ್ಲ. ಈ ದೃಷ್ಟಿಯಿಂದ ದೇಶದಲ್ಲಿ ಪ್ರತಿಯೊಬ್ಬ ಪ್ರಜೆಗೂ ಸರಿಯಾದಂತಹ ವಿದ್ಯಾಭ್ಯಾಸ ದೊರೆಯುವಂತಹ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು ಎಂದು ನಾನು ಹೇಳುತ್ತೇನೆ.

ನಮ್ಮ ಸರ್ಕಾರದವರು ಸಮಾಜವಾದವನ್ನು ಜಾರಿಗೆ ತರತಕ್ಕಂಥಾ ಸಂದರ್ಭದಲ್ಲಿ ಮೊಬೈಲ್ ಕೋರ್ಟುಗಳನ್ನು ರಚನೆ ಮಾಡಬೇಕು. ಮೊಬೈಲ್ ಡಿಸ್‌ಪೆನ್ಸರಿಗಳನ್ನು ಸ್ಥಾಪನೆ ಮಾಡಬೇಕು. ಗರೀಬಿ ಹಠಾವೋ ಸಮಾಜವಾದ ಎಂದರೆ ಪ್ರತಿಯೊಬ್ಬ ರೈತನಿಗೂ ಅವರವರ ಮನೆಯ ಬಾಗಿಲಿಗೆ ವ್ಯವಸಾಯಕ್ಕೆ ಬೇಕಾದ ಬೀಜ, ಗೊಬ್ಬರ ಮುಂತಾದ ವ್ಯವಸಾಯ ಸಲಕರಣೆಗಳು ಸಕಾಲದಲ್ಲಿ ತಲುಪುವಂತೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ಕಳಕಳಿಯಿಂದ ಕೇಳಿಕೊಂಡು ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷಿಣಿಯವರೇ, ನಮ್ಮ ಮಾನ್ಯ ಅರ್ಥ ಸಚಿವರಾದ ಶ್ರೀಮಾನ್ ಘೋರ್ಪಡೆ ಅವರು ಹಿಂದೆ ಒಂದು ಸಂದರ್ಭದಲ್ಲಿ ನಾನು ಸಮಾಜವಾದಿ ಆಂಧೋಳನದಲ್ಲಿ ಸೇರಿ ಬಂದವನು ಎಂದು ಹೇಳಿದ್ದರು. ಅಂಥವರು ಸಮಾಜವಾದಿ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುತ್ತೇವೆ ಎನ್ನತಕ್ಕಂಥಾ ಘೋಷಣೆಯನ್ನು ಚುನಾವಣೆಯಲ್ಲಿ ಮಾಡಿ ಜನಗಳಿಗೆ ಆಶ್ವಾಸನೆಯನ್ನು ಕೊಟ್ಟಮೇಲೆ ಈಗ ಅವರು ಅರ್ಥಮಂತ್ರಿಗಳಾಗಿ ಅಧಿಕಾರಕ್ಕೆ ಬಂದಮೇಲೆ ತಂದಿರತಕ್ಕ ಆಯವ್ಯಯ ಪತ್ರ ಅತ್ಯಂತ ಚರಿತ್ರಾರ್ಹವಾಗಿರುತ್ತದೆ ಎಂದು ನಾನು ಭಾವಿಸಿಕೊಂಡಿದ್ದೆ. ಆದರೆ ಅಂಥಾ ಚರಿತ್ರಾರ್ಹವಾದ ವಿಷಯಗಳಾಗಲೀ, ಬದಲಾವಣೆಗಳಾಗಲೀ ಈ ಆಯವ್ಯಯ ಪಟ್ಟಿಯಲ್ಲಿ ನಮಗೆ ಕಾಣಲಿಲ್ಲವಲ್ಲಾ ಎಂದು ನನಗೆ ಬಹಳ ವೇದನೆಯಾಗುತ್ತದೆ. ಹಿಂದೆ ಇದ್ದಂತಹ ರಾಜ್ಯ ಸರ್ಕಾರದಲ್ಲಿ ಶ್ರೀಮಾನ್ ಘೋರ್ಪಡೆಯವರೂ ಪಾಲುಗಾರರಾದಂತಹ ಒಬ್ಬರು ಸದಸ್ಯರಾಗಿದ್ದರು. ಆದರೆ ಅವರು ಮಂತ್ರಿಗಳಾಗಿರಲಿಲ್ಲ. ಸದಸ್ಯರಾಗಿದ್ದರು. ಆ ಸರ್ಕಾರದ ನೀತಿಗಳನ್ನು ಪ್ರಾಮಾಣಿಕವಾಗಿ ಪ್ರತಿಪಾದನೆ ಮಾಡಿದಂತಹವರು. ಕಳೆದು ಹೋದ ದಿನಗಳನ್ನು ಗಮನಿಸಿದರೆ ನಾವು ದೇಶದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿಲ್ಲ ಎನ್ನತಕ್ಕಂಥಾ ಪುರಾವೆಗಳು ಸಾಕಷ್ಟು ನಮ್ಮ ಮುಂದೆ ಇವೆ. ಇದರ ಹಿನ್ನೆಲೆಯಲ್ಲಿ ಈ ಸರ್ಕಾರ ಜವಾಬ್ದಾರಿಯನ್ನು ವಹಿಸಿಕೊಂಡಮೇಲೆ ಸಮಾಜವಾದವನ್ನು ಜಾರಿಗೆ ತರುವ ಒಂದು ಮಾರ್ಗದಲ್ಲಿ ಸಹಾಯಕವಾಗುವ ರೀತಿಯಲ್ಲಿ ಈ ಒಂದು ಆಯವ್ಯಯ ಪತ್ರವನ್ನು ಸರ್ಕಾರದವರು ತಯಾರು ಮಾಡಿ ನಮ್ಮ ಮುಂದೆ ಇಟ್ಟಿದ್ದಾರೆಯೇ ಎಂದು ನೋಡುವುದಾದರೆ ಇದು ಒಂದು ಅಸಮಾಧಾನದ ಮತ್ತು

ಅಸಮತೆಯು ಶವರೂರಾಗಿದೆ ಎಂದು ಹೇಳಬಹುದು. ಸಾಮಾಜಿಕವಾಗಿ, ಆರ್ಥಿಕವಾಗಿ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಪರಿಸ್ಥಿತಿಯನ್ನು ಬಗೆಹರಿಸಬೇಕಾದರೆ ಸ್ವಲ್ಪ ಆಮೂಲಾಗ್ರವಾಗಿ ಇದರ ಬದಲಾವಣೆಗೆ ಚಿಂತನೆ ಮಾಡಬೇಕಾದಂತಹ ಅಗತ್ಯ ಇದೆ. ಆದರೆ ತಮ್ಮ ಪಕ್ಷದಲ್ಲಿ ಇಂಥಾ ಒಂದು ಕಾರ್ಯಕ್ರಮದ ಬಗ್ಗೆ ಎಷ್ಟು ಜನಗಳಿಗೆ ಪ್ರಾಮಾಣಿಕವಾದ ನಿಷ್ಠೆ ಇದೆ ಎಂಬುದು ನನಗೆ ಸಂಶಯವನ್ನುಂಟುಮಾಡಿದೆ. ಅವರಿಗೆ ಮಾನಸಿಕವಾಗಿ ಒಂದು ಪಕ್ಷದ ಕಾರ್ಯಕ್ರಮದ ಬಗ್ಗೆ ಪೂರ್ಣವಾದ ವಿಶ್ವಾಸ ಇರಬೇಕು. ಅದನ್ನು ಇಟ್ಟುಕೊಂಡು ತಂದಿರತಕ್ಕಂಥಾ ಆಯವ್ಯಯ ಪತ್ರ ಇದಲ್ಲ ಎಂದು ನಾನು ಹೇಳುತ್ತೇನೆ. ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ವ್ಯತ್ಯಾಸ ವನ್ನು ಕಂಡುಹಿಡಿದು ಅದಕ್ಕೆ ಒಂದು ಪರಿಹಾರವನ್ನು ಸೂಚಿಸಿದ್ದೇವೆ ಎಂದು ಹೇಳಿದ್ದೀರಿ. ಆದರೆ ಆ ಬಗ್ಗೆ ನೀವು ತೋರಿಸಿರತಕ್ಕ ಮಾರ್ಗ ಏನಿದೆ ಅದು ಸ್ವಲ್ಪ ಅಪಾಯಕಾರಿಯಾದ ಮಾರ್ಗ ಎಂದು ನನಗೆ ಅನಿಸುತ್ತದೆ. ಅದಕ್ಕೆ ಕಾರಣವೇನೆಂದರೆ ಇವೊತ್ತು ನಗರಗಳ ಬೆಳವಣಿಗೆಯಲ್ಲಿ ಮತ್ತು ಗ್ರಾಮಗಳ ಬೆಳವಣಿಗೆಯಲ್ಲಿ ನಾವು ಅಪಾರವಾದ ವ್ಯತ್ಯಾಸವನ್ನು ಕಾಣುತ್ತಿದ್ದೇವೆ. ಆದರೆ ಗ್ರಾಮಗಳನ್ನು ನಗರಗಳ ಮಟ್ಟಕ್ಕೆ ತರಬೇಕು ಎನ್ನುವ ಕಲ್ಪನೆ ಏನಿದೆ ಅದು ಬಹಳ ಕಷ್ಟಕರ ವಾದ ಕೆಲಸ. ಗ್ರಾಮಗಳಿಗೆ ನಗರ ಪ್ರದೇಶಗಳಲ್ಲಿ ಸಿಕ್ಕತಕ್ಕಂಥಾ ಸೌಕರ್ಯಗಳು ಸಿಕ್ಕುವ ರೀತಿ ಯಲ್ಲಿ ಸರ್ಕಾರದ ಪ್ರಯತ್ನ ನಡೆಯಬೇಕು. ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಿ, ರಸ್ತೆ ಗಳನ್ನು ಒದಗಿಸಲಿ, ಮಾರ್ಕೆಟ್ ಸೌಕರ್ಯವನ್ನು ಒದಗಿಸಲು ನ್ಯಾಯವಾದ ಅಂಗಡಿಗಳನ್ನು ಒದಗಿಸಲಿ. ಈಗ ನಗರಗಳು ಬೆಳೆದ ಹಾಗೆಲ್ಲಾ ಅವುಗಳಿಗೆ ಬೇಕಾದಂತಹ ನಾಗರೀಕ ಸೌಲಭ್ಯ ಗಳನ್ನು ಒದಗಿಸಿ ಕೊಡುವುದರಲ್ಲಿ ಸರ್ಕಾರದವರು ವಿಫಲರಾಗಿದ್ದಾರೆ. ಆದ್ದರಿಂದ ಗ್ರಾಮಗಳಿಗೆ ನಗರದಲ್ಲಿ ಸಿಕ್ಕತಕ್ಕಂಥಾ ಸೌಕರ್ಯಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಗ್ರಾಮಗಳನ್ನು ನಗರಗಳಾಗಿ ಪರಿವರ್ತಿಸಿ ಹೊಸ ಸಮಸ್ಯೆಯನ್ನು ಸೃಷ್ಟಿಸುವುದು ಸರಿಯಲ್ಲ. ನಗರದಲ್ಲಿರುವವರಿಗೆ ಜೀವನಕ್ಕೆ ಬೇಕಾದಂತಹ ಸೌಲಭ್ಯ ಮತ್ತು ಸೌಕರ್ಯಗಳನ್ನು ನಾವು ಮೊದಲು ಒದಗಿಸಬೇಕಾಗಿದೆ. ಅದರ ಬದಲು ಗ್ರಾಮಾಂತರದ ಅಭಿವೃದ್ಧಿಯನ್ನು ಮುಖ್ಯವಾಗಿಟ್ಟು ಕೊಂಡು ಗ್ರಾಮವನ್ನು ನಾಗರೀಕರಣ ಮಾಡುತ್ತೇವೆಂದು ತಾವು ಹೇಳುವುದರಲ್ಲಿ ಏನು ಅರ್ಥ ವಾಗುತ್ತದೆ ? ನೀವು ಗ್ರಾಮವನ್ನು ನಗರವನ್ನಾಗಿ ಪರಿವರ್ತನೆ ಮಾಡುವಂತೆ ಇದ್ದೀರೆಂದು ಕಾಣುತ್ತದೆ. ಆದ್ದರಿಂದ ನೀವು ಈ ಒಂದು ಪದವನ್ನು ಉಪಯೋಗಿಸಿದುದು ಸಮರ್ಪಕವಲ್ಲವೆಂದು ನಾನು ಹೇಳುತ್ತೇನೆ. ಜೊತೆಗೆ ನಿರುದ್ಯೋಗ ಸಮಸ್ಯೆಗೆ ತಾವು ಸೂಚಿಸಿರತಕ್ಕಂತಹ ಕಾರ್ಯಕ್ರಮ ಸಾಕಷ್ಟು ಪರಿಣಾಮಕಾರಿಯಾಗಿಲ್ಲ. ನೀವು ಹಿಂದೆ ಕೊಟ್ಟಿರತಕ್ಕ ಅಂಕಿ ಅಂಶದಲ್ಲಿ ಸುಮಾರು 3 ಲಕ್ಷಕ್ಕೂ ಹೆಚ್ಚು ಜನ ವಿದ್ಯಾವಂತ ಮತ್ತು ಅವಿದ್ಯಾವಂತ ಜನರು ನಿರುದ್ಯೋಗಿಗಳಾಗಿದ್ದಾರೆಂದು ಹೇಳಿದ್ದೀರಿ. ಅವರಲ್ಲಿ ಸುಮಾರು 1700 ಮಂದಿಗೆ ಉದ್ಯೋಗವನ್ನು ಒದಗಿಸುವ ಕಾರ್ಯಕ್ರಮ ಇಟ್ಟು ಕೊಂಡಿದ್ದೇವೆ ಎಂದು ಹೇಳುತ್ತಿದ್ದೀರಿ. ನಿಮ್ಮ ಲೆಕ್ಕದ ಮೇಲೆ ಲೆಕ್ಕ ಹಾಕಿದರೂ ಈ ಎಲ್ಲ ನಿರುದ್ಯೋಗಿ ಗಳಿಗೆ ಉದ್ಯೋಗ ಒದಗಿಸಬೇಕಾದರೆ ಒಂದು ನೂರು ವರ್ಷವಾದರೂ ಬೇಕಾಗುತ್ತದೆ. ಆದರೆ ಇದು ನಮ್ಮ ಪರಿಸ್ಥಿತಿಗೆ ತಕ್ಷಣವಾಗಿ ಕೊಡತಕ್ಕ ಪರಿಹಾರ ಮಾರ್ಗವಲ್ಲ. ನಾನಾದರೂ ಹೇಳುವುದೇ ನೆಂದರೆ—ನಿಮ್ಮ ಅಂಕಿ ಅಂಶಗಳ ಪ್ರಕಾರ ಸುಮಾರು 29 ಸಾವಿರ ಗ್ರಾಮಗಳು ನಮ್ಮಲ್ಲಿ ಇವೆ. ಈ ಗ್ರಾಮಗಳಲ್ಲಿ ಒಂದು 'ಸ್ಮಾಲ್ ಯುನಿಟ್ ಟೆಕ್ನಾಲಜಿ' ಎಂಬ ಒಂದು ಯೋಜನೆಯನ್ನು ಅಳವಡಿ ಸಿಕೊಂಡರೆ ಸಾಧಾರಣವಾಗಿ ಸ್ವಲ್ಪಮಟ್ಟಿಗೆ ನಮ್ಮ ಈ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡಬಹುದು. ಈ ಒಂದು ಕೈಗಾರಿಕೆಯ ಘಟಕವನ್ನು ಪ್ರತಿಯೊಂದು ಗ್ರಾಮದಲ್ಲಿ ಮಾಡಿದರೆ ಒಂದೊಂದು ಘಟಕದಲ್ಲಿ ಸುಮಾರು 10 ಜನರಿಗೆ ವರ್ಷದ 12 ತಿಂಗಳು ಸಹ ಕೆಲಸವನ್ನು ಒದಗಿಸ ಬಹುದು. ಇದರಿಂದ ನಮ್ಮಲ್ಲಿರುವ 2 ಲಕ್ಷ 90 ಸಾವಿರ ಜನರಿಗೆ ಉದ್ಯೋಗವನ್ನು ಒದಗಿಸಲು ಸಾಧ್ಯವಾಗುತ್ತದೆ. ನೀವು ಹೊಸಪೇಟೆಯಲ್ಲಿ ಒಂದು ಕಾರ್ಖಾನೆಯನ್ನು ಮಾಡಬಹುದು. ಆದರೆ ಅಲ್ಲಿ ನಿಮಗೆ ಹೆಚ್ಚೆಂದರೆ 10 ಸಾವಿರ ಜನರಿಗೆ ಉದ್ಯೋಗವನ್ನು ಒದಗಿಸಿ ಕೊಡಬಹುದು. ಆದರೆ ನಿಮ್ಮ ನಿರುದ್ಯೋಗ ಸಂಖ್ಯೆ ಎಷ್ಟು ಇದೆ ? ಅಲ್ಲದೆ ಮೇಲಾಗಿ ನೀವು ಉದ್ಯೋಗವನ್ನು ಕೊಡುವಾಗ ಈ ಒಂದು ವಿಕೇಂದ್ರಿಕರಣ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮಾಡಿಲ್ಲ. ಅದಕ್ಕೆ ತಾಲ್ಲೂಕು ಮಟ್ಟದಲ್ಲಿ ಎಷ್ಟೆಷ್ಟು ಕೊಡುತ್ತೀರಿ ; ಜಿಲ್ಲಾ ಮಟ್ಟದಲ್ಲಿ ಎಷ್ಟು ಕೊಡುತ್ತೀರಿ ; ನಗರ ಪ್ರದೇಶದಲ್ಲಿ ಎಷ್ಟು ಕೊಡುತ್ತೀರಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಕೊಡುತ್ತೀರೆಂದು ಸ್ಪಷ್ಟವಾಗಿ ಹೇಳಿಲ್ಲ. ಏಕೆಂದರೆ ನಿಮ್ಮ ಆಶ್ವಾಸನೆ ಸ್ಪಷ್ಟೀಕರಣವಾಗಬೇಕಾದರೆ ನೀವು ನಗರ ಪ್ರದೇಶದಲ್ಲಿ ಎಷ್ಟು ಕೊಡುತ್ತೀರಿ, ಜಿಲ್ಲಾ ಮಟ್ಟದಲ್ಲಿ ಎಷ್ಟು ಕೊಡುತ್ತೀರಿ, ತಾಲ್ಲೂಕು ಮಟ್ಟದಲ್ಲಿ ಎಷ್ಟು ಕೊಡುತ್ತೀರಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಕೊಡುತ್ತೀರೆಂಬ ಭರವಸೆಯನ್ನು ನಮಗೆ ಕೊಡಬೇಕೆಂದು ಹೇಳುತ್ತೇನೆ. ಅದರ ಜೊತೆಗೆ ಈ ಒಂದು ಸ್ಮಾಲ್ ಯುನಿಟ್ ಟೆಕ್ನಾಲಜಿ ಯನ್ನು ಮಾಡುವ ಬಗ್ಗೆ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀ ಕಾಗೋಡು ತಿಮ್ಮಪ್ಪ)

ತಾವು ಇವತ್ತು ಹೊಸ ತೆರಿಗೆಗಳನ್ನು ಭೋಗ ವಸ್ತುಗಳ ಮೇಲೆ ಹಾಕುತ್ತೇವೆಂದು ಒಂದು ಭೋಗವಸ್ತುಗಳ ಪಟ್ಟಿಯನ್ನು ತಯಾರು ಮಾಡಿದ್ದೀರಿ. ಇದನ್ನು ನೀವು ರಾಜ್ಯದ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೋಸ್ಕರ ಮಾಡುತ್ತಿದ್ದೀರಿ. ಆದರೆ ನೀವು ಯಾವ ಒಂದು ಭೋಗ ವಸ್ತುಗಳ ಪಟ್ಟಿಯನ್ನು ಮಾಡಿದ್ದೀರಿ ಅದರಲ್ಲಿ ಅನೇಕ ಇತರ ಭೋಗ ವಸ್ತುಗಳನ್ನು ಕೈಬಿಟ್ಟಿದ್ದೀರಿ ಉದಾಹರಣೆಗೆ—ಸಿಲ್ಕ್, ಟೆರ್ಲಿನ್, ಲಿಪ್‌ಸ್ಟಿಕ್, ಉತ್ತಮವಾದ ಸೆಂಟ್, ಮತ್ತು ಒಳ್ಳೆಯ ವೈನ್ಸ್—ಇವುಗಳನ್ನು ಬಿಟ್ಟು ಬಿಟ್ಟಿದ್ದೀರಿ. ಇವುಗಳ ಮೇಲೆ ಕೂಡ ನೀವು ತೆರಿಗೆಯನ್ನು ಹಾಕಿದ್ದರೆ ರಾಜ್ಯಕ್ಕೆ ಇನ್ನೂ ಹೆಚ್ಚಿನ ವರಮಾನ ಬರುತ್ತಿತ್ತು. ಆದರೆ ಅದನ್ನು ತಾವು ಮಾಡಿಲ್ಲ. ಅದನ್ನು ಏಕೆ ಕೈಬಿಟ್ಟಿದ್ದೀರೆಂದು ನನಗೆ ಅರ್ಥವಾಗಲಿಲ್ಲ. ಆದ್ದರಿಂದ ಅಂಥ ಭೋಗ ವಸ್ತುಗಳನ್ನು ಸಹ ಇದರಲ್ಲಿ ಸೇರಿಸಿ ಸಂಪನ್ಮೂಲಗಳನ್ನು ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ ವ್ಯವಸಾಯಗಾರರ ಮೇಲೆ ಗಧಾ ಪ್ರಹಾರವನ್ನು ಮಾಡಿದ್ದೀರಿ. ನೀರಿನ ತೆರಿಗೆ ಹಾಕುವಾಗ ತಾವು ವೈಜ್ಞಾನಿಕ ರೀತಿಯನ್ನು ಅನುಸರಿಸಿಲ್ಲ. ಹಿಂದೆ ಯಾವ ಕೆರೆಯಲ್ಲಿ ಎಷ್ಟು ಅಚ್ಚುಕಟ್ಟಿಗೆ ಆಗುವಷ್ಟು ನೀರು ಇತ್ತು; ಇಂದು ಎಷ್ಟು ಆಗುತ್ತದೆ, ಎಷ್ಟು ಎಕರೆಗೆ ಅದು ಸಾಕಾಗುತ್ತದೆಂಬುದನ್ನೆಲ್ಲಾ ಒಂದು ವೈಜ್ಞಾನಿಕ ರೀತಿಯಿಂದ ನೋಡಿ ಮಾಡಿಲ್ಲ. ಹಿಂದಿನ ಸರ್ಕಾರ ಇದ್ದಾಗ ಆ ಕೆಲಸವನ್ನು ಮಾಡಲು ಅಸಿಸ್ಟೆಂಟ್ ಇಂಜಿನಿಯರಿಗೆ ಮತ್ತಿತರ ಸಂಬಂಧಪಟ್ಟವರಿಗೆ ಹೇಳಿದ್ದರು. ಆದರೆ ಅದನ್ನು ಅವರು ಮಾಡಿರಲಿಲ್ಲ. ಆದ್ದರಿಂದ ಇದನ್ನು ಕ್ರಮವಾಗಿ ಮಾಡಬೇಕಾದರೆ ಒಂದು ಜಲಾಶಯದಲ್ಲಿ ಎಷ್ಟು ನೀರು ದೊರೆಯಬಹುದು ಎಂಬುದನ್ನು ವೈಜ್ಞಾನಿಕವಾಗಿ ಕಂಡುಹಿಡಿಯಬೇಕಾಗಿದೆ. ಆ ಮೇಲೆ ಯಾವ ರೀತಿ ತೆರಿಗೆ ಹಾಕಬೇಕೆಂದು ನಿಶ್ಚಯ ಮಾಡಬೇಕಾಗುತ್ತದೆ. ಬೇಕಾದರೆ ನಾಲಾಗಳ ಬಗ್ಗೆ ಅಂಕಿ ಅಂಶಗಳು ಸರಿಯಾಗಿರುತ್ತವೆ, ಅದರ ಬಗ್ಗೆ ನಾನು ಏನೂ ಹೇಳುವುದಿಲ್ಲ. ನಾಲಾ ಪ್ರದೇಶಗಳನ್ನು ಬಿಟ್ಟು ಉಳಿದಿರತಕ್ಕ ಕೃಷಿ ಪ್ರದೇಶಗಳ ಮೇಲೆ ತೆರಿಗೆಯನ್ನು ಹಾಕುವಾಗ ಜಾಗರೂಕತೆ ವಹಿಸದಿದ್ದರೆ ನಿರಪರಾಧಿಗಳು ಕಷ್ಟಕ್ಕೆ ಒಳಗಾಗುತ್ತಾರೆ.

ಅದೇ ರೀತಿ ನೀವು ಲ್ಯಾಂಡ್ ರೆವೆನ್ಯೂವನ್ನು ಕೈಬಿಡುವುದಕ್ಕೆ ಒಪ್ಪಿಲ್ಲ. ನೀವು ವಿಶ್ವದ ಹಲವು ರಾಷ್ಟ್ರಗಳನ್ನು ನೋಡಿಕೊಂಡು ಬಂದಿದ್ದೀರಿ. ಆದ್ದರಿಂದ ಯಾವ ರಾಷ್ಟ್ರದಲ್ಲಿ ಈ ಲ್ಯಾಂಡ್ ರೆವನ್ಯೂ ಹಾಕಿದ್ದಾರೆ ಎಂಬುದನ್ನು ಹೇಳಿ ನೋಡೋಣ. ಕೃಷಿಯಲ್ಲಿ ಎಲ್ಲಿ 5 ಸಾವಿರ ರೂಪಾಯಿಗಿಂತ ಮೇಲಾಗಿ ಆದಾಯ ಬರುತ್ತದೆ, ಅಲ್ಲಿ ತೆರಿಗೆಯನ್ನು ಹಾಕಿ. ಅದನ್ನು ವರಮಾನ ಪದ್ಧತಿಯ ಮೇಲೆ ಹಾಕಬೇಕೇ ಹೊರತು ಹಳೆಯ ಪದ್ಧತಿಯನ್ನು ಇನ್ನೂ ಅನುಸರಿಸುವುದಲ್ಲ. ಅದನ್ನು ತೆಗೆದು ಹಾಕದಿದ್ದರೆ ಅದರಿಂದ ಆಗತಕ್ಕ ಹಿಂಸೆ ಅಷ್ಟಿಷ್ಟಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಅವರು ಹೇಳಿರುವುದನ್ನು ನೀವು ಪೂರ್ತಿಯಾಗಿ ಓದಿ ನೋಡಿ ಗೊತ್ತಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ನಾನು ಲ್ಯಾಂಡ್ ರೆವೆನ್ಯು ಬಗ್ಗೆ ಹೇಳಿದ್ದು ಇಷ್ಟೆ. ಕೆ. ಎನ್. ರಾಜ್ ಕಮಿಟಿ ಆನ್ ಟ್ಯಾಕ್ಸೇಶನ್ ಆಫ್ ಅಗ್ರಿಕಲ್ಚರಲ್ ವೆಲ್ತ್ ಅಂಡ್ ಇನಕಂ—ಅವರು ಈ ವಿಚಾರದಲ್ಲಿ ಪರಿಶೀಲನೆ ಮಾಡುತ್ತಿದ್ದಾರೆ. ಆದ್ದರಿಂದ ಅಗ್ರಿಕಲ್ಚರಲ್ ಇನಕಂ ಟ್ಯಾಕ್ಸ್ ಬಗ್ಗೆ ಸಮಗ್ರವಾದ ಯೋಚನೆ ನಡೆದಿದೆ. ಆದ್ದರಿಂದ ಅದನ್ನು ಕಾದು ನೋಡೋಣ. ನಂತರ ಒಂದು ಸಮಂಜಸವಾದ ತೀರ್ಮಾನಕ್ಕೆ ಬರೋಣವೆಂದು ಹೇಳಿದ್ದೇನೆ. ಲ್ಯಾಂಡ್ ರೆವೆನ್ಯೂ ಬಗ್ಗೆ ಸರ್ಕಾರದ ದೆಸೆಯಿಂದ ಯಾವ ಒಂದು ತೀರ್ಮಾನವನ್ನೂ ತೆಗೆದುಕೊಂಡಿಲ್ಲ. ನನಗೆ ಇರಿಗೇಶನ್ ಬಗ್ಗೆ ಮೈಸೂರು ದೇಶದಲ್ಲಿ ಸುಮಾರು 26 ಸಾವಿರ ಸಣ್ಣ ಸಣ್ಣ ಕೆರೆಗಳು ಇವೆಯೆಂದು ಗೊತ್ತಿದೆ. ಇರಿಗೇಶನ್ ಟ್ಯಾಕ್ಸ್‌ನಲ್ಲಿ ಜನರಿಗೆ ಹಿಂಸೆಯಾಗಬಾರದು ಎಂದು ನನ್ನ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಎಲ್ಲಿ ಒಂದು ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ, ಅಂತಹ ಕಡೆ ವಾಟರ್ ರೇಟ್ ವಸೂಲು ಮಾಡಬಾರದು ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ಇದಕ್ಕೆ ಸ್ಪಷ್ಟವಾದ ಅಡ್ಮಿನಿಸ್ಟ್ರೇಟಿವ್ ಅರೇಂಜ್‌ಮೆಂಟ್ ಕೂಡ ಮಾಡಬೇಕಾಗುತ್ತದೆಂದು ಕಮಿಟ್‌ಮೆಂಟ್ ಮಾಡಿದ್ದೇನೆ. ಎಲ್ಲಿ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗಿಲ್ಲ, ಅಲ್ಲಿ ವಾಟರ್ ರೇಟಿನ ಭಯ ಎಳ್ಳಷ್ಟೂ ಇಲ್ಲ. ಆದರೆ ಎಲ್ಲಿ ಧಾರಾಳವಾಗಿ ನೀರು ಸಿಗುತ್ತದೆ ಮತ್ತು ಎಲ್ಲಿ ಕಬ್ಬು ಮತ್ತಿತರ ಬೆಳೆ ಬೆಳೆಯುತ್ತಾರೆ ಅಲ್ಲಿಂದ ಸ್ವಲ್ಪವಾದರೂ ಸಮಾಜಕ್ಕೋಸ್ಕರ ತೆರಿಗೆ ವಸೂಲು ಮಾಡದಿದ್ದರೆ ಸಮಾಜದಲ್ಲಿರುವ ಇತರ ಬಡ ವರ್ಗದ ಜನರ ಏಳಿಗಾಗಿ ಖರ್ಚುಮಾಡುವುದಾದರೂ ಹೇಗೆ ಮತ್ತು ನಮ್ಮ ಸಮಾಜದ ಏಳಿಗೆಯಾದರೂ ಆಗುವುದು ಹೇಗೆ ? ಮತ್ತು ಆ ರೀತಿ ಮಾಡದಿದ್ದರೆ ಸಮಾಜ ಖಂಡಿತವಾಗಿಯೂ ಮುಂದುವರಿಯುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಆದ್ದರಿಂದ ಈ ಭೂಕಂದಾಯದ ಒಂದು ಮಿತಿಯನ್ನು ನಿಷ್ಕರ್ಷೆಮಾಡಲು ದಯವಿಟ್ಟು ಒಂದು ವೈಜ್ಞಾನಿಕ ವಿಚಾರಣಾ ಕ್ಷೇತ್ರವನ್ನು ರಚಿಸಿ ಅಲ್ಲಿ ತೀರ್ಮಾನಮಾಡಿದರೆ ಒಳ್ಳೆಯದು. ವ್ಯವಸಾಯ ಕ್ಷೇತ್ರದಲ್ಲಿ ಭೂತಲಿಂಗಂ ಸಮಿತಿಯವರು ಮಾಡಿರತಕ್ಕ ಶಿಫಾರಸುಗಳನ್ನು ಸಹ ನಾನು ನೋಡಿದ್ದೇನೆ. ಆ ಸಮಿತಿಯಲ್ಲಿ ಅವರು ಕೆಲವೊಂದು ಸೂಚನೆಗಳನ್ನು ಮಾಡಿದ್ದಾರೆ. ಅದರ ಬಗ್ಗೆ ಒಂದು ಸ್ಟ್ಯಾಂಡರ್ಡ್ ಯೂನಿಟ್ ಇಡುವುದು ಒಳ್ಳೆಯದು. ಉತ್ಪತ್ತಿಯ ಮೇಲೆ ಲೆಕ್ಕ ಹಾಕಿಕೊಂಡು ಭೂಕಂದಾಯದ ಮಿತಿಯನ್ನು ನಿಗದಿ ಮಾಡುವ ಅವರ ಒಂದು ಹೊಸ ವಿಚಾರ ಚರ್ಚೆಗೆ ಬರುವ ಕಾಲ ಈಗ ಬಂದಿದೆ. ಆದರೆ ಭೂಕಂದಾಯವನ್ನು ವಜಾಮಾಡಿ ಅದಕ್ಕೆ ಬದಲಾಗಿ ಬೇರೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಾವು ಪ್ರಯತ್ನಮಾಡಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಈಗ ಅನೇಕ ಕೆರೆಕಟ್ಟೆಗಳಿವೆ. ಹಿಂದೆ ಅಚ್ಚುಕಟ್ಟಾಗಿರುವ ಕಡೆಗಳಲ್ಲಿ ಹೂಳು ತುಂಬಿಸಿರುವುದರಿಂದ ನೀರನ್ನು ಒದಗಿಸುತ್ತಾ ಇಲ್ಲ. ಇದರಿಂದ ಪಕ್ಕದ ಪ್ರದೇಶಗಳಿಗೆ ಸಾಕಷ್ಟು ನೀರಿನ ಸೌಕರ್ಯ ಸಿಗುತ್ತಿಲ್ಲ. ಆದರೆ ಗ್ರಾಮಾಧಿಕಾರಿಗಳು ಏನು ಮಾಡುತ್ತಾರೆಂದರೆ, ಅವರು ಹಳ್ಳಿಗಳಿಗೆ ಹೋದರೆ ಅವರ ಹತ್ತಿರ ಪಹಣಿ ಬರೆಯುವುದಕ್ಕೆ ಒಂದು ಪುಸ್ತಕವಿರುತ್ತದೆ. ಅದರಲ್ಲಿ ಒಂದು ಕಾಲಂ ಇದೆ. ಅದರಲ್ಲಿ ಹೊಳೆಯ ನೀರು, ಅಥವಾ ಕೆರೆಯ ನೀರು ಎಂದು ಬರೆಯುತ್ತಾರೆ ಈ ರೀತಿ ಜಮೀನಿಗೆ ನೀರು ಬರುತ್ತದೆಯೇ, ಇಲ್ಲವೇ ಎಂಬುದನ್ನು ತಿಳಿಯದೆಯೇ ಒಂದು ಲೆಕ್ಕವನ್ನು ಬರೆದು ಬಿಡುತ್ತಾರೆ. ವಾಸ್ತವವಾಗಿ ಒಂದು ಸರ್ವೆ ನಂಬರ್‌ನಲ್ಲಿ 4 ಎಕರೆ ಜಮೀನು ಇದ್ದರೆ, ಕೇವಲ ಎರಡು ಎಕರೆಗೆ ನೀರು ಹಾಯುತ್ತಿರುತ್ತದೆ. ಆದರೆ ಇವರ ಬರವಣಿಗೆಯಿಂದ ಪೂರಾ ಜಮೀನಿಗೆ ನೀರು ಹಾಯುತ್ತದೆ ಎಂದು ಅರ್ಥ ಬರುತ್ತದೆ. ಇಂತಹ ವಿಷಯಗಳನ್ನು ವೈಜ್ಞಾನಿಕ ದೃಷ್ಟಿಯಿಂದ ವಿಚಾರಮಾಡಬೇಕಾಗುತ್ತದೆ. ಇದಕ್ಕೆ ಬೇಕಾದ ಅಂಕಿ ಅಂಶಗಳು ಸಿಗುವುದೂ ಕೂಡ ಬಹಳ ಕಷ್ಟವಾಗುತ್ತದೆ. ಅದಕ್ಕನುಗುಣವಾಗಿ ನಮ್ಮ ಗ್ರಾಮ ಲೆಕ್ಕಾಧಿಕಾರಿಗಳೂ ಸಹ ಹಾಗೆಯೇ ಇದ್ದಾರೆ. ಆದ್ದರಿಂದ ಮಲೆನಾಡು ಭಾಗಗಳಲ್ಲಿ ನೂರು ಎಕರೆಗೆ ಮೇಲ್ಪಟ್ಟು ಜಮೀನಿದ್ದರೂ ಅಲ್ಲಿ ಅಷ್ಟಾಗಿ ಆದಾಯ ಬರುವುದಿಲ್ಲ. ಅಂತಹ ಕಡೆಗಳಲ್ಲಿಯೂ ಒಂದು ದರವನ್ನು ಸೂಚಿಸಿದ್ದಾರೆ. ಅದನ್ನು ಕೂಡಲೇ ಕೈಬಿಡಬೇಕು. ಎಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಅಳವಡಿಸಿಕೊಂಡು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿರುತ್ತೀರೋ ಅಂತಹ ಪ್ರದೇಶಗಳಲ್ಲಿರತಕ್ಕವರ ಮೇಲೆ ನೀರಿನ ದರವನ್ನು ಹಾಕಿ. ಈ ಹಿಂದೆ ಹೈಕೋರ್ಟಿನಲ್ಲಿ ತೀರ್ಮಾನವಾಗಿರುವುದನ್ನು ಕೈಬಿಡುವುದು ಸರಿಯಲ್ಲ. ಏಕೆಂದರೆ ಅಲ್ಲಿ ಶ್ಯಾನುಭೋಗರು ಈಗಾಗಲೇ ಅವರ ಡಿಮ್ಯಾಂಡನ್ನು ಏರಿಸುತ್ತಿದ್ದಾರೆ. ಇದರಿಂದ ನಿರೀಕ್ಷಣೆ ಮಾಡಿರುವ ದುಡ್ಡು ಸರ್ಕಾರಕ್ಕೆ ಬಾರದೇ ಹೋದರೆ, ಅದನ್ನು ಬೇರೆ ರೀತಿಯಲ್ಲಿ ಇತರ ಸಂಪನ್ಮೂಲಗಳಿಂದ ಕ್ರೋಢೀಕರಿಸುವುದು ಒಳ್ಳೆಯದು. ಆದ್ದರಿಂದ ಕೆರೆಯ ಆಶ್ರಯದಿಂದ ಆಬಾದಿಗೆ ಬರತಕ್ಕ ಜಮೀನಿನ ಮೇಲೆ ನೀರು ತೆರಿಗೆ ಹಾಕುವುದನ್ನು ದಯವಿಟ್ಟು ಕೂಡಲೇ ಕೈಬಿಡಬೇಕಾಗುತ್ತದೆ. ಈ ವಿಚಾರದಲ್ಲಿ ಕಳಕಳಿಯಿಂದ ನಾನು ಒತ್ತಾಯಪಡಿಸುತ್ತಿದ್ದೇನೆ.

ಇನ್ನು ಸಮಾಜಸೇವಾ ಕಾರ್ಯಗಳಿಗೆ ಒದಗಿಸಿರುವ ಹಣ ಬಹಳ ಕಡಿಮೆಯಾಗಿದೆ. ಇದರಲ್ಲಿ ಮುಖ್ಯವಾಗಿ ಹಿಂದುಳಿದವರಿಗೆ, ಹರಿಜನರಿಗೆ, ಹಾಗೂ ಗಿರಿಜನರಿಗೆ ಎಲ್ಲ ವಿಧದಲ್ಲಿಯೂ ಈ ಬಾಬಿನಲ್ಲಿ ಸೌಕರ್ಯಗಳನ್ನು ಒದಗಿಸುವ ಜವಾಬ್ದಾರಿ ನಮ್ಮ ಮೇಲೆ ಇದೆ. ಹರಿಜನರಿಗೆ ಮತ್ತು ಗಿರಿಜನರಿಗೆ ಭೂಮಿಯನ್ನು ಒದಗಿಸುತ್ತಿದ್ದರೂ ಅದನ್ನು ಉಳಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಕೇವಲ ಅವರಿಗೆ ಭೂಮಿಯನ್ನು ಕೊಟ್ಟಿದ್ದಾರೆಯೇ ಹೊರತು ಕೃಷಿ ಮಾಡುವ ಸಾಮಗ್ರಿಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸುತ್ತಾ ಇಲ್ಲ. ಕಾಲೋನಿಗಳನ್ನು ಮಾಡಿ ಅವರಿಗೆ ವಸತಿ ಸೌಕರ್ಯಗಳನ್ನು ಮಾಡಬೇಕು. ಇಲ್ಲದಿದ್ದರೆ ಅವರಿಗೆ ಕೊಡತಕ್ಕ ಭೂಮಿಯನ್ನು ಬುದ್ಧಿವಂತರಾದವರು ಲಪಟಾಯಿಸಿಕೊಂಡು ಹೋಗುವುದರಿಂದ ಅವರ ಸ್ಥಿತಿ ಮತ್ತೆ ಯಥಾಸ್ಥಿತಿಯಲ್ಲಿ ಮುಂದುವರಿಯುತ್ತದೆ. ನಮ್ಮ ರಾಜ್ಯಕ್ಕೆ ಟಿಬೆಟ್‌ನವರು ಬಂದಾಗ್ಗೆ ಅವರಿಗೆ ಉಳುವುದಕ್ಕೆ ಭೂಮಿ ಕೊಡುತ್ತೀರಿ ಮತ್ತು ಇನ್ನೂ ಅನೇಕ ಸವಲತ್ತುಗಳನ್ನು ಅವರಿಗೆ ಕೊಡುತ್ತಿದ್ದೀರಿ. ಆದರೆ ನಮ್ಮ ರಾಜ್ಯದಲ್ಲಿರತಕ್ಕ ಬಡವರಿಗೆ, ರೈತರಿಗೆ ದೊಡ್ಡದಾಗಿ ಆ ಅತಿಥಿಗಳಿಗೆ ನೀಡುವಷ್ಟು ಸೌಕರ್ಯಗಳನ್ನು ಇದುವರೆಗೂ ಕೊಟ್ಟಿಲ್ಲ. ಆದ್ದರಿಂದ ನಮ್ಮಲ್ಲಿ ದರಿದ್ರಸ್ಥಿತಿಯಲ್ಲಿರತಕ್ಕ ಜನರನ್ನು ಆದಷ್ಟು ಜಾಗ್ರತೆಯಾಗಿ ಪುನರ್ವಸತಿ ಮಾಡುವುದಕ್ಕೆ ತಕ್ಕ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಇರುವವರನ್ನು ಈಗ ಪುನರ್ವಸತಿ ಮಾಡುವುದಕ್ಕೆ ಸ್ವಲ್ಪ ಕಷ್ಟವಾಗಬಹುದು. ಏಕೆಂದರೆ ಕೇವಲ ನಮ್ಮ ಮನೆಯ ಹತ್ತಿರ ಒಂದು ತೆಂಗಿನ ಗಿಡ ಅಥವಾ ನಿಂಬೆಗಿಡವಿದ್ದರೆ, ಸಾಮಾನ್ಯವಾಗಿ ಅದನ್ನು ಬಿಟ್ಟು ಹೋಗಲು ಮನಸ್ಸು ಮಾಡುವುದಿಲ್ಲ ಅಂದಮೇಲೆ ಆ ಜನಗಳು ತಮ್ಮ ಭೂಮಿಗೆ ಅಂಟಿಕೊಂಡಿರುತ್ತಾರೆ. ಅದಕ್ಕಾಗಿಯೇ ಶರಾವತಿ ಪ್ರಾಜೆಕ್ಟ್ ಆಗುತ್ತಿರುವ ಕಡೆ ಅಲ್ಲಿಯೇ ಮನೆ

ಶ್ರೀ ಕಾಗೋಡು ತಿಮ್ಮಪ್ಪ)

ಮಾಡಿಕೊಂಡು ಕೂತು ಬಿಟ್ಟಿದ್ದಾರೆ. ಶರಾವತಿ ಮುಳುಗಡೆ ಪ್ರದೇಶದಲ್ಲಿರುವ ಜನರು ತಮ್ಮ ಜಮೀನು ಮುಳುಗಡೆಯಾದರೆ ಅಲ್ಲಿನ ಮನೆಗಳನ್ನು ಬಿಟ್ಟು ಪುನಃ ಪಕ್ಕದಲ್ಲಿಯೇ ಮನೆ ಕಟ್ಟಿಕೊಂಡು ಕೂತಿದ್ದಾರೆ. ಅನೇಕರು ತೆಂಗಿನಮರಗಳನ್ನು ಬಿಟ್ಟು ಹೋಗುವುದಕ್ಕಾಗುವುದಿಲ್ಲವೆಂದು ಕೂತಿದ್ದಾರೆ. ಇಂತಹ ಸ್ಥಿತಿ ನಮ್ಮ ಜನರ ಪ್ರವೃತ್ತಿ ಆಗಿರುವುದಾಗಿದೆ. ಅಂತಹ ಜನರನ್ನು ಸ್ಥಳಾಂತರಗೊಳಿಸಬೇಕು. ಒಂದುವೇಳೆ ಅಂತಹವರಿಗೆ ಭೂಮಿ ಇದ್ದರೆ, ಅಂತಹವರನ್ನು ಅಲ್ಲಿಯೇ ಹಾಕಿ ಸರ್ವಸೌಕರ್ಯಗಳನ್ನು ಒದಗಿಸಿಕೊಡಬೇಕು. ಹರಿಜನ ಗಿರಿಜನರಿಗೂ ಜಮೀನು ಕೊಡುವ ವಿಷಯದಲ್ಲಿ ತಂಬಾ ಎಚ್ಚರ ವಹಿಸಬೇಕು. ಇಲ್ಲದಿದ್ದರೆ ಅವರು ಉದ್ಧಾರವಾಗುವುದಿಲ್ಲ. ಅವರಿಗೆ ಜಮೀನು ಕೊಟ್ಟರೆ ಬೇರೆ ಬುದ್ಧಿವಂತರು ಅದನ್ನು ನುಂಗಿಹಾಕುತ್ತಾರೆ. ಅವರಿಗೆ ಕೊಟ್ಟ ಎತ್ತುಗಳನ್ನೂ ಸಹ ಕಸಿದುಕೊಂಡು ಹೋಗಿರುತ್ತಾರೆ ಆದ್ದರಿಂದ ಇವತ್ತು ಅವರಿಗೇನು ಕೊಟ್ಟರೂ ಅವರಲ್ಲಿ ಅದು ಉಳಿಯುವುದಿಲ್ಲ. ಈಗ ಟಿಬೆಟ್‌ಯನ್ಸ್‌ಗೆ ಯಾವ ರೀತಿಯಲ್ಲಿ ಪುನರ್ವಸತಿ ಮಾಡಿದ್ದೀರಿ ಅದೇ ರೀತಿಯಾಗಿ ಹರಿಜನ, ಗಿರಿಜನರಿಗೂ ಒಂದು ಹೊಸ ಕಾಲೋನಿಯನ್ನು ನಿರ್ಮಿಸುವ ಮೂಲಕ ಅವರನ್ನೂ ಸಹ ಪುನರ್ವಸತಿಗೊಳಿಸುವ ವ್ಯವಸ್ಥೆ ಜಾಗ್ರತೆಯಾಗಿ ಆಗಬೇಕು. ಈ ಒಂದು ದೃಷ್ಟಿಯಿಂದ ಈ ಬಾಬಿಗೆ ಒದಗಿಸಿರುವ ಹಣ ಬಹಳ ಕಡಿಮೆಯಾಗಿದೆ. ನಾವು ಈ ಬಾಬಿಗೆ ಯಾವಾಗಲೂ ಹೆಚ್ಚು ಹಣವನ್ನು ಒದಗಿಸಬೇಕು. ತಾಲ್ಲೂಕುಬೋರ್ಡ್ ಬಡ್ಜೆಟ್ಟಿನಲ್ಲಿ ಸೇಕಡ 18 ರಷ್ಟು ಭಾಗವನ್ನು ಇವರ ಅಭಿವೃದ್ಧಿ ಕೆಲಸಕಾರ್ಯಗಳಿಗಾಗಿ ಮಿಸಲಾಗಿಡಬೇಕೆಂದು ಹೇಳಿದ್ದಾರೆ. ಆದರೆ ಸಹಕಾರ್ಯದರ್ಶಿ ಈ ವಿಚಾರದಲ್ಲಿ ಒಂದು ಪರಿಪತ್ರವನ್ನು ಹೊರಡಿಸಿದ್ದರಿಂದ ಸ್ವಲ್ಪಮಟ್ಟಿಗೆ ತೊಂದರೆಯಾಗಿದೆ. ಆದ್ದರಿಂದ ಎಲ್ಲಾ ಸ್ಥಳೀಯಸಂಸ್ಥೆಗಳೂ ಕೂಡ ಇನ್ನುಮುಂದೆ ಇವರ ಅಭಿವೃದ್ಧಿಗಾಗಿ ತಕ್ಕ ಕೆಲಸಕಾರ್ಯಗಳನ್ನು ಕೈಗೊಳ್ಳಲು ಸೇಕಡ 18 ರಷ್ಟು ಭಾಗವನ್ನು ಮೀಸಲಾಗಿಡಬೇಕು. ಅದೇ ಪ್ರಕಾರ ರಾಜ್ಯದ ಆಯವ್ಯಯದಲ್ಲಿಯೂ ಕೂಡ ಹರಿಜನ ಗಿರಿಜನ ಉದ್ಧಾರಕ್ಕೋಸ್ಕರ ನಿಗದಿಯಾಗಿ ಹೆಚ್ಚಿನ ಮೊತ್ತವನ್ನು ಮೀಸಲಾಗಿಡಬೇಕು. ಜೊತೆಗೆ ಇವರಿಗೋಸ್ಕರ ಅನೇಕ ಕಡೆಗಳಲ್ಲಿ ವಿದ್ಯಾರ್ಥಿನಿಲಯಗಳಿವೆ. ಆದರೆ ಅವುಗಳಿಗೆ ಸರಿಯಾದ ಕಟ್ಟಡಗಳಿಲ್ಲ. ಬೇರೆಯವರು ಅವರಿಗೆ ಸರಿಯಾಗಿ ಅವಕಾಶ ಮಾಡಿಕೊಡುವುದಿಲ್ಲ. ಆದ್ದರಿಂದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಇನ್ನುಮುಂದೆ ಹರಿಜನ ಗಿರಿಜನ ಮಕ್ಕಳಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸಿಕೊಡುವುದಕ್ಕೆ ಹೆಚ್ಚಿಗೆ ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಬೇಕೆಂದು ನಾನು ಹೇಳುತ್ತೇನೆ. ಅವರಿಗೆ ಶಾಶ್ವತ ಪರಿಹಾರ ಮಾಡದೇ ಹೋದರೆ, ಅವರ ಬಗ್ಗೆ ನೀವು ಏನೇನು ಮಾಡುತ್ತೇವೆಂದು ಹೇಳಿದ್ದೀರೋ ಅವೆಲ್ಲವೂ ಸುಳ್ಳಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಪ್ರತಿಯೊಂದು ಜಿಲ್ಲೆಯಲ್ಲಿಯೂ ಹರಿಜನ ಗಿರಿಜನರ ವಿದ್ಯಾರ್ಥಿನಿಲಯ ಒಂದನ್ನು ಕಟ್ಟಿಸುವುದಕ್ಕಾಗಿ ಬಡ್ಜೆಟ್ಟಿನಲ್ಲಿ 20 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಆ ಒಂದು ದೃಷ್ಟಿಯಿಂದ ತಾವು ತೀವ್ರವಾಗಿ ಆಲೋಚನೆ ಮಾಡಬೇಕು. ನಮ್ಮಲ್ಲಿ ಈಗ 176 ತಾಲ್ಲೂಕುಗಳಿವೆ. ಪ್ರತಿಯೊಂದು ತಾಲ್ಲೂಕಿನಲ್ಲಿ ವಿದ್ಯಾರ್ಥಿನಿಲಯವಿದೆ. ಕಟ್ಟಡ ಇರತಕ್ಕಂಥಾದ್ದು ಕೇವಲ ಸೇಕಡ 10 ರಷ್ಟು. ಅನೇಕ ತಾಲ್ಲೂಕುಗಳಲ್ಲಿ ಕಟ್ಟಡಗಳು ಇಲ್ಲ. ಜಿಲ್ಲೆಗೆ ಒಂದರಂತಾದರೂ 19 ಜಿಲ್ಲೆಗಳಿಗೆ ಒಂದೊಂದು ಹಾಸ್ಟಲ್ ಆಗಬೇಕಾದರೆ, ಇನ್ನು 20–25 ವರ್ಷಗಳಾದರೂ ಬೇಕಾಗುತ್ತದೆ. ಇದನ್ನು ಪೂರೈಸಬೇಕಾದರೆ ರಿಜರ್ವ್ ಬ್ಯಾಂಕಿನ ಮೂಲಕ ಸಾಲವನ್ನು ಪಡೆದಾದರೂ ಪೂರೈಸಬೇಕಾಗುತ್ತದೆ. ಒಟ್ಟಿನಲ್ಲಿ ಹರಿಜನಗಿರಿಜನರ ಅಭಿವೃದ್ಧಿಗಾಗಿ ಎಲ್ಲ ಕಾರ್ಯಗಳನ್ನು ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಸಮಾಜಕಲ್ಯಾಣದ ಬಗ್ಗೆ ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣ ಬಹಳ ಕಡಿಮೆ. ಆದರೆ ಅವರ ವೈದ್ಯಕೀಯ ಸೌಕರ್ಯದ ಬಗ್ಗೆ ನಮ್ಮ ಆರೋಗ್ಯ ಮಂತ್ರಿಗಳು ಇಲ್ಲರುವುದರಿಂದ ಅವರೂ ಸಹ ಹೆಚ್ಚಿನ ಗಮನವನ್ನು ಕೊಡಬೇಕು. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿತಕ್ಕ ಜನರು ವೈದ್ಯಕೀಯ ಸೌಲಭ್ಯಗಳನ್ನು ಪಡೆಯುತ್ತಿರುವುದನ್ನು ನೋಡಿದರೆ, ನಿಜವಾಗಿಯೂ ನಗರ ಪ್ರದೇಶಗಳಲ್ಲಿ ವೈದ್ಯಕೀಯ ಸೌಲಭ್ಯವನ್ನು ಪಡೆಯುವುದಕ್ಕಿಂತಲೂ ಬಹಳ ಕಡಿಮೆ. ಅತ್ಯಂತ ಅಲ್ಪ ಪ್ರಮಾಣದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಸೌಕರ್ಯವಿದೆ. ಪ್ರತಿಯೊಂದು ಗ್ರಾಮದಲ್ಲಿಯೂ ಈಗ ಹೆಲ್ತ್ ಯೂನಿಟ್ಟುಗಳು ಇದ್ದರೂ ಅಲ್ಲಿ ಸಿಗುವ ವೈದ್ಯಕೀಯ ಸೌಕರ್ಯವಿದೆ. ಪ್ರತಿಯೊಂದು ಗ್ರಾಮದಲ್ಲಿಯೂ ಈಗ ಹೆಲ್ತ್ ಯೂನಿಟ್ಟುಗಳು ಇದ್ದರೂ ಅಲ್ಲಿ ಸಿಗುವ ವೈದ್ಯಕೀಯ ಸೌಲಭ್ಯ, ಬಹಳ ಕಡಿಮೆ. ಔಷಧಿಗಳೂ ಕೂಡ ಸರಿಯಾಗಿ ಸರಬರಾಜು ಆಗುವುದಿಲ್ಲ. ಪ್ರತಿಯೊಂದು ಹೆಲ್ತ್ ಯೂನಿಟ್ಟಿನಲ್ಲಿಯೂ ಕನಿಷ್ಟಪಕ್ಷ 5 ಬೆಡ್‌ಗಳನ್ನು ಕೊಡುವುದಕ್ಕೆ ನೀವು ಆಲೋಚನೆ ಮಾಡಬೇಕು.

ಕೆಲವು ಸಂದರ್ಭಗಳಲ್ಲಿ ಔಷಧಿಗಳು ಇದ್ದರೂ ಸರಿಯಾದ ರೀತಿಯಲ್ಲಿ ಚಿಕಿತ್ಸೆ ಪಡೆಯುವುದಕ್ಕಾಗುವುದಿಲ್ಲ. ಪ್ರತಿಯೊಂದು ಯೂನಿಟ್ಟಿನಲ್ಲಿ ಡಾಕ್ಟರುಗಳು ಅಲ್ಲಿಯೇ ಇದ್ದುಕೊಂಡು ರೋಗಿಗಳಿಗೆ ಸರಿಯಾಗಿ ಚಿಕಿತ್ಸೆ ಮಾಡುವ ವ್ಯವಸ್ಥೆ ಕೂಡಲೇ ಆಗಬೇಕು. ನಗರ ಪ್ರದೇಶಗಳಲ್ಲಿ ಕಡ್ಡಾಯವಾಗಿ ಇಷ್ಟೇ ಬೆಡ್‌ಗಳು ಇರಬೇಕೆಂಬ ನಿಯಮವಿದೆ. ಆ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಇಲ್ಲದಿದ್ದರೆ ಬರುವ ರೋಗಿಗಳು ತುಂಬಾ ನೊಂದುಕೊಂಡು ಹೋಗಬೇಕಾಗುತ್ತದೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಹೆಚ್ಚಿನ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿಕೊಡಲು ತಕ್ಕ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಗ್ರಾಮಾಂತರ ಪ್ರದೇಶದಲ್ಲ ತೆರೆಯಲಾಗಿರುವ ಪ್ರತಿಯೊಂದು ಹೆಲ್ತ್ ಯೂನಿಟ್ಟಿಗೂ ಐದೈದು ಬೆಡ್ಡುಗಳನ್ನು ಒದಗಿಸತಕ್ಕ ವ್ಯವಸ್ಥೆಯನ್ನು ಸರ್ಕಾರ ಕೂಡಲೆ ಕೈಗೊಳ್ಳಬೇಕೆಂದು ಕೇಳಿಕೊಂಡು ಹಾಗೇ ಅದರ ಜೊತೆಯಲ್ಲಿ ನಾನು ಇನ್ನೊಂದು ಅಂಶವನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದಿರುವುದು ನಮ್ಮ ಕಡ್ಡಾಯ ವಿದ್ಯಾ ಶಿಕ್ಷಣದ ವಿಷಯ. ಆದರೆ ನಮ್ಮಲ್ಲಿ ಪ್ರಾಥಮಿಕ ಕಡ್ಡಾಯ ಶಿಕ್ಷಣ ಜಾರಿಗೆ ಬಂದಿದೆ ಎಂಬ ಒಂದು ತಪ್ಪು ಕಲ್ಪನೆಯನ್ನು ಮನಸ್ಸಿನಲ್ಲ ಮಾಡಿಕೊಂಡು ರಾಜ್ಯದಲ್ಲಿರತಕ್ಕ ಶಾಲೆಗೆ ಹೋಗತಕ್ಕ ವಯಸ್ಸಾಗಿರುವ ಮಕ್ಕಳಲ್ಲಿ ನೂರಕ್ಕೆ 90 ರಷ್ಟು ಶಾಲೆಗೆ ಕಡ್ಡಾಯವಾಗಿ ಹಾಜರಾಗುತ್ತಿದ್ದಾರೆಂಬ ಭಾವನೆ ಅನೇಕರಲ್ಲಿದ್ದಹಾಗೆ ಕಂಡುಬರುತ್ತಿದೆ. ಆದರೆ ಆ ಭಾವನೆ ಸರಿಯಾದುದಲ್ಲ. ಅದು ತಪ್ಪು ಭಾವನೆ. ನನ್ನ ಪ್ರತ್ಯಕ್ಷ ನಿದರ್ಶನದಲ್ಲಿ ನಮ್ಮಲ್ಲಿರುವ ಯಾವ ಶಾಲೆಯಲ್ಲೂ ಕೂಡ ನೂರಕ್ಕೆ 30—40 ಹುಡುಗರಿಗಿಂತ ಹೆಚ್ಚು ಮಂದಿ ಶಾಲೆಯಲ್ಲಿ ಇದ್ದುದನ್ನು ನಾನು ನೋಡಲಿಲ್ಲ. ಕೆಲವು ಶಾಲೆಗಳಲ್ಲಿ ಕೇವಲ ಐದು—ಹತ್ತು ಜನ ವಿದ್ಯಾರ್ಥಿಗಳು ಕುಳಿತಿರುತ್ತಾರೆ. ಇದು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ನೈಜವಾದ ಚಿತ್ರ. ನಮ್ಮ ಜನಗಣತಿಯ ಪ್ರಕಾರ ಕಡ್ಡಾಯ ಶಿಕ್ಷಣವನ್ನು ಇಷ್ಟು ಜನ ಮಕ್ಕಳು ಪಡೆಯುತ್ತಿದ್ದಾರೆಂದು ನೆಪ ಮಾತ್ರದ ಲೆಕ್ಕಕ್ಕೆ ಹೇಳಬಹುದೇ ವಿನಾ ಅಲ್ಲಿ ಅಷ್ಟು ಜನ ಇರುವುದೇ ಇಲ್ಲ. ಇದಕ್ಕೆ ಕಾರಣವೂ ಇದೆ. ಒಂದು ಗ್ರಾಮದಲ್ಲಿ ಯಾರಾದರೂ ತಂದೆತಾಯಿಗಳು ತಮ್ಮ ಮಕ್ಕಳನ್ನು ಕಡ್ಡಾಯ ಶಿಕ್ಷಣದ ಕಾನೂನು ಪ್ರಕಾರ ಶಾಲೆಗೆ ಕಳುಹಿಸದಿದ್ದರೆ ಅವರಿಗೆ ಶಿಕ್ಷೆ ವಿಧಿಸಲು ಗ್ರಾಮಾಂತರ ಪ್ರದೇಶದಲ್ಲಿ ಎಲ್ಲಿಯಾದರೂ ಸರ್ಕಾರದವರು ಕೋರ್ಟುಗಳನ್ನು ತೆರೆದಿದ್ದಾರೆಯೇ! ಆದ್ದರಿಂದ ಈ ಕೋರ್ಟುಗಳನ್ನು ತೆರೆಯುವವರೆಗೂ ಈ ಕಡ್ಡಾಯ ಶಿಕ್ಷಣ ಸಂಪೂರ್ಣವಾಗಿ ಜಾರಿಗೆ ಬಂದಿದೆ ಎಂದು ಹೇಳುವುದಕ್ಕೆ ಅವಕಾಶವೆಲ್ಲಿದೆ? ಕಡ್ಡಾಯ ಶಿಕ್ಷಣದ ಕಾನೂನಿನ ಎರಡನೇ ಭಾಗವನ್ನು ಇನ್ನೂ ಜಾರಿಗೇ ತಂದಿಲ್ಲ. ಇಂದಿನ ತರುಣವೇ ನಮ್ಮ ಮುಂದಿನ ದೇಶದ ಆಸ್ತಿ. ಹಾಗಿರುವಾಗ ಇಂದು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡತಕ್ಕ ವಿಚಾರದಲ್ಲಿ ಹಿಂದೂ ಮುಂದೂ ನೋಡತಕ್ಕ ತಂದೆತಾಯಿಗಳಿಗೆ ಸೂಕ್ತ ಶಿಕ್ಷೆ ವಿಧಿಸುವುದರಲ್ಲಿ ಯಾರೂ ಹಿಂದು ಮುಂದು ನೋಡಬಾರದು. ನಮ್ಮ ಹಣಕಾಸಿನ ಮಂತ್ರಿಗಳು ಇನ್ನು ತಮ್ಮ ಭಾಷಣದಲ್ಲಿ ಕೊನೆ ಪ್ಯಾರಾ 43ರಲ್ಲಿ ಹೀಗೆ ಹೇಳಿದ್ದಾರೆ: "...ಈ ಸಂದರ್ಭದಲ್ಲಿ ಅವಶ್ಯಕವಾಗಿ ಗಮನಿಸತಕ್ಕ ಸಂಗತಿ ಏನೆಂದರೆ ಅತ್ಯವಶ್ಯ ಅಭಿವೃದ್ಧಿ ಕಾರ್ಯಗತಿಯನ್ನು ಕುಂಠಿತಗೊಳಿಸದೆ, ಸಂಪನ್ಮೂಲ ಸಂಗ್ರಹಕ್ಕೆ ರಾಜ್ಯವು ಮಾಡುವ ಪ್ರಯತ್ನದ ಜೊತೆಗೆ ಕೇಂದ್ರದಿಂದ ಸಾಕಷ್ಟು ಹಣ ನಮ್ಮ ರಾಜ್ಯಕ್ಕೆ ಸರಿಯಾದ ರೀತಿಯಲ್ಲಿ ಬರುವಂತೆ ನೋಡಿಕೊಳ್ಳುವುದೇ ಮುಖ್ಯ. ರಾಜ್ಯಸರ್ಕಾರಗಳಿಗೆ ಕೊಡುವ ಸಾಲಗಳು ಕೇಂದ್ರ ರಾಜ್ಯಗಳೊಳಗಣ ಆರ್ಥಿಕ ಸಂಬಂಧವನ್ನು ವಿಕೃತಗೊಳಿಸುವುದರಿಂದ ಈ ಸಾಲಗಳ ನಿಯಮವನ್ನು ಪುನರ್ವಿಮರ್ಶಿಸುವುದು ಅಗತ್ಯ. ಆದರೆ ಸಂಪನ್ಮೂಲ ಸಂಗ್ರಹ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಇರುವ ಶಕ್ತಿ ರಾಜ್ಯ ಸರ್ಕಾರಕ್ಕೆ ಇರುವ ಶಕ್ತಿಗಿಂತ ಎಷ್ಟೋ ಹೆಚ್ಚಿನದು. ವರಮಾನವನ್ನು ಹೆಚ್ಚಿಸಿಕೊಳ್ಳುವಂತೆ ತೆರಿಗೆ ವಿಧಿಸುವ ಅಧಿಕಾರ ಮುಖ್ಯವಾಗಿ ಕೇಂದ್ರ ಸರ್ಕಾರದಲ್ಲೇ ಇರುವುದಾಗಿದೆ..." ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ನಮ್ಮ ಆರ್ಥಿಕ ಸಚಿವರು ಸ್ವಲ್ಪ ಹೆದರಿಕೊಂಡು ಹೇಳಿರುವಂತೆ ಭಾಸವಾಗುತ್ತದೆ. ಅವರು ಇಷ್ಟು ಹೆದರಿ ನಡೆಯಬೇಕಾದ್ದೇನೂ ಇಲ್ಲ. ರಾಜ್ಯದ ಆಗುಹೋಗುಗಳನ್ನು ತಾವು ದೃಷ್ಟಿಯಲ್ಲಿಟ್ಟುಕೊಂಡು ದೇಶದ ಪ್ರಗತಿ ಸಾಧನೆಗಾಗಿ ರಾಜ್ಯ ಸರ್ಕಾರ ತನ್ನ ಅಭಿವೃದ್ಧಿಗೇ ಸಾಕಾಗುವಷ್ಟು ಸಂಪನ್ಮೂಲಗಳನ್ನು ಕ್ರೋಢಿಕರಿಸಿಕೊಳ್ಳುವುದರ ಬಗ್ಗೆ ಸ್ವಾಯತ್ತತೆ ಪಡೆಯಲು ತಾವು ಎಲ್ಲಾ ಪ್ರಯತ್ನಗಳನ್ನೂ ಮಾಡಲೇಬೇಕು. ರಾಜ್ಯದ ಸಂಪನ್ಮೂಲಗಳು ದ್ವಿಗುಣವಾಗಬೇಕು. ಅದಕ್ಕಾಗಿ ರಾಜ್ಯಕ್ಕೆ ಹೆಚ್ಚಿನ ಅಧಿಕಾರವನ್ನು ಪಡೆಯತಕ್ಕ ಬಗ್ಗೆ ಸರ್ವ ಪ್ರಯತ್ನಗಳನ್ನೂ ಮಾಡಬೇಕು. ಇದರ ಬಗ್ಗೆ ತಾವು ಹಿಂದು ಮುಂದು ನೋಡಬೇಕಾಗಿಲ್ಲ. ಇಲ್ಲಿಂದ ಮುಂದಕ್ಕಾದರೂ ಆಡಳಿತಪಕ್ಷ ತನ್ನ ಹಿಂದಿನ ಇತಿಹಾಸದ ದಾರಿಯನ್ನು ಬದಲಾಯಿಸದೆ ಇದ್ದರೆ ಗತ್ಯಂತರವಿಲ್ಲ. ಇದನ್ನೆಲ್ಲಾ ಸರ್ಕಾರ ಗಮನದಲ್ಲಿಟ್ಟುಕೊಂಡು ಕಾರ್ಯ ನಡೆಸಬೇಕೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟ ಮಾನ್ಯ ಅಧ್ಯಕ್ಷಿಣಿಯವರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).–ಸನ್ಮಾನ್ಯ ಅಧ್ಯಕ್ಷಣಿಯರೇ, ಅರ್ಥಿಕ ಸಚಿವರು ಸಭೆಯು ಮುಂದೆ ಮಂಡಿಸಿರತಕ್ಕ ಆಯವ್ಯಯ ಪಟ್ಟಿಯನ್ನು ನಾನು ಹೃತ್ಪೂರ್ವಕವಾಗಿ ಅನುಮೋದಿಸುತ್ತ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತ ನಮ್ಮ ಸರ್ಕಾರದವರು ತೀರ್ಮಾನ ಮಾಡಿರತಕ್ಕ ಓವರ್ ಡ್ರಾಫ್ಟ್ ಸಾಲದ ಬಗ್ಗೆ ತಮಗೆ ಸಂಶಯವಿದೆ ಎಂದು ಹೇಳಿದರು. ಆದರೆ ಈ ವಿಚಾರದಲ್ಲಿ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳೂ ಮತ್ತು ಅರ್ಥಿಕ ಮಂತ್ರಿಗಳೂ ಕೇಂದ್ರ ಸರ್ಕಾರದೊಡನೆ ಸಾಕಷ್ಟು ವಿಚಾರ ವಿನಿಮಯ ಮಾಡಿ ಅದರಲ್ಲಿ ತಾವು ಯಶಶ್ವಿಯಾಗಿದ್ದಾರೆ, ಆ ಸಾಲವನ್ನು ಸಂಪೂರ್ಣವಾಗಿ ತೀರಿಸಿದ್ದಾರೆ. ಆದ್ದರಿಂದ ಅವರು ಈ ವಿಚಾರದಲ್ಲಿ ಅಷ್ಟೇನೂ ಚಿಂತೆಪಡಬೇಕಾದ್ದಿಲ್ಲ ಎಂದು ಹೇಳುತ್ತೇನೆ. ಮತ್ತು ಅವರು ಈ ವಿಚಾರದಲ್ಲಿ ಇನ್ನಾದರೂ ಅವರ ಅಭಿಪ್ರಾಯವನ್ನು ಬದಲಾವಣೆ ಮಾಡಿಕೊಳ್ಳಬೇಕು.

ಇನ್ನು ಕಾಳೀ ನದಿ ಬಗ್ಗೆ ಮಾತನಾಡುತ್ತಾ ಶ್ರೀ ದೇವೇಗೌಡರು ಅದರ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಾಧಾನ್ಯತೆಯನ್ನು ಕೊಡುವುದೂ ಬೇಡ, ಅವರಿಂದ ಬರತಕ್ಕ ಸಾಲದ ಸೌಲಭ್ಯವನ್ನು ಪಡೆಯತಕ್ಕದ್ದೂ ಬೇಡ ಎಂದು ಹೇಳಿದ್ದನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ಅವರು ಹಾಗೆ ಹೇಳಿದ್ದು ಬಹಳ ಶೋಚನೀಯ. ಏಕೆ ಆ ರೀತಿ ಹೇಳಿದರೋ ಏನೋ, ಅದನ್ನು ನೋಡಿದರೆ ವ್ಯಸನವಾಗುತ್ತದೆ. ಕಾಳಿನದಿ ಯೋಜನೆಯ ವೆಚ್ಚವನ್ನು ಭಾರತ ಸರಕಾರದವರೇ ಪೂರ್ತಿಯಾಗಿ ವಹಿಸಿಕೊಳ್ಳುತ್ತಾರೆ ಎಂದು ತಿಳಿಸಿದ್ದಾರೆ. ಸುಮಾರು 164 ಕೋಟಿ ರೂಪಾಯಿ ಏನೂ ಸಣ್ಣ ಮೊತ್ತವಲ್ಲ. ಈ ವರ್ಷ 13 ಕೋಟಿ ರೂಪಾಯಿ ಖರ್ಚು ಮಾಡಿ ಮುಂದೆ ಇದಕ್ಕೆ ಜಾಸ್ತಿ ಖರ್ಚು ಮಾಡುವರು. ಈ ಹಣವನ್ನು ತಾವು ಕೊಡುವುದಾಗಿಯೂ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದೂ ಕೇಂದ್ರ ಸರಕಾರದವರು ಹೇಳಿದ್ದಾರೆ. ಇದನ್ನು ಪ್ರಶಂಸೆ ಮಾಡಿ ಕೇಂದ್ರ ಸರಕಾರವನ್ನು ಮನಸಾರೆ ವಂದಿಸಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಲಿಷ್ಟಪಡುತ್ತೇನೆ. ಈ ಒಂದು ಕಾರ್ಯಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ಅರ್ಥಿಕ ಸಚಿವರೂ ಬಹಳ ಪ್ರಯತ್ನ ಮಾಡಿ ದಿಟ್ಟ ನಿಲುವನ್ನು ತಾಳಿದ್ದು ಕೇಂದ್ರ ಸರಕಾರ ಕೊಂಚಮಟ್ಟಿಗೆ ಯೋಚಿಸಲು ಅವಕಾಶವಾಗಿ ಅವರು ಸಹಾಯ ನೀಡಲು ಮುಂದೆ ಬಂದರು. ನಮ್ಮ ಸರಕಾರ ಮಾಡಿರುವ ಈ ಉತ್ತಮವಾದ ಕಾರ್ಯಕ್ಕಾಗಿ ಮಾನ್ಯ ಸದಸ್ಯರು ಎರಡು ಒಳ್ಳೆಯ ಮಾತನಾಡಬೇಕಾಗಿತ್ತು. ಕೇಂದ್ರ ಸರಕಾರ ನಮ್ಮ ನೆರವಿಗೆ ಬಂತಲ್ಲಾ ಎಂದು ವಿರೋಧ ಪಕ್ಷದ ನಾಯಕರು ಅದರ ಬಗ್ಗೆ ಪ್ರಶಂಸೆ ಮಾಡಿ ಎರಡು ಒಳ್ಳೆಯ ಮಾತುಗಳನ್ನು ಹೇಳಬೇಕಾಗಿತ್ತು. ಕಾಳೀನದಿ ಯೋಜನೆಗೆ ಮತ್ತು ಓವರ್ ಡ್ರಾಫ್ಟ್ ತೀರಿಸಲು ಕೇಂದ್ರ ಸರಕಾರದಿಂದ ಸಹಾಯ ಪಡೆದು ನಮ್ಮ ದೇಶದ ಭವಿಷ್ಯವನ್ನು ರೂಪಿಸಿರುವುದಕ್ಕಾಗಿ ನಾನು ನಮ್ಮ ಸರಕಾರವನ್ನೂ ಮತ್ತು ಕೇಂದ್ರ ಸರಕಾರವನ್ನೂ ವಂದಿಸಲು ಇಚ್ಛೆಪಡುತ್ತೇನೆ.

ಅನೇಕ ಸಾಮಾಜಿಕ ಮತ್ತು ಅರ್ಥಿಕ ಸಮಸ್ಯೆಗಳೇನಿವೆ ಅವನ್ನು ಬಗೆಹರಿಸಲು ತಕ್ಕ ಅವಕಾಶ ಮಾಡಿ ಮಾನ್ಯ ಅರ್ಥಿಕ ಸಚಿವರು ಒಂದು ಉತ್ತಮವಾದ ಬಜೆಟ್ಟನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಈ ಸರಕಾರ ಅಸ್ತಿತ್ವಕ್ಕೆ ಬಂದು ಬಹಳ ಕಡಮೆ ದಿವಸಗಳಾದರೂ ಕೂಡ ಕೇವಲ ಮೂರು ತಿಂಗಳಲ್ಲಿ ಮಾನ್ಯ ಅರ್ಥಿಕ ಸಚಿವರು ಬಹಳ ಶ್ರಮಪಟ್ಟು ವಿಷಯಗಳನ್ನು ಕ್ರೋಢೀಕರಿಸಿ ಈ ದೇಶದಲ್ಲಿ ಉತ್ತಮವಾದ ಸಂಪ್ರದಾಯವನ್ನು ಸ್ಥಾಪಿಸಬೇಕೆಂದು ಪದೇ ಪದೇ ಸಾಲ ಮಾಡುವ ಹವ್ಯಾಸ ಕೈಬಿಡಬೇಕೆಂದು ಅದಕ್ಕೆ ತಕ್ಕ ಕ್ರಮ ಕೈಕೊಂಡಿದ್ದಾರೆ. ಇನ್ನುಮುಂದೆ ಓವರ್ ಡ್ರಾಫ್ಟ್ ಆದಷ್ಟು ಕಡಮೆಮಾಡಬೇಕು ಹಾಗೆ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ. ಆದುದರಿಂದ ಇದಕ್ಕಾಗಿ ಅವರಿಗೆ ಧನ್ಯವಾದಗಳನ್ನರ್ಪಿಸಬೇಕಾದ್ದು ನಮ್ಮ ಕರ್ತವ್ಯ ಎಂದು ನಾನು ಭಾವಿಸುತ್ತೇನೆ.

ದೇಶದಲ್ಲಿರುವ ಕಡಮೆ ಸಂಬಳ ಬರುವ ನೌಕರರಿಗೆ ಮತ್ತು ಪೆನ್‌ಷನ್‌ದಾರರಿಗೆ ನಮ್ಮ ಅರ್ಥಿಕ ಪರಿಸ್ಥಿತಿ ಸರಿಯಾಗಿಲ್ಲದಿದ್ದರೂ ಸಹ 5 ರೂಪಾಯಿಯಿಂದ ಹಿಡಿದು 8 ರೂಪಾಯಿಗಳಿಗೆ ತುಟ್ಟಿ ಭತ್ಯ ಹೆಚ್ಚಿಸಿರುವುದು ಮೆಚ್ಚತಕ್ಕ ವಿಷಯವಾಗಿದೆ. ಹಣದ ಕೊರತೆಯಿದ್ದು ಅನೇಕ ತೊಂದರೆಗಳಿದ್ದಾಗ್ಯೂ ಕೂಡ ಲಕ್ಷಗಟ್ಟಲೆ ನೌಕರರ ಕಷ್ಟವನ್ನು ಗಮನಿಸಿ ಅವರಿಗೆ ಸಹಾಯ ನೀಡಿರುವುದನ್ನು ಗಮನಿಸಿ ನೌಕರರು ಹೆಚ್ಚಿನ ಉತ್ಸಾಹ ವಹಿಸಿ ಮುಂದೆ ಕೆಲಸ ನಿರ್ವಹಿಸುವರೆಂದು ಭಾವಿಸುತ್ತೇನೆ, ಇದಕ್ಕಾಗಿ ನಾವು ಸರಕಾರಕ್ಕೆ ವಂದನೆ ಸಲ್ಲಿಸಬೇಕಾದ್ದು ನಮ್ಮ ಆದ್ಯ ಕರ್ತವ್ಯವಾಗಿದೆ

ಇನ್ನು ವಿದ್ಯಾಭ್ಯಾಸದ ಬಗ್ಗೆ ಮಾನ್ಯ ಸಚಿವರು ಹೆಚ್ಚಿನ ಗಮನ ಕೊಟ್ಟಿದ್ದಾರೆ. ಈ ವರ್ಷ ಸುಮಾರು 222 ಹೈಯರ್ ಸೆಕೆಂಡರಿ ಪಾಠಶಾಲೆಗಳನ್ನು ಅಪ್‌ಗ್ರೇಡ್ ಮಾಡುವುದರ ಮೂಲಕ ಜೂನಿಯರ್ ಕಾಲೇಜುಗಳಾಗಿ ಅವನ್ನು ಮೇಲ್ದರ್ಜೆಗೆ ಏರಿಸಿದ್ದಾರೆ. ಇದು ಸಣ್ಣ ಸಂಖ್ಯೆಯಲ್ಲ. ಎರಡು ವರ್ಷದ ಈ ಕಾಲೇಜುಗಳನ್ನು ನಡೆಸಲು ಎಷ್ಟು ಖರ್ಚು ಬರುತ್ತದೆಂಬುದನ್ನು ಯೋಚನೆ ಮಾಡಬೇಕು. ಧೈರ್ಯ ಮಾಡಿ ಏನೇ ಆಗಲಿ ದೇಶದಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚು ಅವಕಾಶ ಮಾಡಿ ಕೊಡಬೇಕೆಂದು ಇದು ಆದ್ಯ ಕರ್ತವ್ಯವೆಂದು ವಿದ್ಯಾ ಇಲಾಖೆಯ ಮಂತ್ರಿಗಳು ಬಹಳ ಹುಮ್ಮಸ್ಸಿನಿಂದ ಹುರುಪಿನಿಂದ ಎಲ್ಲಾ ಕಡೆಯೂ ಸುಮಾರು 222 ಸ್ಥಳಗಳಲ್ಲಿ ಜೂನಿಯರ್ ಕಾಲೇಜುಗಳಿಗೆ ಅವಕಾಶ ಮಾಡಿದ್ದಾರೆ. ಆರ್ಥಿಕ ಸಚಿವರು ಅವರ ನೆರವಿಗೆ ಬಂದಿದ್ದಾರೆ, ಇದಕ್ಕೆ ಹಣ ಒದಗಿಸಲು ಮನಸ್ಸು ಮಾಡಿದ್ದಾರೆ. ನಮ್ಮ ದೇಶದಲ್ಲಿ ಸುಮಾರು 32,692 ಪ್ರೈಮರಿ ಶಾಲೆ ಇವೆ ಮತ್ತು 2060 ಹೈಯರ್ ಸೆಕೆಂಡರಿ ಶಾಲೆಗಳಿವೆ. ಇಷ್ಟು ಶಾಲೆಗಳಿರುವುದನ್ನು ನೋಡಿದರೆ ಇದೇನು ಕಡಿಮೆ ಸಂಖ್ಯೆಯಲ್ಲವೆಂದು ಭಾವಿಸುತ್ತೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಕೆಲವು ಕಡೆ ಶಾಲೆಗಳಲ್ಲಿ ಕೇವಲ 5 ಅಥವ 10 ಮಕ್ಕಳು ಮಾತ್ರ ಇದ್ದಾರೆಂದು ಹೇಳಿದ್ದು ನಂಬುವುದಕ್ಕೆ ಸಾಧ್ಯವಿಲ್ಲ. ನಾನು ನಮ್ಮ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಕೆಲವು ಕಡೆ ನೋಡಿದೆ. ವಿದ್ಯಾಭ್ಯಾಸದ ಪ್ರಗತಿಯ ಬಗ್ಗೆ ನಮ್ಮ ತಾಲ್ಲೂಕಿನ ಬಗ್ಗೆ ಹೇಳಬೇಕಾದರೆ ಪಾಠಶಾಲೆಯಿಲ್ಲದಿರುವ ಹಳ್ಳಿಗಳು ಕೇವಲ ನಾಲ್ಕೈದು ಮಾತ್ರ ಇವೆ. ಹಾಜರಾತಿ ಕೂಡ ಸೇಕಡ 70 ರಷ್ಟಿದೆ, ಸೇಕಡ 60 ಕ್ಕಿಂತ ಕಡಿಮೆ ಇಲ್ಲ ಎಂದು ಭಾವಿಸಿದ್ದೇನೆ. ಆದುದರಿಂದ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯಾಗಿದೆ ಎಂದು ಹೇಳಬಹುದು. ಇದಕ್ಕಾಗಿ ಸಾಕಾದಷ್ಟು ಹಣವನ್ನು ಕೂಡ ಕೊಡುತ್ತಿದ್ದಾರೆ. ಒಂದು ವಿಚಾರ ಮಾತ್ರ ಈ ಸಂದರ್ಭದಲ್ಲಿ ಹೇಳಲಿಷ್ಟಪಡುತ್ತೇನೆ.

1-00 P.M

ಇನ್ನು ಜೂನಿಯರ್ ಕಾಲೇಜನ್ನು ಪ್ರಾರಂಭ ಮಾಡುವಂಥ ಸಂದರ್ಭದಲ್ಲಿ ಸ್ವಲ್ಪ ಮಟ್ಟಿಗೆ ಸರ್ಕಾರದ ನೆರವು ಇದೆ ಎಂದು ತಿಳಿದುಕೊಂಡಿದ್ದೇನೆ. ಆ ರೀತಿ ಇಲ್ಲದಿದ್ದರೆ ಅವರಿಗೆ ನೆರವು ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲದೆ ಸರ್ಕಾರದವರು ಇನ್ನೂ ಒಂದು ಉತ್ತಮವಾದ ಕಾರ್ಯವನ್ನು ಮಾಡಿದ್ದಾರೆ. ಅದು ಏನೆಂದರೆ ಎಲ್ಲಾ ಮುನಿಸಿಪಾಲಿಟಿಗಳ ವಶದಲ್ಲಿದ್ದ ಮತ್ತು ತಾಲ್ಲೂಕು ಬೋರ್ಡ್ ವಶದಲ್ಲಿದ್ದ ಹೈಸ್ಕೂಲ್‌ಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಇದು ಶ್ಲಾಘನೀಯವಾದ ವಿಚಾರ.

Sri C. M. ARUMUGAM.—This is a general discussion on the budget. The Ministers should note down the points raised by the Hon Members. But the Ministers are engaged in attending to the files. This is not the place for looking into the files. I want to know whether it is correct on the part of the Ministers to do like this. The Hon. Speaker must consider this point and give a ruling. Some Hon. Ministers instead of being attentive are attending to the files and some are engaged in discussing something with others. I hope the Hon. speaker will kindly enlighten us by giving a ruling.

Sri A. R. BADARINARAYAN.—So far as my department is concerned, I am very watchful and making note of the points of the Education Department.

MADAM SPEAKER.—The Hon. Minister is attending to both listening and taking down points.

Sri C. M. ARUMUGAM.—We want your ruling in this regard. Your ruling will be noted down by other Assemblies in the country.

MADAM SPEAKER.—There is no bar in attending to the files when the Hon. Minister is listening and taking down the points also.

Sri K. H. PATIL.—We are hearing the points raised. We can also attend to the files.

Sri C. M. ARUMUGAM.—I want a specific ruling on this point.

MADAM SPEAKER.—I have reserved the ruling.

Sri D. DEVARAJ URS.—This practice of looking to the files as well as attending to the debate is not exclusive to this House only. Even in the House of Parliament this practice is in vogue. This practice was also in existence in the previous Assembly. As the Hon. Member has raised this point, I suggest to the Hon. Speaker to look into all these things and give a ruling.

ಶ್ರೀ ಬಿ. ಬೈರಪ್ಪಾಜಿ.—ಇನ್ನು ಮಾನ್ಯ ಸಚಿವರು ಭೂರಹಿತರಿಗೆ 3 ಲಕ್ಷ ಮನೆ ನಿವೇಶನಗಳನ್ನು ಒದಗಿಸುವ ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಇದು ಪ್ರಾಮುಖ್ಯವಾದ ವಿಚಾರ. ಈ ದೇಶದಲ್ಲಿ ಮನೆ ಇಲ್ಲದೇ ಇರತಕ್ಕಂಥಾವರು ಲಕ್ಷಾಂತರ ಮಂದಿ ವಾಸ ಮಾಡುತ್ತಾ ಇದ್ದಾರೆ. ಅವರಿಗೆ ಮುಫತ್ತಾಗಿ ಕೇಂದ್ರ ಸರ್ಕಾರದ ನೆರವಿನೊಡನೆ ಎಲ್ಲಾ ಜನಕ್ಕೂ ಸೈಟುಗಳನ್ನು ಹಂಚುವ ವ್ಯವಸ್ಥೆಯನ್ನು ಅತಿ ಶೀಘ್ರವಾಗಿ ಮಾಡಿದರೆ ಮನೆಯಿಲ್ಲದೆ ಇರತಕ್ಕಂಥ ಜನಗಳ ಸ್ಥಿತಿಯೂ ಕೂಡ ಸುಧಾರಣೆಯಾಗುತ್ತದೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ಈಗ 1,460 ಗ್ರಾಮಗಳಲ್ಲ ಕುಡಿಯುವ ನೀರಿನ ಸೌಲಭ್ಯ ಒದಗಿಸಲು 3 ಕೋಟಿ ರೂಪಾಯಿಗಳ ಅಂದಾಜು ಮಾಡಿದೆ ಎಂದು ಏನು ಹೇಳಿದ್ದಾರೋ ಆ ಕಾರ್ಯವನ್ನು ಈ ವರ್ಷವೆ ಮುಗಿಸುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಇದು ಬಹಳ ಮುಖ್ಯವಾದ ಗಹನವಾದ ವಿಚಾರ. ಕೆಲವು ಕಡೆ ರಿಗ್ಸ್‌ಗಳನ್ನಾದರೂ ಒದಗಿಸಿ ಈ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ಹೇಳಿ ಈ ಬಗ್ಗೆ ಸರ್ಕಾರವನ್ನು ಒತ್ತಾಯ ಮಾಡುತ್ತಾ ಈ ದಿವಸ ನನಗೆ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟ ಸಭಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.—The House will now adjourn to meet tomorrow at 1 P.M.

The House adjourned at Six Minutes past One of the Clock to meet again at One of the Clock on Friday, the 23rd June 1972.